ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ




ಅಗಲಿದ ಹಿರಿಯ ಜೀವ
ಕೋ. ಚನ್ನಬಸಪ್ಪನವರಿಗೆ ಅಂತಿಮ ನಮನಗಳು

ಸಂಪುಟ 13 | ಸಂಚಿಕೆ 10 | ಮಾರ್ಚ್ 4-10, 2019 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com



ಕೂಲಿಕಾರ ವಿರೋಧಿ ಮೋದಿ ಸರ್ಕಾರ



ಕೂಲಿ ಖಾತ್ರಿ ಇಲ್ಲದ ಉದ್ಯೋಗ ಖಾತ್ರಿ





ಸಾವಿರ ದಿನ ಪೂರೈಸಿದ ಕೇರಳ ಸರ್ಕಾರ



ಭಾರತ-ಪಾಕಿಸ್ತಾನ ಉದ್ವಿಗ್ನ ಪರಿಸ್ಥಿತಿ ಶಮನಕ್ಕೆ ಮುಂದಾಗಿ



ಈಕ್ವೇಡಾರ್: ಐಎಂಎಫ್ ನ ಸಾಲದ ಶೂಲಕ್ಕೆ ಬಲಿ

ನಮ್ಮ ವಾಯು ಪಡೆಯಿಂದ ಪರಿಣಾಮಕಾರಿ ಕಾರ್ಯಾಚರಣೆ–ಸೀತಾರಾಂ ಯೆಚುರಿ

“ಸಂಕುಚಿತ ಉನ್ಮಾದವನ್ನು ಹರಡುವ, ಉದ್ವಿಗ್ನತೆಯನ್ನು ಪ್ರಚೋದಿಸುವ ಪ್ರಯತ್ನ ಬೇಡ”

ಕೇಂದ್ರ ಸರಕಾರದ ಹಿರಿಯ ಮಂತ್ರಿಗಳು ಫೆಬ್ರುವರಿ 26 ರ ಸಂಜೆ ಪ್ರತಿಪಕ್ಷಗಳ ಮುಖಂಡರ ಸಭೆ ಕರೆದು ಭಾರತೀಯ ವಾಯು ಪಡ ಆ ದಿನ ಮುಂಜಾನೆ ನಡೆಸಿದ ಪ್ರಹಾರಗಳ ಬಗ್ಗೆ ತಿಳಿಸಿದರು. “ ನಮ್ಮ ವಾಯು ಪಡೆ ಒಂದು ಪರಿಣಾಮಕಾರಿ ಕಾರ್ಯಾಚರಣೆ ನಡೆಸಿದೆಯೆಂಬುದನ್ನು ಗಮನಿಸಿ ಉತ್ಸಾಹಭರಿತರಾಗಿದ್ದೇವೆ” ಎಂದು ಈ ಬಗ್ಗೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ತಮ್ಮ ಫೇಸ್‌ಬುಕ್ ಪುಟದಲ್ಲಿ ಹೇಳಿದ್ದಾರೆ.

ಇದೊಂದು “ಭಯೋತ್ಪಾದನಾ–ವಿರೋಧಿ” ಪ್ರಹಾರ ಮತ್ತು “ಸೈನಿಕೇತರ” ಸ್ವರೂಪದ್ದು ಎಂದು ಸರಕಾರ ಒತ್ತಿ ಹೇಳಿದೆ. ಈ ಹಿನ್ನೆಲೆಯಲ್ಲಿ ದೇಶದಲ್ಲಿ ಸಂಕುಚಿತ ದೇಶಭಕ್ತಿಯ ಉನ್ಮಾದವನ್ನು ಎಬ್ಬಿಸುವ ಮತ್ತು ಉದ್ರಿಕ್ತತೆಯನ್ನು ಪ್ರಚೋದಿಸುವ ಪ್ರಯತ್ನಗಳು ನಡೆಯಬಾರದು ಎಂದು ನಾವು ಹೇಳಿದೆವು ಎಂದು ಯೆಚುರಿ ತಿಳಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಉಂಟಾಗಿರುವ ಆತಂಕ ಮತ್ತು ಅಭದ್ರತೆಯ ಭಾವವನ್ನು ತಗ್ಗಿಸಬೇಕು, ಅದು ಹಬ್ಬದಂತೆ ಕೇಂದ್ರ ಸರಕಾರ ನೋಡಿಕೊಳ್ಳಬೇಕು. ಸಂವಿಧಾನದ 370ನೇ ಕಲಮು, 35ಎ ಕಲಮು ಮುಂತಾದ ವಿವಾದಾಸ್ಪದ ವಿಷಯಗಳನ್ನು ಈಗ ಎತ್ತುವುದು ತದ್ವಿರುದ್ಧವಾದ ಮತ್ತು ಅನಾಹುತಕಾರಿ ಪರಿಣಾಮಗಳನ್ನು ಬೀರುತ್ತದೆ ಎಂದಿರುವ ಯೆಚುರಿಯವರು “ಭಾರತದ ಬೇರೆ ಭಾಗಗಳಲ್ಲಿ ವಾಸಿಸುತ್ತಿರುವ ಕಾಶ್ಮೀರಿಗಳ ಮೇಲೆ ಹಲ್ಲೆಗಳನ್ನು ನಡೆಸಲು ಸರಕಾರ ಬಿಡಬಾರದು. ಇದು ಭಾರತದ ಐಕ್ಯತೆ ಮತ್ತು ಸಮಗ್ರತೆಯನ್ನು ಗಟ್ಟಿಗೊಳಿಸುವುದಿಲ್ಲ, ಬದಲಾಗಿ ನಾಶ ಮಾಡುತ್ತದೆ” ಎಂದು ಎಚ್ಚರಿಸಿದ್ದಾರೆ.

ಹತೋಟಿ ರೇಖೆ ಮತ್ತು ಗಡಿ ಪ್ರದೇಶಗಳಲ್ಲಿ ವಾಸಿಸುತ್ತಿರುವ ನಮ್ಮ ಜನಗಳ ಪರಿಸ್ಥಿತಿಯ ಬಗ್ಗೆ ಆತಂಕ ಉಂಟಾಗಿದೆ. ಅವರನ್ನು ಸುರಕ್ಷಿತ ಪ್ರದೇಶಗಳಿಗೆ ಒಯ್ಯಬೇಕಾಗಿದೆ, ಏಕೆಂದರೆ ಈಗಾಗಲೇ ಅಲ್ಲಿ ಭಾರೀ ಗುಂಡು ಹಾರಾಟಗಳು ನಡೆಯುತ್ತಿವೆ, ಈ ಬಗ್ಗೆ ಆದ್ಯತೆಯ ಮೇಲೆ ಸಾಕಷ್ಟು ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

ಪುಲ್ವಾಮದಲ್ಲಿ ಗುಪ್ತಚರ ವಿಫಲತೆಯಾಗಿದೆ ಎಂದು ಜಮ್ಮು ಮತ್ತು ಕಾಶ್ಮೀರದ ರಾಜ್ಯಪಾಲರು ಹೇಳಿದ್ದಾರೆ. ಉರಿ, ಪಠಾಣಕೋಟ್ ಮತ್ತು ಗುರುದಾಸ್ಪುರ್‌ದಲ್ಲೂ ಆಗಿರುವ ಇಂತಹ ವಿಫಲತೆಗಳು ಮರುಕಳಿಸಬಾರದು. ಅದರಿಂದಾಗಿ ನಮ್ಮ ಹಲವು ಯುವ ಸೈನಿಕರು ಪ್ರಾಣ ಕಳಕೊಳ್ಳುವಂತಾಗಿದೆ, ನಮ್ಮ ಇನ್ನಷ್ಟು ಜನಗಳನ್ನು ಕಳಕೊಳ್ಳುವಂತಾಗಬಾರದು ಎಂದು ಯೆಚುರಿ ಈ ಸಂದರ್ಭದಲ್ಲಿ ಹೇಳಿದ್ದಾರೆ.

ಸಂವಿಧಾನದ ವಿಧಿ 35ಎ ಯನ್ನು ಮುಟ್ಟಬೇಡಿ–ಸಿಪಿಐ(ಎಂ) ಪೊಲಿಟ್ ಬ್ಯುರೊ

ಸಂವಿಧಾನದ 35ಎ ವಿಧಿಯನ್ನು ತೆಗೆದು ಹಾಕುವ ಪ್ರಯತ್ನಗಳ ವರದಿಗಳು ಕಾಶ್ಮೀರದ ಜನತೆಯನ್ನು ಮತ್ತು ಅಲ್ಲಿನ ಎಲ್ಲ ಛಾಯೆಗಳ ರಾಜಕೀಯ ಅಭಿಪ್ರಾಯದವರನ್ನು ವಿಚಲಿತಗೊಳಿಸಿದೆ. ಸುಪ್ರಿಂ ಕೋರ್ಟಿನಲ್ಲಿ ಇದಕ್ಕೆ ಸವಾಲು ಹಾಕಿರುವ ಅರ್ಜಿಯ ವಿಚಾರಣೆ ಮತ್ತು ಕೇಂದ್ರ ಸರಕಾರ ವಿಷಯದಲ್ಲಿ ತನ್ನ ನಿಲುವನ್ನು ಸ್ಪಷ್ಟಪಡಿಸಿಲ್ಲ ಎಂಬ ಸಂಗತಿಯ ಹಿನ್ನೆಲೆಯಲ್ಲಿ ಇದು ಉಂಟಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಸಂವಿಧಾನದ 35ಎ ವಿಧಿ ಜಮ್ಮು ಮತ್ತು ಕಾಶ್ಮೀರದ ವಿಧಾನ ಮಂಡಲಕ್ಕೆ ಆ ರಾಜ್ಯದ ಖಾಯಂ ನಿವಾಸಿಗಳು ಯಾರು ಮತ್ತು ಅವರ ಹಕ್ಕುಗಳೇನು ಎಂದು ನಿರೂಪಿಸುವ ಅಧಿಕಾರವನ್ನು ಕೊಟ್ಟಿದೆ. ಇದರಲ್ಲಿ ಕೈಯಾಡಿಸುವ ಯಾವುದೇ ಪ್ರಯತ್ನ ಮೂಲಭೂತವಾಗಿ ಸಂವಿಧಾನದ 370ನೇ ವಿಧಿಯ ಅಡಿಯಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ ಕೊಡಮಾಡಿರುವ ವಿಶೇಷ ಸ್ಥಾನಮಾನಕ್ಕೆ ಅನಾಹುತ ಉಂಟು ಮಾಡುತ್ತದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ 35ಎ ವಿಧಿಯಲ್ಲಿ ಹಸ್ತಕ್ಷೇಪದ ನಡೆಗೆ ತನ್ನ ಬಲವಾದ ವಿರೋಧವನ್ನು ವ್ಯಕ್ತಪಡಿಸಿದೆ. ಈ ವಿಧಿಯನ್ನು ಸಂವಿಧಾನದಲ್ಲಿ ಈಗಿರುವಂತೆಯೇ ಉಳಿಸಿಕೊಳ್ಳಲಾಗುತ್ತದೆ ಎಂಬ ಸಾರ್ವಜನಿಕ ವಚನವನ್ನು ಕೇಂದ್ರ ಸರಕಾರ ನೀಡಬೇಕು ಎಂದು ಅದು ಆಗ್ರಹಿಸಿದೆ.

ಮಂಗಳೂರು ಸೇರಿದಂತೆ 6 ವಿಮಾನ ನಿಲ್ದಾಣಗಳ ಖಾಸಗೀಕರಣಕ್ಕೆ ಆತುರದ ವ್ಯವಹಾರ–ಸಿಐಟಿಯು ಖಂಡನೆ

ರಾಷ್ಟ್ರೀಯ ಖಜಾನೆಯಿಂದ ಪ್ರೀತಿ ಪಾತ್ರ ಕಾರ್ಪೊರೇಟ್‌ಗೆ ಮೋದಿ ಸರಕಾರದ ಚುನಾವಣಾ–ಪೂರ್ವ ಬಕ್ಷೀಸು

ಆರು ವಿಮಾನ ನಿಲ್ದಾಣಗಳನ್ನು ಆರಿಸಿದ ಖಾಸಗಿ ಕುಳಕ್ಕೆ ವಹಿಸಿ ಕೊಡುವ ತರಾತುರಿ ನಡೆಯುತ್ತಿದೆ ಎಂದು ಸಿಐಟಿಯು ಖಂಡಿಸಿದೆ. ಅಹಮದಾಬಾದ್, ಜೈಪುರ, ಲಕ್ನೌ, ತಿರುವನಂತಪುರ, ಗುವಾಹಾಟಿ ಮತ್ತು ಮಂಗಳೂರು ವಿಮಾನ ನಿಲ್ದಾಣಗಳನ್ನು ಪ್ರಸಕ್ತ ಸರಕಾರದ ಅತ್ಯಂತ ಪ್ರೀತಿಪಾತ್ರ ಖಾಸಗಿ ಕಾರ್ಪೊರೇಟ್ ಆಗಿರುವ ಅಡಾಣಿ ಗುಂಪಿಗೆ ಒಂದು ದೊಡ್ಡ ಬಕ್ಷೀಸಾಗಿ ಕೊಡಮಾಡಲಾಗುತ್ತಿರುವಂತೆ ಕಾಣುತ್ತಿದೆ. ಇದರಲ್ಲಿ ಮಂಗಳೂರು ಬಿಟ್ಟು ಉಳಿದ ಐದು ವಿಮಾನ ನಿಲ್ದಾಣಗಳು ರಾಜ್ಯಗಳ ರಾಜಧಾನಿಗಳಲ್ಲಿ ಇರುವಂತವು ಎಂದಿರುವ ಸಿಐಟಿಯು, ಚುನಾವಣೆಯ ಘೋಷಣೆಯ ಮೊದಲೇ ಈ ವ್ಯವಹಾರವನ್ನು ಪೂರ್ಣಗೊಳಿಸಬೇಕೆನ್ನುವ ಗುರಿ ಇಟ್ಟುಕೊಂಡಿರುವಂತೆ ಕಾಣಬರುತ್ತಿದೆ ಎಂದು ಹೇಳಿದೆ.

ಇವೆಲ್ಲ ಕೇವಲ ವಿಮಾನ ನಿಲ್ದಾಣಗಳಷ್ಟೇ ಅಲ್ಲ, ನಮ್ಮ ರಾಷ್ಟ್ರೀಯ ಆಸ್ತಿಗಳು. ಕಳೆದ ಒಂದು ದಶಕದಲ್ಲಿ ವಿಮಾನ ನಿಲ್ದಾಣಗಳ ಪ್ರಾಧಿಕಾರ (ಎಎಐ) ತೆರಿಗೆದಾರರ ಸಾವಿರಾರು ಕೋಟಿ ರೂ.ಗಳನ್ನು ಖರ್ಚು ಮಾಡಿ ಇವನ್ನು ಅಭಿವೃದ್ಧಿ ಪಡಿಸಿದೆ ಮತ್ತು ಆಧುನೀಕರಿಸಿದೆ. ಈಗ ಮೋದಿ ಸರಕಾರ ತನ್ನ ಅಧಿಕಾರಾವಧಿ ಕೊನೆಗೊಳ್ಳುತ್ತ ಬರುತ್ತಿದ್ದರೂ, ಈ ಸಿದ್ಧಗೊಳಿಸಿರುವ, ಅದಾಗಲೇ ಕೆಲಸ ನಿರ್ವಹಿಸುತ್ತಿರುವ ಮತ್ತು ಲಾಭ ಮಾಡುತ್ತಿರುವ ವಿಮಾನ ನಿಲ್ದಾಣಗಳನ್ನು ಖಾಸಗಿ ಕೈಗಳಿಗೆ ಒಪ್ಪಿಸುವ ಆತುರದಲ್ಲಿ ಇದೆ ಎಂಬುದು ಸ್ಪಷ್ಟವಾಗಿ ಕಾಣುತ್ತಿದೆ ಎಂದು ಸಿಐಟಿಯು ಹೇಳಿದೆ.

ಅಪಾರ ರಿಯಲ್ ಎಸ್ಟೇಟ್ ಆಸ್ತಿಗಳೂ ಇರುವ ಈ ಸಿದ್ಧ, ಆಧುನೀಕೃತ ವಿಮಾನ ನಿಲ್ದಾಣಗಳನ್ನು ವಹಿಸಿ ಕೊಡಲು ಬಿಜೆಪಿ ಸರಕಾರ ಹೊಸ ವಿಧಿ–ವಿಧಾನಗಳನ್ನೇ ಸಂಶೋಧಿಸಿದೆ. ಬಹುಶಃ ಈ ಸಾಕಷ್ಟು ನವೀನತಮ ಅಂಶಗಳು ಕಾರ್ಪೊರೇಟ್‌ಗಳೊಂದಿಗೆ ತನ್ನ ಇತ್ತೀಚಿನ ಚುನಾವಣಾ–ಪೂರ್ವ ವ್ಯವಹಾರಗಳಿಗಾಗಿ, ತಮ್ಮ ಅತ್ಯಂತ ಪ್ರೀತಿಪಾತ್ರ ಖಾಸಗಿ ಖರೀದಿದದಾರರಿಗೆ ಒಂದು ದೊಡ್ಡ ಬಕ್ಷೀಷು ಕೊಡಮಾಡುವುದಕ್ಕಾಗಿ ಇರಬಹುದು. ಇವನ್ನು ವಹಿಸಿಕೊಳ್ಳುವ ಖಾಸಗಿಯವರು ಪ್ರತಿತಿಂಗಳು ಪ್ರತಿ ಪ್ರಯಾಣಿಕರಿಗೆ ರೂ.115ರಿಂದ ರೂ.174 ನ್ನು ವಿಮಾನ ನಿಲ್ದಾಣಗಳ ಪ್ರಾಧಿಕಾರಕ್ಕೆ ಕೊಟ್ಟರೆ ಸಾಕು. ಈ ವಿಮಾನ ನಿಲ್ದಾಣಗಳ ರಿಯಲ್ ಎಸ್ಟೇಟ್ ಆಸ್ತಿಗಳು, ಮತ್ತು ಅವಕ್ಕೆ ಹೊಂದಿಕೊಂಡಂತಿರುವ ಅಪಾರ ವಾಣಿಜ್ಯ ಜಾಗಗಳಿಂದ ಬರುವ ಅಪಾರ ವೈಮಾನಿಕೇತರ ವಾಣಿಜ್ಯ ಆದಾಯಗಳನ್ನು ಪ್ರಾಧಿಕಾರದೊಂದಿಗೆ ಹಂಚಿಕೊಳ್ಳುವ ಅಂಶ ಇದರಲ್ಲಿ ಇಲ್ಲ. ವಾಸ್ತವವಾಗಿ ಈಗ ಮಾರಾಟಕ್ಕಿಟ್ಟಿರುವ ವಿಮಾನ ನಿಲ್ದಾಣಗಳಲ್ಲಿ ಇಂತಹ ವೈಮಾನಿಕೇತರ ಆದಾಯದ ಪ್ರಮಾಣವೇ ಬಹಳ ಹೆಚ್ಚು ಎಂಬ ಸಂಗತಿಯತ್ತ ಸಿಐಟಿಯು ಗಮನ ಸೆಳೆದಿದೆ.

ಈ ಆರು ವಿಮಾನ ನಿಲ್ದಾಣಗಳ ಖಾಸಗೀಕರಣದ ನಂತರ ವಿಮಾನ ನಿಲ್ದಾಣ ಪ್ರಾಧಿಕಾರ 90ದಿನಗಳೊಳಗೆ 2500 ಕೋಟಿ ರೂ. ಪಡೆಯುತ್ತದೆ, ಆಮೇಲೆ ಪ್ರತಿವರ್ಷ ರಿಯಾಯ್ತಿ ಶುಲ್ಕವಾಗಿ 525 ಕೋಟಿ ರೂ.ಗಳನ್ನು ಪಡೆಯುತ್ತದೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಆದರೆ ಈ ಆರು ನಿಲ್ದಾಣಗಳ ಆಧುನೀಕರಣ ಮತ್ತು ಅಭಿವೃದ್ಧಿಗೆ ಪ್ರಾಧಿಕಾರ ಹೂಡಿರುವ ಹಣದ ಮೊತ್ತವನ್ನು ಪರಿಗಣಿಸಿದರೆ ಇದು ಅತ್ಯಲ್ಪ ಪ್ರತಿಫಲ. ಈ ಹೋಲಿಕೆ ಮತ್ತು ದೇಶದಲ್ಲಿ ವಿಮಾನಯಾನ ವಲಯ ವೇಗವಾಗಿ ವಿಸ್ತರಣೆಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಆದಾಯ ದೊಡ್ಡ ಪ್ರಮಾಣದಲ್ಲಿ ಹೆಚ್ಚಲಿದೆ ಎಂಬ ಸಂಗತಿಯನ್ನೂ ಇಲ್ಲಿ ಗಮನಕ್ಕೆ ತಗೊಳ್ಳಬೇಕಾಗಿದೆ. ಹಾಗೆ ನೋಡಿದಾಗ, ರಾಷ್ಟ್ರೀಯ ಖಜಾನೆಗೆ ಮತ್ತು ರಾಷ್ಟ್ರೀಯ ಹಿತಾಸಕ್ತಿಗೂ ತುಂಬಲಾಗದ ನಷ್ಟವನ್ನು ಉಂಟು ಮಾಡಿ ಮೋದಿ ಸರಕಾರ ಈ ಚುನಾವಣಾ–ಪೂರ್ವ ವ್ಯವಹಾರದ ಮೂಲಕ ತನ್ನ ಅತ್ಯಂತ ಪ್ರೀತಿಪಾತ್ರ ಖಾಸಗಿ ಕುಳಕ್ಕೆ ಒಂದು ದೊಡ್ಡ ಬಕ್ಷೀಸು ನೀಡಿದೆ ಎಂದು ಸಿಐಟಿಯು ಈ ಖಾಸಗೀಕರಣವನ್ನು ವರ್ಣಿಸಿದೆ.

ವಿಮಾನಯಾನ ವಲಯದ ನಿರ್ವಹಣೆ ಮತ್ತು ಹಣಕಾಸು ದಕ್ಷತೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಈ ಆರು ವಿಮಾನ ನಿಲ್ದಾಣಗಳನ್ನು ಖಾಸಗೀಕರಿಸುವ ತುರ್ತು ಏನೂ ಇಲ್ಲ. ಭಾರತದ ವಿಮಾನ ನಿಲ್ದಾಣಗಳ ಪ್ರಾಧಿಕಾರ ದೇಶದ ಸುಮಾರಾಗಿ ಎಲ್ಲ ದೊಡ್ಡ ವಿಮಾನ ನಿಲ್ದಾಣಗಳನ್ನು ಯಶಸ್ವಿಯಾಗಿ ಅಭಿವೃದ್ಧಿ ಪಡಿಸಿದೆ, ಅಪಾರ ಹೂಡಿಕೆಗಳನ್ನು ಮಾಡಿ ಆಧುನೀಕರಿಸಿದೆ ಮತ್ತು ಹಣಕಾಸಿನ ದೃಷ್ಟಿಯಿಂದಲೂ, ನಿರ್ವಹಣೆಯ ದೃಷ್ಟಿಯಿಂದಲೂ ಈ ಬಹುಮುಖ್ಯ ಮೂಲರಚನೆಯನ್ನು ಅತ್ಯಂತ ಯಶಸ್ವಿಯಾಗಿಯೇ ನಡೆಸುತ್ತ ಬಂದಿದೆ. ಆದರೂ ಈಗ ಈ ವಲಯದಲ್ಲಿ ಏನೇನೂ ಅನುಭವವಿಲ್ಲದ ಅಡಾಣಿ ಗುಂಪಿನಂತಹ ಹೊಸ ನಿರ್ವಾಹಕರಿಗೆ ಈ ವಿಮಾನ ನಿಲ್ದಾಣಗಳನ್ನು ವಹಿಸಿ ಕೊಡಲಾಗುತ್ತಿದೆ. ಇದು ಈ ಹೊಸ ನಿರ್ವಾಹಕರ ಪ್ರಯೋಜನಕ್ಕಾಗಿಯೇ ಹೊರತು, ವಿಮಾನ ನಿಲ್ದಾಣಗಳ ನಿರ್ವಹಣೆಯನ್ನು ಉತ್ತಮಪಡಿಸಲಿಕ್ಕಂತೂ ಖಂಡಿತಾ ಅಲ್ಲ ಎಂದು ಸಿಐಟಿಯು ಅಭಿಪ್ರಾಯ ಪಟ್ಟಿದೆ.

ಆದ್ದರಿಂದ ಸರಕಾರ ನಡೆಸಿರುವ ಈ ಆತುರದ ಚುನಾವಣಾ–ಪೂರ್ವ ವ್ಯವಹಾರವು ಖಾಸಗಿ ಕಾರ್ಪೊರೇಟ್‌ಗಳಿಂದ ರಾಷ್ಟ್ರೀಯ ಆಸ್ತಿಗಳ ಮತ್ತು ಮೂಲರಚನೆಯ ಲೂಟಿಯಲ್ಲದೆ ಬೇರೇನೂ ಅಲ್ಲ ಎಂದು ಸಿಐಟಿಯು ಬಲವಾಗಿ ಖಂಡಿಸಿದೆ. ಈ ಆರು ವಿಮಾನ ನಿಲ್ದಾಣಗಳ ಖಾಸಗೀಕರಣವನ್ನು ಒಟ್ಟಾರೆಯಾಗಿ ಸಮಸ್ತ ಕಾರ್ಮಿಕ ವರ್ಗ ಮತ್ತು ನಿರ್ದಿಷ್ಟವಾಗಿ ದೇಶದ ಕಾರ್ಮಿಕ ಆಂದೋಲನ ದೇಶವ್ಯಾಪಿ ಚಳುವಳಿಗಳು ಮತ್ತು ಹೋರಾಟಗಳ ಮೂಲಕ ವಿರೋಧಿಸಬೇಕು ಮತ್ತು ಪ್ರತಿರೋಧಿಸಬೇಕು ಎಂದು ಸಿಐಟಿಯು ಕರೆ ನೀಡಿದೆ.

ಐಸಿಡಿಎಸ್ ಉಳಿಸಿ–40 ಲಕ್ಷ ಸಹಿಗಳೊಂದಿಗೆ ಅಂಗನವಾಡಿ ನೌಕರರ ‘ಸಂಸತ್ ಚಲೋ’

ಎಲ್ಲೆಡೆಗಳಿಂದ ದೇಶದ ರಾಜಧಾನಿಗೆ ಬಂದಿದ್ದ ನೂರಾರು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಫೆಬ್ರುವರಿ 25 ರಂದು ಮಂಡಿ ಹೌಸ್‌ನಿಂದ ಸಂಸತ್ ಭವನದ ವರೆಗೆ ಮೆರವಣಿಗೆ ನಡೆಸಿ ಅಲ್ಲಿ ಒಂದು ದೊಡ್ಡ ರ್‍ಯಾಲಿ ನಡೆಸಿದರು. ಅಖಿಲ ಭಾರತ ಅಂಗನವಾಡಿ ನೌಕರರು ಮತ್ತು ಸಹಾಯಕಿಯರ ಸಂಘದ (ಎಐಎಫ್‌ಎಡಬ್ಲ್ಯುಹೆಚ್) ನೇತೃತ್ವದಲ್ಲಿ ಇದು ನಡೆಯಿತು. ಐಸಿಡಿಎಸ್ ಅಂದರೆ ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆಯನ್ನು ಉಳಿಸಿ ಬಲಪಡಿಸಬೇಕು ಮತ್ತು ಅಂಗನವಾಡಿ ಕಾರ್ಯಕರ್ತೆಯರ ದುಡಿಮೆಯ ಪರಿಸ್ಥಿತಿಗಳನ್ನು ಉತ್ತಮಪಡಿಸಬೇಕು ಎಂದು ಕೇಂದ್ರ ಸರಕಾರವನ್ನು ಆಗ್ರಹಿಸುವ ಮನವಿ ಪತ್ರಕ್ಕೆ ದೇಶಾದ್ಯಂತ ಸಂಗ್ರಹಿಸಿದ 40 ಲಕ್ಷ ಸಹಿಗಳನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗಳಿಗೆ ಸಲ್ಲಿಸಲಾಯಿತು.

ಸಂಸತ್ತಿನ ಬಳಿ ನಡೆದ ರ್‍ಯಾಲಿಯನ್ನುದ್ದೇಶಿಸಿ ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್, ಅಧ್ಯಕ್ಷರಾದ ಡಾ. ಹೇಮಲತಾ, ಎಐಎಫ್‌ಎಡಬ್ಲ್ಯುಹೆಚ್ ಪ್ರಧಾನ ಕಾರ್ಯದರ್ಶಿ ಎ.ಆರ್. ಸಿಂಧು ಮತ್ತು ಅಧ್ಯಕ್ಷರಾದ ಉಷಾರಾಣಿ ಮತ್ತಿತರ ಮುಖಂಡರು ಮಾತನಾಡಿದರು.

ಅಂಗನವಾಡಿ ಕಾರ್ಯಕರ್ತೆಯರ ಸೇವೆಯನ್ನು ನಿಯಮಿತಗೊಳಿಸಬೇಕು, ಅವರಿಗೆ ತಿಂಗಳಿಗೆ 18,000 ರೂ. ಕನಿಷ್ಟ ಸಂಬಳ ದೊರೆಯುವಂತಾಗಬೇಕು ಎಂಬ ಬಹು ಕಾಲದ ಬೇಡಿಕೆಗಳನ್ನು ಈಡೇರಿಸದೆ ಅವರಿಗೆ ನೀಡುವ ಪ್ರತಿಫಲದಲ್ಲಿ ತುಸು ಹೆಚ್ಚಳ ಮಾಡುವುದಾಗಿ ಪ್ರಧಾನ ಮಂತ್ರಿಗಳು ಭಾರೀ ಜಯಕಾರಗಳ ನಡುವೆ ಪ್ರಕಟಿಸಿದರು. ಆದರೆ ಅದನ್ನೂ ದೇಶದ ಹೆಚ್ಚಿನ ಭಾಗಗಳಲ್ಲಿ ಜಾರಿಗೆ ತಂದಿಲ್ಲ. ಅಲ್ಲದೆ ನಂತರ ಮಂಡಿಸಿದ ಬಜೆಟಿನಲ್ಲೂ ಇದನ್ನು ಜಾರಿಗೊಳಿಸಲು ಅಗತ್ಯವಾದ ಹಣವನ್ನು ಒದಗಿಸಿಲ್ಲ. ಇದನ್ನು ಬಲವಾಗಿ ಖಂಡಿಸಲಾಯಿತು.



ಮಕ್ಕಳ ಆಹಾರ, ಆರೋಗ್ಯ ಮತ್ತು ಶಿಕ್ಷಣದ ಹಕ್ಕಾಗಿ ಐಸಿಡಿಎಸ್‌ನ್ನು ಪೂರ್ಣ ಸೌಕರ್ಯಗಳೊಂದಿಗೆ ಸಂಸ್ಥೀಕರಿಸುವುದು, ಮತ್ತು ಈ ಯೋಜನೆಯ ಜಾರಿಯಲ್ಲಿ ಕೆಲಸ ಮಾಡುತ್ತಿರುವ ನೌಕರರ ಕನಿಷ್ಟ ಕೂಲಿ ಹಾಗೂ ಪೆನ್ಶನ್ ವಿಚಾರಗಳನ್ನು ಜನಗಳ ನಡುವೆ ಒಯ್ಯುವುದಾಗಿ ರ್‍ಯಾಲಿಯಲ್ಲಿ ನಿರ್ಧರಿಸಲಾಯಿತು. ಮತ್ತು ಮುಂಬರುವ ಸಂಸದೀಯ ಚುನಾವಣೆಗಳಲ್ಲಿ ಐಸಿಡಿಎಸ್–ವಿರೋಧಿ ಮತ್ತು ಕಾರ್ಮಿಕ–ವಿರೋಧಿ ಬಿಜೆಪಿ ಸರಕಾರ ಸೋಲುಣ್ಣುವಂತೆ ಎಐಎಫ್‌ಎಡಬ್ಲ್ಯುಹೆಚ್ ಮಾಡುವುದಾಗಿಯೂ ನಿರ್ಧರಿಸಲಾಯಿತು.


ಸಂಪಾದಕೀಯ

ಕದಡಿದ ನೀರಿನಲ್ಲಿ ಮೀನು ಹಿಡಿಯುವವರು

ಶಾಂತಿ ಕದಡಿದೆ. ಭಾರತ–ಪಾಕಿಸ್ತಾನ ಎರಡು ಸಹೋದರ ರಾಷ್ಟ್ರಗಳ ನಡುವೆ ಕ್ಷೋಭೆ ಉಂಟಾಗಿದೆ. ಎರಡೂ ದೇಶಗಳ ನಡುವೆ ನಡೆಯಬಹುದಾದ ಮಿಲಿಟರಿ ಘರ್ಷಣೆಗೆ ಎರಡೂ ದೇಶಗಳ ಜನತೆ ದುಬಾರಿ ಬೆಲೆ ತೆರಬೇಕಾದಬಹುದು. ಅಪಾರ ಜೀವಹಾನಿಗೆ ಕಾರಣ ಆಗಬಹುದು. ದೇಶ ಸೇವೆಗಾಗಿ ತಮ್ಮನ್ನು ಸಮರ್ಪಿಸಿಕೊಂಡಿರುವ ಎರಡೂ ರಾಷ್ಟಗಳ ಯೋಧರು ಸಾವುನೋವು ಅಪ್ಪಿಕೊಳ್ಳಬೇಕಾದೀತ್ತೂ. ಅವರ ಮಡದಿಯರು ವಿಧುವೆಯರಾಗಬೇಕಾಗಬಹುದು. ಅವರ ನೆಚ್ಚಿನ ಮಕ್ಕಳು ಅನಾಥರಾಗಬೇಕಾಬಹುದು. ಮನೆ ಮನೆಗಳಲ್ಲಿ ದುಃಖವನ್ನು ಉಕ್ಕಿಸುವ ಯುದ್ಧವೆಂಬ ಅತಿ ಕ್ರೂರ ಭಯೋತ್ಪಾದನೆ ನಮಗೆ ಬೇಕಾ? ಇದನ್ನು ತಡೆಗಟ್ಟಲು ಸಾಧ್ಯವಿಲ್ಲವೆ? ಗಡಿಗಳಿಲ್ಲದ ಒಂದು ವಿಶ್ವವನ್ನು ಬಯಸುವುದು ತಪ್ಪಾ?

ಗಡಿಗಳು ಇರುವ ವರೆಗೂ ಗಡಿವಿವಾದಗಳು ಇರಲಿವೆ. ಆದರೆ ಯುದ್ಧದಿಂದ ಗಡಿ ವಿವಾದ ಪರಿಹಾರ ಆಗದು. ಗಡಿವಿವಾದ ಮಾತ್ರವಲ್ಲ; ಯಾವುದೇ ವಿವಾದ ಯುದ್ಧದಿಂದ ಪರಿಹಾರವಾಗದು. ಶಾಂತಿ, ಸೌಹಾರ್ದತೆ ದೌರ್ಬಲ್ಯವಲ್ಲ. ಸಂಧಾನಕ್ಕಾಗಿ ಬಾಗಿಲು ತೆರೆಯುವುದು ಶರಣಾಗತಿ ಅಲ್ಲ. ಸೆರೆ ಹಿಡಿದ ಪೈಲಟನ್ನು ಬೇಷರತ್ತಾಗಿ ಬಿಡುಗಡೆ ಮಾಡಲು ಮುಂದಾಗಿರುವ ಪಾಕಿಸ್ತಾನದ ಕ್ರಮ ಅದರ ದೌರ್ಬಲ್ಯ ಎಂದು ಪರಿಗಣಿಸಬೇಕಾಗಿಲ್ಲ. ಇದರಿಂದಾಗಿ ಎರಡೂ ರಾಷ್ಟಗಳ ನಡುವೆ ಉಂಟಾಗಿರುವ ಉದ್ವಿಗ್ನತೆ ಶಮನಗೊಳ್ಳುವುದಾದರೆ ಇದಕ್ಕಿಂತ ಒಳ್ಳೆಯದು ಬೇರೆ ಏನಿದೆ?

ಭಾರತ ಪಾಕಿಸ್ತಾನ ನಡುವಿನ ಈ ಅಂತಕಾರಿ ಬೆಳವಣಿಗೆ ಇನ್ನೊಂದು ಕೆಟ್ಟ ಆಯಾಮ ಪಡೆಯುತ್ತಿರುವುದು ಖೇದದ ಸಂಗತಿಯಾಗಿದೆ. ಅದುವೆ ಕದಡಿದ ನೀರಿನಲ್ಲಿ ಮೀನು ಹಿಡಿಯುವ ಪ್ರವೃತ್ತಿ ; ಸ್ಪಷ್ಟವಾಗಿ ಹೇಳುವುದಾದರೆ, ಅದು ಯುದ್ಧ ರಾಜಕಾರಣ ; ಯುದ್ಧದಂತಹ ಒಂದು ದುರಂತವನ್ನು ರಾಜಕೀಯ ಲಾಭಕ್ಕಾಗಿ, ಚುನಾವಣೆಯಲ್ಲಿ ಸೀಟು ಗೆಲ್ಲುವುದಕ್ಕಾಗಿ ಬಳಸಿಕೊಳ್ಳವುದು!



ಎರಡೂ ದೇಶಗಳ ಜನಸಾಮಾನ್ಯರು, ಆತಂಕದ ಕ್ಷಣಗಳನ್ನು ಕಳೆಯುತ್ತಿರುವಾಗ, ಮೋದಿಯವರು ತಮ್ಮ ಪಕ್ಷದ ಕಾರ್ಯಕರ್ತರಿಗಾಗಿ ಒಂದು ವಿಡಿಯೋ ಕಾನ್ಫರೆನ್ಸ ನಡೆಸುತ್ತಾ "ಮೇರಾ ಬೂತ್ ಸಬ್ ಸೇ ಮಜಬೂತ್" (ನನ್ನ ಮತಗಟ್ಟೆ ಉಳಿದೆಲ್ಲರಿಗಿಂತ ಗಟ್ಟಿ) ಎನ್ನುತ್ತಾರೆ. ಈ ಮಾತುಗಳನ್ನು ಬೇರೆ ಬೇರೆ ರೀತಿಯಲ್ಲಿ ಅರ್ಥಮಾಡಿಕೊಳ್ಳಬಹುದು. ಯುದ್ಧದ ಬೆಂಕಿಯಲ್ಲಿ ತಮ್ಮ ಬೇಳೆಕಾಳುಗಳನ್ನು ಬೇಯಿಸಿಕೊಳ್ಳಲು ಮೋದಿಯವರು ಮರೆಯಲಿಲ್ಲ ಎನ್ನುವಂತೆ ಕಾಣುತ್ತದೆ. ಇದನ್ನು ಹೀಗೆ ಅರ್ಥ ಮಾಡಿಕೊಂಡವರಲ್ಲಿ ಕರ್ನಾಟಕದ ಬಿಜೆಪಿ ಅಧ್ಯಕ್ಷ ಯಡಿಯೂರಪ್ಪ ಒಬ್ಬರು. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮೋದಿ ನೇತೃತ್ವದ ಬಿಜೆಪಿಯನ್ನು ಗೆಲ್ಲಿಸಿ ಅಧಿಕಾರಕ್ಕೆ ತರಬೇಕು ಎಂಬ ಗುರಿಸಾಧನೆಗಾಗಿ ಏನು ಬೇಕಾದರೂ ಮಾಡಲು ಸಿದ್ದರಾಗಿರುವವರಲ್ಲಿ ಅವರೂ ಒಬ್ಬ ಪ್ರಮುಖರು. ಚಿತ್ರದುರ್ಗದಲ್ಲಿ ಮಾತನಾಡುತ್ತಾ ಅವರು ಹೇಳಿದ್ದು ದೇಶ ವಿದೇಶಗಳಲ್ಲಿ ಟೀಕೆಗೆ ಒಳಗಾಗಿದೆ. "ಉಗ್ರರ ನೆಲೆಗಳ ಮೇಲೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ದಾಳಿ ನಡೆಸಿದ್ದರ ಪರಿಣಾಮ ನಾಳೆ 22 ಸ್ಥಾನಗಳನ್ನು ಗೆಲ್ಲಲು ಅನುಕೂಲವಾಗಲಿದೆ". ಹಿರಿಯ ಅನುಭವಿ ರಾಜಕಾರಣಿ ಇಂತಹ ಕೀಳು ಮಟ್ಟದ ಮತಗಳನ್ನು ಹೇಳಿದ್ದು ವಿಶ್ವದ ಮುಂದೆ ಮಾತು ದೇಶ ತಲೆ ತಗ್ಗಿಸುವಂತೆ ಮಾಡಿದೆ. ವೈಮಾನಿಕ ದಾಳಿಯ ನಂತರ ದೇಶದಲ್ಲಿ ಮೋದಿ ಪರವಾದ ಅಲೆ ಹೆಚ್ಚಾಗಿದೆ. ಇದರಿಂದ ಲೋಕಸಭಾ ಚುನಾವಣೆಯಲ್ಲಿ ಅನುಕೂಲವಾಗಲಿದೆ ಎಂಬ ಮಾತು ಬಿಜೆಪಿ ಪಕ್ಷದೊಳಗಿನ ಅಧಿಕಾರದಾಹವನ್ನು ತೋರಿಸುತ್ತದೆ. ಅಧಿಕಾರಕ್ಕಾಗಿ ಅವರು ಏನೂ ಬೇಕಾದರೂ ಮಾಡಲು ಸಿದ್ಧ. ನಾಡಿಗಾಗಿ ಮಡಿದ ವೀರ ಯೋಧರ ಮನೆಗಳಲ್ಲಿ ಕಣ್ಣೀರ ಕೋಡಿ ಹರಿಯುತ್ತಿರುವುದು ಇನ್ನೂ ನಿಂತಿಲ್ಲ. ಇವರು ಚುನಾವಣೆ ಗೆಲ್ಲುವ ಲೆಕ್ಕಾಚಾರದಲ್ಲಿ ತೊಡಗಿದ್ದಾರೆ. ಇವರು ಮನುಷ್ಯರೇ? ಇದೆಯಾ ಇವರಿಗೆ ಮನುಷ್ಯತ್ವ? ಇವರನ್ನೂ, ಇವರ ಸಿದ್ಧಾಂತವನ್ನು ನಂಬಬಹುದಾ? 'ಯುದ್ಧದ ವಾತವರಣವನ್ನು ಚುನಾವಣೆ ಗೆಲ್ಲಲು ಬಳಸಬೇಕು'. ಎಂದು ಅಮಿತ್ ಶಾ ಹೇಳಿದ್ದಾರೆ. ಯುದ್ಧವನ್ನು ಗೆಲ್ಲಬಹುದು. ಆದರೆ ಮತದಾರರ ಮನಸ್ಸನ್ನು ಗೆಲ್ಲುವುದು ಅಷ್ಟು ಸುಲಭವಲ್ಲ.

ಪಾಕಿಸ್ತಾನಿ ಪ್ರಜೆಗಳೆಲ್ಲರೂ ನಮ್ಮ ಶತ್ರುಗಳಲ್ಲ. ಭಾರತದ ಜನರೆಲ್ಲರೂ ಪಾಕಿಸ್ತಾನಿಯರ ವಿರೋಧಿಗಳಲ್ಲ, ಭಯೋತ್ಪಾದಕರು ಎರಡೂ ದೇಶಗಳಲ್ಲಿ ಇದ್ದಾರೆ. ಎಲ್ಲಾ ದೇಶಗಳಲ್ಲಿ ಇದ್ದಾರೆ. ಎಲ್ಲ ಮತಧರ್ಮಗಳಲಿದ್ದಾರೆ. ಸರಿಯಾಗಿ ಹೇಳುವುದ್ದಾದ ಭಯೋತ್ಪಾಧಕರಿಗೆ ಧರ್ಮವಿಲ್ಲ. ಎರಡೂ ದೇಶಗಳ ನಡುವೆ ಇತ್ಯರ್ಥವಾಗದಿರುವ ಹಲವು ವಿವಾದಗಳು ಇರುತ್ತವೆ. ಅವುಗಳನ್ನು ಯುದ್ಧದಿಂದ ಇತ್ಯಾರ್ಥ ಪಡಿಸಲು ಸಾಧ್ಯವಿಲ್ಲ. ಪಾಕಿಸ್ತಾನಕ್ಕೆ ತಿಳುವಳಿಕೆ ಇರಲಾರದು. ಎರಡೂ ದೇಶಗಳು ತಮ್ಮ ನಡುವೆ ಇತ್ಯರ್ಥವಾಗಿದೆ ಉಳಿದಿರುವ ಬಾರದೇ ಎಲ್ಲಾ ವಿಷಯಗಳ ಬಗ್ಗೆ ಹಂತ ಹಂತವಾಗಿ ಚರ್ಚೆಮಾಡುವ ಮೂಲಕ ಶಾಶ್ವತ ಶಾಂತಿಯನ್ನು ಕಂಡುಕೊಳ್ಳಬೇಕಾಗಿದೆ. ಯುದ್ಧೋನ್ಮಾದವನ್ನು ಬೆಂಬಲಿಸಬಾರದು.

ಕೋ_ಚೆನ್ನಬಸಪ್ಪ ನಮ್ಮನ್ನಗಲಿದ್ದಾರೆ... ಹಿರಿಜೀವಕ್ಕೆ ಕೊನೆಯ ನಮನಗಳು



ಕೋ. ಚೆನ್ನಬಸಪ್ಪನವರು 1922 ಫೆಬ್ರುವರಿ 21ರಂದು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಕಾನಾಮಡುಗು ಸಮೀಪದ ಆಲೂರು ಗ್ರಾಮದಲ್ಲಿ ಜನಿಸಿದರು. ತಾಯಿ ಬಸಮ್ಮ ; ತಂದೆ ಕೋಣನ ವೀರಣ್ಣ.

ನಿವೃತ್ತನ್ಯಾಯಾಧಿಶರಾದಕೋ.ಚೆನ್ನಬಸಪ್ಪನವರು ಹುಟ್ಟಿದ್ದು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಕಾನಾಮಡುಗು ಸಮೀಪದ ಆಲೂರಿನಲ್ಲಿ. ತಂದೆ ವೀರಣ್ಣ. ತಾಯಿ ಬಸಮ್ಮ. ಕಾನಮಡುಗು ಹಳ್ಳಿಯಲ್ಲಿ ಪ್ರೈಮರಿ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸ . ನಂತರ ಪ್ರೌಢಶಾಲೆಗೆ ಬಳ್ಳಾರಿ, ನಂತರ ಕಾಲೇಜು ವಿದ್ಯಾಭ್ಯಾಸ ಅನಂತಪುರದಲ್ಲಿ ನೆಡೆಯಿತು. ಆಗ ದೇಶಕ್ಕೆ ಹಬ್ಬಿದ್ದ ಸ್ವಾತಂತ್ರ್ಯದ ಬಿಸಿ. ಕ್ವಿಟ್ ಇಂಡಿಯಾ ಚಳವಳಿಯಲ್ಲಿ ವಿದ್ಯಾರ್ಥಿ ಮುಖಂಡರಾಗಿ ಭಾಗಿಯಾಗಿ ಬಂಧನ, ಸೆರೆಮನೆವಾಸ ಅನುಭವಿಸಿದರು. ಬಿಡುಗಡೆಯ ನಂತರ ಬಿ.ಎ. ಪದವಿ, ಬೆಳಗಾವಿ ಕಾಲೇಜಿನಿಂದ ಲಾ ಪದವಿ. ಚರಿತ್ರೆ ಮತ್ತು ರಾಜ್ಯಶಾಸ್ತ್ರದಲ್ಲಿ ಎಂ.ಎ. ಪದವಿ ಕೂಡ ಪಡೆದರು.

1946ರಲ್ಲಿ ಮುಂಬಯಿ ಹೈಕೋರ್ಟಿನಲ್ಲಿ ವಕೀಲರಾಗಿ ನೋಂದಣಿಗೊಂಡು, ಬಳ್ಳಾರಿ ಡಿಸ್ಟಿಕ್ಟ್ ಕೋರ್ಟಿನಲ್ಲಿ ವಕೀಲಿ ವೃತ್ತಿ ಆರಂಭ. 1965ರಲ್ಲಿ ಡಿಸ್ಟಿಕ್ಟ್ ಸೆಷನ್ ಜಡ್ಜ್ ಆಗಿ ನೇಮಕವಾದರು. ನಿವೃತ್ತಿಯ ನಂತರ ಪುನಃ ಕರ್ನಾಟಕ ಹೈಕೋರ್ಟಿನಲ್ಲಿ ವಕೀಲಿ ವೃತ್ತಿ. ಹಲವಾರು ಕಾರ್ಮಿಕ ಸಂಘಗಳ, ಭ್ರಷ್ಟಾಚಾರ ನಿರ್ಮೂಲನಾ ಸಮಿತಿಯ ಅಧ್ಯಕ್ಷರ ಜವಾಬ್ದಾರಿ ನಿರ್ವಹಿಸಿದರು.

1971ರ ಸುಮಾರಿನಲ್ಲೆ ಅರವಿಂದಾಶ್ರಮದ ಒಡನಾಟ ಇರಿಸಿಕೊಂಡಿದ್ದರು. ಕರ್ನಾಟಕ ವಿಭಾಗದ ಅರವಿಂದಾಶ್ರಮ ಪ್ರಾರಂಭ ಮಾಡಿದರು. ಅಮೆರಿಕದಲ್ಲಿ ನಡೆದ ವೀರಶೈವ ವಾರ್ಷಿಕ ಅವೇಶನ, ಅರವಿಂದಾಶ್ರಮದ ಕಾರ್ಯಕ್ರಮಗಳಲ್ಲಿ ಪ್ರಮುಖ ಪಾತ್ರ. ಸಾಹಿತ್ಯದ ಗೀಳು ಹಚ್ಚಿಕೊಂಡ ಇವರು ನಾಡಿನ ಪ್ರಮುಖ ಪತ್ರಿಕೆಗಳಿಗೆಲ್ಲಾ ಬರೆದ ಅಪಾರ ಬರಹ. ಕನ್ನಡಪ್ರಭ ಪತ್ರಿಕೆಯಲ್ಲಿ ನ್ಯಾಯಾಧೀಶರ ನೆನಪುಗಳು ಮತ್ತು ಪ್ರಜಾಮತ ವಾರಪತ್ರಿಕೆಯಲ್ಲಿ ನ್ಯಾಯಾಲಯದಲ್ಲಿ ಸತ್ಯ ಕಥೆಗಳು ಪ್ರಕಟಿತ. ಪ್ರಕಟಿತ ಕೃತಿಗಳೇ ಸುಮಾರು 80ಕ್ಕೂ ಹೆಚ್ಚು. ಸ್ವಾತಂತ್ರ್ಯ ಮಹೋತ್ಸವ, ಪ್ರಾಣಪಕ್ಷಿ, ಜೀವತೀರ್ಥ ಮೊದಲಾದ 5 ಕವನ ಸಂಕಲನಗಳು. ಗಡಿಪಾರು, ನಮ್ಮೂರ ದೀಪ, ಗಾಯಕನಿಲ್ಲದ ಸಂಗೀತ ಮುಂತಾದ 6 ಕಥಾ ಸಂಕಲನಗಳು. ಹಿಂದಿರುಗಿ ಬರಲಿಲ್ಲ, ನೊಗದ ನೇಣು, ರಕ್ತತರ್ಪಣ, ಬೇಡಿ ಕಳಚಿತು–ದೇಶ ಒಡೆಯಿತು ಮೊದಲಾದ 9 ಕಾದಂಬರಿಗಳು. ಶ್ರೀ ಅರವಿಂದರು, ಶ್ರೀ ಮಾತಾಜಿ, ಶ್ರೀ ಮೃತ್ಯುಂಜಯಸ್ವಾಮಿಗಳು ಮೊದಲಾದ 8 ಜೀವನಚರಿತ್ರೆಗಳು. ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯ ಸಮೀಕ್ಷೆ, ದೃಢಪ್ರತಿಜ್ಞೆ, ಕುವೆಂಪು ವೈಚಾರಿಕತೆ ಮೊದಲಾದ ವಿಮರ್ಶಾ ಗ್ರಂಥಗಳು. ರಕ್ಷಾಶತಕಂ, ಶ್ರೀ ಕುವೆಂಪು ಭಾಷಣಗಳು, ಬಿನ್ನವತ್ತಳೆಗಳು ಸಂಪಾದಿತ ಕೃತಿಗಳು. ಟಿಪ್ಪು ಸುಲ್ತಾನ್ ಹಾಗೂ ಲಿಂಗಾಯತ ಧರ್ಮದ ಕುರಿತಾದಂತೆ ಸಂಶೋಧನಾತ್ಮಕ ಕಿರು ಹೊತ್ತಿಗೆಗಳನ್ನು ಸಹ ಅವರು ರಚಿಸಿದ್ದಾರೆ.

ನಾಡು, ನುಡಿ, ಸಾಹಿತ್ಯ– ಸಂಸ್ಕೃತಿಯ ಬಗ್ಗೆ ಅಪಾರ ಅಭಿಮಾನ, ಬದ್ಧತೆಯ ಇದ್ದ ಅವರು ಮಾತೃಭಾಷೆ ಕನ್ನಡದಲ್ಲಿಯೇ ನ್ಯಾಯಾಲಯದ ತೀರ್ಪನ್ನು ನೀಡಿದ ಪ್ರಥಮರು.

ನಮ್ಮನ್ನ ಅಗಲಿರುವ ಈ ಹಿರಿಯ ಚೇತನ ಕೋ. ಚೆನ್ನಬಸಪ್ಪನವರು ಪ್ರಗತಿಪರ ಚಿಂತನೆಯತ್ತಲೇ ತುಡಿಯುವ ಮನಸ್ಸು. ಕೋಮು ಸೌಹಾರ್ದತೆ ಸಾಮರಸ್ಯ ಕಾಪಾಡುವ ದಿಕ್ಕಿನಲ್ಲಿ ಅವರು ಕೊನೆಯುಸಿರಿನವರೆಗೂ ಬದ್ಧತೆಯನ್ನು ತೋರಿದವರು. ನಾಡಿನಲ್ಲಿ ಶಾಂತಿ, ಸಾಮರಸ್ಯ, ಸಹಬಾಳ್ವೆ ಉಳಿಸುವ ಮತ್ತು ಬೆಳೆಸುವ ದಿಕ್ಕಿನಲ್ಲಿ ಕ್ರಿಯಾಶೀಲರಾಗಿದ್ದರು.

ಸ್ವಾತಂತ್ರ ಚಳುವಳಿಯ ಕಾಲದಿಂದಲೂ ಸಾಮಾಜಿಕ ಬದಲಾವಣೆಗೆ ದುಡಿದವರು ಬದುಕಿನುದ್ದಕ್ಕೂ ಜನತೆಯ ಹಿತ ಚಿಂತನೆ ಚಟುವಟಿಕೆ ಚಳುವಳಿಯಲ್ಲಿ ತೊಡಗಿದ ಅವರು ಎಡ ಪಂಥೀಯ ಚಿಂತನ ಚಳುವಳಿಗಳ ಜೊತೆಯಲ್ಲಿ ಸಹಮತ ಹೊಂದಿದವರು.

ಕಳೆದ ವರುಷ ಜನವರಿ 30ರಂದು ನಡೆಸಿದ ಸೌಹಾರ್ದತೆಗಾಗಿ ಕರ್ನಾಟಕದ ಮಾನವ ಸರಪಳಿ ಬೃಹತ್ ಕಾರ್ಯಕ್ರಮದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು ದೇಶದ ಬಗ್ಗೆ, ಜನತೆಯ ಬಗ್ಗೆ ಚಿಂತಿಸುತ್ತಿದ್ದರು. ಅವರಿಗೆ ಹೃದಯಾಂತರಾಳದ ಶ್ರದ್ಧಾಂಜಲಿಯನ್ನು ಜನಶಕ್ತಿ ಕನ್ನಡ ವಾರಪತ್ರಿಕೆ ಹಾಗೂ ಸಿಪಿಎಂ ರಾಜ್ಯ ಸಮಿತಿಗಳು ಸಲ್ಲಿಸಿವೆ.

ವರದಿ: ವಾ.ಉ.

ಮಂಗಳೂರಿನಲ್ಲಿ ಬೀಡಿ ಕಾರ್ಮಿಕರ ಪ್ರತಿಭಟನೆ:



ಅಖಿಲ ಭಾರತ ಬೀಡಿ ಕಾರ್ಮಿಕರ ಬೇಡಿಕೆ ದಿನಾಚರಣೆ ಪ್ರಯುಕ್ತ ಬೀಡಿ ಕಾರ್ಮಿಕರ ಸಮಸ್ಯೆ ಬಗೆಹರಿಸಬೇಕೆಂದು ಆಗ್ರಹಿಸಿ ಬೀಡಿ ಕಾರ್ಮಿಕರು ಸಿಐಟಿಯು ಸಂಯೋಜಿತ ಮಂಗಳೂರು, ಅಳಪೆ ಮತ್ತು ಪದವು ಬೀಡಿ ಯೂನಿಯನ್‌ಗಳ ನೇತೃತ್ವದಲ್ಲಿ ಫೆಬ್ರವರಿ 26 ರಂದು ದ.ಕ.ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಬೀಡಿ ಕಾರ್ಮಿಕರಿಗೆ ರಾಜ್ಯ ಸರಕಾರವು ನಿಗದಿಗೊಳಿಸಿದ ಕನಿಷ್ಟ ವೇತನದ ಬಾಕಿಯನ್ನು ಬೀಡಿ ಮಾಲಕರು ಬಾಕಿ ಇರಿಸಿದ್ದಾರೆ. ಕೇಂದ್ರ ಸರಕಾರ ಕೂಡಾ ಬೀಡಿ ಕಾರ್ಮಿಕರನ್ನು ಬೀದಿ ಪಾಲು ಮಾಡುವಂತಹ ಕೋಪ್ಟಾ ಕಾಯಿದೆಯನ್ನು ಕಡಿತಗೊಳಿಸಿದೆ. ಇದರಿಂದಾಗಿ ಬೀಡಿ ಕಾರ್ಮಿಕರಿಗೆ ಕೆಲಸ ಅಭದ್ರತೆ ಉಂಟಾಗಿದೆ ಎಂಬುದಾಗಿ ಪ್ರತಿಭಟನೆಯನ್ನು ಉದ್ಘಾಟಿಸಿ ಮಾತನಾಡಿದ ಕರ್ನಾಟಕ ರಾಜ್ಯ ಬೀಡಿ ವರ್ಕರ್ಸ್ ಫೆಡರೇಶನ್ನಿನ ರಾಜ್ಯಾಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ ಹೇಳಿದರು.

ಬೀಡಿ ಮಾಲಕರು ನ್ಯಾಯೋಚಿತವಾಗಿ ನೀಡಬೇಕಾದ ಸವಲತ್ತುಗಳನ್ನು ನೀಡುವಂತೆ ಮಾಡಲು ಜಿಲ್ಲಾಧಿಕಾರಿಗಳು ತಮ್ಮ ಸಮ್ಮುಖ ಮಾಲಕರ ಹಾಗೂ ಕಾರ್ಮಿಕ ಸಂಘಟನೆಗಳ ನಾಯಕರ ಜಂಟಿ ಸಭೆ ಕರೆಯಬೇಕೆಂದು ಈ ಸಂದರ್ಭ ಆಗ್ರಹಿಸಲಾಯಿತು.

ಪ್ರತಿಭಟನೆಯಲ್ಲಿ ಸಿಐಟಿಯು ರಾಜ್ಯ ಮುಖಂಡರಾದ ವಸಂತ ಆಚಾರಿ, ದ.ಕ.ಜಿಲ್ಲಾ ಬೀಡಿ ಫೆಡರೇಶನ್ನಿನ ಉಪಾಧ್ಯಕ್ಷ ಯು.ಬಿ.ಲೋಕಯ್ಯ, ಮುಖಂಡರಾದ ಜಯಂತ ನಾಯಕ್, ಜಯಂತಿ ಶೆಟ್ಟಿ, ಬಾಬು ದೇವಾಡಿಗ, ಭಾರತಿ ಬೋಳಾರ ಭಾಗವಹಿಸಿದ್ದರು.

ಮಂಗಳೂರು–ಮೂಡಬಿದ್ರಿ–ಕಾರ್ಕಳ ರಾಷ್ಟ್ರೀಯ ಹೆದ್ದಾರಿ ಅಗಲೀಕರಣ ಆಗ್ರಹಿಸಿ ಗುರುಪುರ ಕೈಕಂಭದಲ್ಲಿ ಸಾಮೂಹಿಕ ಧರಣಿ:



ಮಂಗಳೂರು ಕಾರ್ಕಳ ರಸ್ತೆ ಮಧ್ಯೆ ವಾಮಂಜೂರು, ಗುರುಪುರ, ಕೈಕಂಭ, ಎಡಪದವು, ಮೂಡಬಿದ್ರಿ ಇತ್ಯಾದಿ ಪೇಟೆಗಳು ಪಟ್ಟಣಗಳಾಗಿ ವಿಸ್ತರಣೆಗೊಳ್ಳುತ್ತಿದೆ. ವಾಹನ ಸಂಚಾರ ಹೆಚ್ಚುತ್ತಿದೆ. ರಸ್ತೆಯಾದರೋ ಹಳೆಕಾಲದ ಅಂಕುಡೊಂಕಾದ ರಸ್ತೆ. ಹತ್ತು ವರ್ಷಗಳ ಹಿಂದೆಯೇ ಈ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಅಭಿವೃದ್ಧಿಪಡಿಸುವುದಾಗಿ ಘೋಷಿಸಲಾಗಿದೆ. ಮಂಗಳೂರಿನ ಈಗಿನ ಸಂಸದರು ಈ ಬಗ್ಗೆ ತಾನು ಪ್ರಾಶಸ್ತ್ಯ ಕೊಡುವುದಾಗಿ ಹೇಳುತ್ತಲೇ ಬಂದಿದ್ದಾರೆ. ಆದರೆ ಈ ಬಗ್ಗೆ ಸರ್ವೆ ಕೂಡಾ ಆಮೆ ನಡಿಗೆಯಲ್ಲಿದೆ. ಹಳೆಯ ರಸ್ತೆಯು ಹೊಂಡ ಗುಂಡಿಗಳಿಂದ ನಾದುರಸ್ತಿಯಲ್ಲಿದೆ. ಈ ಹಿನ್ನೆಲೆಯಲ್ಲಿ ಮೂಡಬಿದ್ರಿ–ಗುರುಪುರ ಪ್ರದೇಶದ ನಾಗರಿಕರು ಒಂದುಗೂಡಿ ಕಾರ್ಕಳ–ಮೂಡಬಿದ್ರಿ–ಮಂಗಳೂರು ರಾಷ್ಟ್ರೀಯ ಹೆದ್ದಾರಿ ಅಗಲೀಕರಣ ಹೋರಾಟ ಸಮಿತಿ ರಚಿಸಿಕೊಂಡಿದ್ದಾರೆ.

ಈ ಸಮಿತಿ ವತಿಯಿಂದ ಫೆಬ್ರವರಿ 27 ರಂದು ಗುರುಪುರ ಕೈಕಂಭ ಜಂಕ್ಷನ್‌ನಲ್ಲಿ ಸಾಮೂಹಿಕ ಧರಣಿ ನಡೆಸಿದಾಗ, ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಧರಣಿಯನ್ನುದ್ದೇಶಿಸಿ ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ, ಮುಖಂಡರಾದ ಯಾದವ ಶೆಟ್ಟಿ, ಯು.ಬಿ.ಲೋಕಯ್ಯ, ಸದಾಶಿವ ದಾಸ್, ಮುನೀರ್ ಕಾಟಿಪಳ್ಳ, ರಾಜ್ಯ ರೈತ ಸಂಘದ ಆಲ್ವಿನ್ ಮೆನೆಜಸ್ ಭಾಗವಹಿಸಿದ್ದರು.

ವಿಜಯಾ ಬ್ಯಾಂಕ್ ಉಳಿಸಿ ಹೋರಾಟಕ್ಕೆ ಸಿಪಿಐ(ಎಂ) ಬೆಂಬಲ:

ಲಾಭದಲ್ಲಿರುವ ಕರಾವಳಿ ಮೂಲದ ವಿಜಯಾ ಬ್ಯಾಂಕನ್ನು ನಷ್ಟದಲ್ಲಿ ನಡೆಯುತ್ತಿರುವ ಬ್ಯಾಂಕ್ ಆಫ್ ಬರೋಡಾ ಹಾಗೂ ದೇನಾ ಬ್ಯಾಂಕ್‌ನೊಂದಿಗೆ ವಿಲೀನಗೊಳಿಸುವುದನ್ನು ವಿರೋಧಿಸಿ ಉಡುಪಿ–ದ.ಕ.ಜಿಲ್ಲೆಯ ಸಾರ್ವಜನಿಕರನ್ನು ಒಳಗೊಂಡ 'ವಿಜಯಾ ಬ್ಯಾಂಕ್ ಉಳಿಸಿ ಹೋರಾಟ ಸಮಿತಿ' ರಚನೆಯಾಗಿದ್ದು, ಎರಡೂ ಜಿಲ್ಲೆಗಳಲ್ಲಿ ವಿಜಯಾ ಬ್ಯಾಂಕ್ ಶಾಖೆಗಳ ವತಿಯಿಂದಲೂ, ರಾಜಕೀಯ ಪಕ್ಷಗಳ ವತಿಯಿಂದಲೂ ಪ್ರತಿಭಟನಾ ಪ್ರದರ್ಶನಗಳು ನಡೆದಿವೆ.

ಫೆಬ್ರವರಿ 23 ರಂದು ಮಂಗಳೂರು ಪುರಭವನದಲ್ಲಿ ಎರಡೂ ಜಿಲ್ಲೆಗಳ ಸಾರ್ವಜನಿಕರು ಭಾಗವಹಿಸಿದ್ದರು. ನ್ಯಾಯವಾದಿ ದಿನೇಶ ಹೆಗ್ಡೆ ಉಳೇಪಾಡಿ ಪ್ರಧಾನ ಕಾರ್ಯದರ್ಶಿಯಾಗಿ ಈ ಪ್ರತಿಭಟನೆಗಳನ್ನು ಸಂಯೋಜಿಸುತ್ತಿದ್ದು, ಮಂಗಳೂರು ಪುರಭವನದ ಸಭೆಯಲ್ಲಿ ಸಿಪಿಐ(ಎಂ) ಪಕ್ಷವನ್ನು ಪ್ರತಿನಿಧಿಸಿ ಉಡುಪಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಯಾದವ ಶೆಟ್ಟಿ ಮಾತನಾಡಿದರು. ಮಾಜಿ ಸಚಿವ ಬಿ.ರಮಾನಾಥ ರೈ ಕೂಡಾ ಭಾಗವಹಿಸಿದ್ದರು. ವಿಜಯಾಬ್ಯಾಂಕನ್ನು ಬ್ಯಾಂಕ್ ಆಫ್ ಬರೋಡಾದೊಂದಿಗೆ ವಿಲೀನಗೊಳಿಸುವ ಪ್ರಸ್ತಾಪವನ್ನು ಹಿಂದೆಗೆಯಬೇಕೆಂದು ಸಮಾವೇಶದಲ್ಲಿ ಒತ್ತಾಯಿಸಲಾಯಿತು. ಸಿಪಿಐ(ಎಂ) ಪಕ್ಷದ ವತಿಯಿಂದ ವಾಸುದೇವ ಉಚ್ಚಿಲ, ಮುನೀರ್ ಕಾಟಿಪಳ್ಳ, ದಯಾನಂದ ಶೆಟ್ಟಿ ಕಾಡಾ ಭಾಗವಹಿಸಿದ್ದರು.

ಉತ್ತಮ ರಸ್ತೆ, ಸೂಕ್ತ ಸಾರಿಗೆ ವ್ಯವಸ್ಥೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ ಇನ್ನಿತರ ಮೂಲ ಸೌಕರ್ಯಗಳನ್ನು ಒದಗಿಸುವಂತೆ ಒತ್ತಾಯಿಸಿ ಮನವಿ

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಹಾಸನ ತಾಲ್ಲೂಕು ತಟ್ಟೇಕೆರೆ ಗ್ರಾಮ ಪಂಚಾಯಿತಿಗೆ ಸೇರಿದ ಕೃಷ್ಣನಗರ, ದೇವೇಗೌಡ ನಗರ, ತಟ್ಟೇಕೆರೆ ಮತ್ತು ಈ ಭಾಗದ ಗ್ರಾಮಗಳಲ್ಲಿ ಸಾವಿರಾರು ಕುಟುಂಬಗಳು ವಾಸ ಮಾಡುತ್ತಿದ್ದು ಸದರಿ ಪ್ರದೇಶಗಳಿಗೆ ಸಂಪರ್ಕಿಸಬಹುದಾದ ಗೊರೂರು ಮುಖ್ಯರಸ್ತೆ ಕಡೆಯಿಂದ ಹಾದು ಹೋಗಿರುವ ರಸ್ತೆಯು ಸಂಪೂರ್ಣವಾಗಿ ಹದೆಗೆಟ್ಟಿದ್ದು ಜನಸಾಮಾನ್ಯರು ಸಂಚರಿಸುವುದು ದುಸ್ತರವಾಗಿದೆ. ಆ ಪ್ರದೇಶಗಳಿಗೆ ಇರುವ ಕೃಷ್ಣನಗರ ಮತ್ತು ದೇವೇಗೌಡನಗರ ನಗರಸಾರಿಗೆ ಬಸ್‌ಗಳು ಸಹ ಸಮಯಕ್ಕೆ ಸರಿಯಾಗಿ ಬರುತ್ತಿಲ್ಲವಾದ್ದರಿಂದ ಶಾಲಾ–ಕಾಲೇಜು, ಕೆಲಸ ಕಾರ್ಯಗಳಿಗೆ ಹೋಗುವವರಿಗೆ ತೊಂದರೆಯಾಗುತ್ತಿದ್ದು ಮತ್ತು ಈ ಭಾಗದ ಪ್ರದೇಶಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜನರು ವಾಸ ಮಾಡುತ್ತಿದ್ದು ಇಲ್ಲಿಯ ಜನಸಾಮಾನ್ಯರಿಗೆ ಉಪಯುಕ್ತವಾಗಬಹುದಾದ ಒಂದು ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರವೂ ಇಲ್ಲದಿರುವುದು, ಆರ್ಥಿಕವಾಗಿ ಹಿಂದುಳಿದಿರುವ, ದುಡಿಮೆಯನ್ನೇ ನಂಬಿ ಬದುಕನ್ನು ಸಾಗಿಸುತ್ತಿರುವ ಬಡವರು ಸಣ್ಣಪುಟ್ಟ ಕಾಯಿಲೆಗಳು, ಆರೋಗ್ಯ ಸಮಸ್ಯೆ ಬಂದರೆ ದುಬಾರಿ ಹಣ ತೆತ್ತು ದುಡಿದ ಹಣವನ್ನೆಲ್ಲಾ ಖಾಸಗೀ ಆಸ್ಪತ್ರೆಗೆ ತೆರುವಂತಾಗಿದೆ. ಅಲ್ಲಿಯ ಜನರ ಆರೋಗ್ಯವೂ ಕೂಡ ದಿನದಿಂದ ದಿನಕ್ಕೆ ಹದಗೆಡುತ್ತಿದೆ.



ಈ ಎಲ್ಲಾ ಸಮಸ್ಯೆಗಳಿಂದಾಗಿ ಜನ ಅತ್ಯಂತ ಸಂಕಷ್ಟದ ಬದುಕು ಮತ್ತು ಅತಂತ್ರ ಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಈ ಸಮಸ್ಯೆಗಳನ್ನು ಬಗೆ ಹರಿಸಿ ಮೇಲ್ಕಂಡ ಬೇಡಿಕೆಗಳನ್ನು ಈಡೇರಿಸುವಂತೆ ಹಲವಾರು ಬಾರಿ ಜನಪ್ರತಿನಿಧಿಗಳಿಗೆ ಜಿಲ್ಲಾಡಳಿತ ಮತ್ತು ಸ್ಥಳೀಯ ಆಡಳಿತಕ್ಕೆ ಮನವಿ ಮಾಡಿಕೊಂಡರೂ ಇದುವರೆಗೂ ಜಿಲ್ಲಾ ಮತ್ತು ತಾಲ್ಲೂಕು ಆಡಳಿತದಲ್ಲಿನ ಸಕಾರಾತ್ಮಕವಾದ ಸ್ಪಂದನೆ ಸಿಕ್ಕಿಲ್ಲ. ಇದರಿಂದಾಗಿ ಈ ಭಾಗದಲ್ಲಿರುವ ಜನಸಾಮಾನ್ಯರು ಜಿಲ್ಲಾಡಳಿತ ಮತ್ತು ಸರ್ಕಾರದ ಮೇಲೆ ಆಕ್ರೋಷಗೊಂಡಿದ್ದಾರೆ. ಆದ್ದರಿಂದ ಕೂಡಲೇ ಗೊರೂರು ರಸ್ತೆಯಿಂದ ದೇವೇಗೌಡನಗರವನ್ನು ಹಾದುಹೋಗುವ ಹದಗೆಟ್ಟಿರುವ ರಸ್ತೆಯನ್ನು ದುರಸ್ತಿಗೊಳಿ ಉತ್ತಮಪಡಿಸಬೇಕೆಂದು ಈ ಭಾಗಕ್ಕೆ ಬರುವ ನಗರಸಾರಿಗೆ ಸರಿಯಾದ ಸಮಯಕ್ಕೆ ಬರುವಂತಾಗಬೇಕು, ಹೆಚ್ಚುವರಿ ಬಸ್‌ಗಳನ್ನು ಕಲ್ಪಿಸಬೇಕು ಮತ್ತು ತಣ್ಣೀರುಹಳ್ಳ ಮಾರ್ಗವಾಗಿ ನಿಂಗೇಗೌಡನಕೊಪ್ಪಲು, ತಟ್ಟೇಕೆರೆ, ಮಾರಿಗುಡಿಕೊಪ್ಪಲು, ಬಿದರೇಕೆರೆ ಗ್ರಾಮಗಳಿಗೆ ಅನುಕೂಲವಾಗುವಂತೆ ಪ್ರತ್ಯೇಕವಾಗಿ ಬಸ್ ವ್ಯವಸ್ಥೆ ಕಲ್ಪಿಸಬೇಕು ಹಾಗೂ ಈ ಪ್ರದೇಶದಲ್ಲಿ ಸುಮಾರು 10 ಸಾವಿರದಷ್ಟು ಜನ ವಾಸ ಮಾಡುತ್ತಿದ್ದಾರೆ. ಆದ್ದರಿಂದ ಕೂಡಲೇ ಸರ್ಕಾರದ ವತಿಯಿಂದ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ತೆರೆದು ಜನಸಾಮಾನ್ಯರನ್ನು ರೋಗ ರುಜಿನಗಳಿಂದ ದೂರವಿಡಲು ಗಮನ ಹರಿಸಿ ಸಕಾರಾತ್ಮಕ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ಮನವಿ ಸಲ್ಲಿಸಲಾಯಿತು.

ಅಸಂಘಟಿತ ಕಾರ್ಮಿಕರಿಗೆ ಕೇಂದ್ರದ ಪಿಂಚಣಿಗಿಂತ ರಾಜ್ಯ ಸರಕಾರದ ಭವಿಷ್ಯನಿಧಿ ಯೋಜನೆಯೇ ಸೂಕ್ತ

ಕೆ. ಮಹಾಂತೇಶ್

ನಮ್ಮ ದೇಶದ ಬೊಕ್ಕಸಕ್ಕೆ ಅಸಂಘಟಿತ ವಲಯದ ದುಡಿಮೆಯ ಪಾಲು ಶೇ 60 ಕ್ಕಿಂತ ಹೆಚ್ಚು. ದೇಶದ ಸಧ್ಯದ ಶ್ರಮ ಶಕ್ತಿಯಲ್ಲಿ ಅಸಂಘಟಿತ ಕಾರ್ಮಿಕರ ಪ್ರಮಾಣ ಶೇ 94 ರಷ್ಟು ದಾಟಿದೆ. ಕಳೆದ ಶತಮಾನದ 80 ದಶಕಕ್ಕಿಂತ ಮುನ್ನ ಸ್ವತಂತ್ರ ಭಾರತದ ಸರಕಾರಗಳು ಪಂಚವಾರ್ಷಿಕ ಯೋಜನೆಗಳ ಮೂಲಕ ದೇಶದ ಅಭಿವೃದ್ಧಿಯನ್ನು ಮಾನದಂಡವಾಗಿಸಿಕೊಂಡು ಹಲವು ನೀತಿಗಳನ್ನು ಅನುಸರಿಸಿದವು. ಅದರ ಪರಿಣಾಮವಾಗಿ ಸಾರ್ವಜನಿಕ ಉಧ್ಯಮಗಳು, ಶಿಕ್ಷಣ, ಆರೋಗ್ಯ, ದೂರ ಸಂಪರ್ಕ ಮೊದಲಾದ ಸೇವಾ ಕ್ಷೇತ್ರಗಳು ನಂತರದ ಹಸಿರು ಕ್ರಾಂತಿ, ವಿವಿಧ ಕೈಗಾರಿಕಾ ವಲಯಗಳ ನಿರ್ಮಾಣ ಇತ್ಯಾದಿಗಳು ಬೆಳವಣಿಗೆ ಸಾಧಿಸಿ ವಿಫುಲ ಉದ್ಯೋಗವಕಾಶಗಳನ್ನು ಸೃಷ್ಟಿಸಿದವು. ಇದರ ಪರಿಣಾಮವಾಗಿ ದೇಶದಲ್ಲಿ ಸಂಘಟಿತ ವಲಯದಲ್ಲಿ ಅಧಿಕ ಉದ್ಯೋಗವಕಾಶಗಳು ಸೃಷ್ಟಿಯಾದವು. ಆದರೆ 90 ದಶಕದ ನಂತರ ಜಾರಿಗೊಂಡ ಉದಾರಿಕರಣ ಪರ ನೀತಿಗಳು ಕ್ರಮೇಣ ಸಂಘಟಿತ ವಲಯದ ಉದ್ಯೋಗಗಳನ್ನು ಕಿತ್ತುಕೊಳ್ಳುತ್ತಾ ಬಂದವು. ಇದರ ಪರಿಣಾಮವಾಗಿ ಔಪಚಾರಿಕಾ ವಲಯಲ್ಲಿದ್ದ ಉದ್ಯೋಗಗಳೆಲ್ಲವೂ ಅನೌಪಚಾರಿಕ ಕ್ಷೇತ್ರಕ್ಕೆ ಶಿಫ್ಟ್ ಆಗತೊಡಗಿದವು. ಇದೀಗ ಅನೌಪಚಾರಿಕಾ ಕ್ಷೇತ್ರವೇ ಇಡೀ ಉತ್ಪಾದನೆ, ಆರೋಗ್ಯ, ಶಿಕ್ಷಣ, ಸೇವಾ ವಲಯ ಸೇರಿದಂತೆ ಇತ್ಯಾಧಿ ಕ್ಷೇತ್ರಗಳನ್ನು ತನ್ನ ಕಬಂಧ ಬಾಹುಗಳಿಂದ ಆವರಿಸಿಕೊಂಡಿದೆ

ಡಾ: ಅರ್ಜುನ್ ಸೇನ್ ಗುಪ್ತಾ ಸಮಿತಿ ವರದಿ

ನಮ್ಮ ದೇಶದ ಸಂಘಟಿತ ವಲಯದ ಕಾರ್ಮಿಕ ಚಳವಳಿಗೆ ಶತಮಾನಗಳ ಇತಿಹಾಸವಿದೆ. 1888 ರಲ್ಲೇ ಬ್ರಿಟಿಷ್ ಸರಕಾರ ರಾಯಲ್ ಕಮಿಷನ್ ಶಿಫಾರಸ್ಸಿನ ಅನ್ವಯ ಜಾರಿ ಮಾಡಿದ ಫ್ಯಾಕ್ಟರಿ ಕಾಯ್ದೆಯಿಂದ ಹಿಡಿದು ಇತ್ತೀಚಿನ 2008 ರ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ ರೂಪುಗೊಳ್ಳುವವರೆಗೂ ಸಂಘಟಿತ ಕಾರ್ಮಿಕ ವರ್ಗ ವಿವಿಧ ತೆರನಾದ ಹೋರಾಟಗಳನ್ನು ಸಂಘಟಿಸಿದೆ. ಆದರೆ ಜಾಗತೀಕರಣ ನೀತಿಗಳು ನಮ್ಮ ದೇಶದ ಕೃಷಿ ಹಾಗೂ ಕೈಗಾರಿಕಾ ಕ್ಷೇತ್ರಗಳ ಮೇಲೆ ವಿಪರೀತ ದಾಳಿಗಳನ್ನು ಹರಿಯ ಬಿಟ್ಟಿತು. ಇದರ ಪರಿಣಾಮ ಸಂಘಟಿತ ಕ್ಷೇತ್ರವೇ ತತ್ತರಿಸಿ ಹೋಗಿದೆ. ಸಾಲದೆಂಬಂತೆ ಅತಿ ಹೆಚ್ಚಿನ ಉದ್ಯೋಗಗಳನ್ನು ನೀಡುತ್ತಿದ್ದ ಕೃಷಿ ಮತ್ತು ಕೈಗಾರಿಗಳಾ ರಂಗಗಳು ಬಿಕ್ಕಟ್ಟಿಗೆ ಸಿಲುಕಿದವು. ಇದರಿಂದಾಗಿ ಗ್ರಾಮೀಣ ಪ್ರದೇಶದಲ್ಲಿ ಬಹುದೊಡ್ಡ ಅಸಂಘಟಿತ ವಿಭಾಗವಾದ ಕೃಷಿಕೂಲಿಕಾರರು ಮತ್ತು ನಗರ ಪ್ರದೇಶಗಳಲ್ಲಿ ಕಟ್ಟಡ, ಆಟೋ, ಹಮಾಲಿ, ಮನೆಕೆಲಸ ಇತ್ಯಾದಿ ಅಸಂಖ್ಯಾತ ಅಸಂಘಟಿತ ವಲಯದಲ್ಲಿನ ಕೋಟ್ಯಾಂತರ ಕಾರ್ಮಿಕರು ಯಾವುದೇ ಸುರಕ್ಷತೆ ಮತ್ತು ಭದ್ರತೆ ಇಲ್ಲದೆ ಹೀನಾಯ ಬದುಕು ಸಾಗಿಸುವಂತಾಯಿತು. ಅತ್ಯಂತ ಶೋಷಣೆಗೊಳಗಾದ ಈ ವಿಭಾಗಕ್ಕೆ ನ್ಯಾಯ ಒದಗಿಸುವ ಹಲವು ಪ್ರಯತ್ನಗಳು ಪಾರ್ಲಿಮೆಂಟಿನ ಒಳಗಡೆ ಮತ್ತು ಹೊರಗಡೆ ಆರಂಭಗೊಂಡವು. ಅದರ ಭಾಗವಾಗಿಯೇ 2004 ರಲ್ಲಿ ಯುಪಿಎ 1 ಸರಕಾರ ಡಾ ಅರ್ಜುನ್ ಸೇನ್ ಗುಪ್ತಾ ಅಧ್ಯಕ್ಷತೆಯಲ್ಲಿ 'ಅಸಂಘಟಿತ ಉದ್ಯಮಗಳ ಕುರಿತಾದ ರಾಷ್ಟ್ರೀಯ ಆಯೋಗ ವನ್ನು ರಚಿಸಿತು. ಈ ಆಯೋಗವು ದೇಶದ ಉದ್ದಗಲಕ್ಕೂ ಸಂಚರಿಸಿ ಅಧ್ಯಯನ ನಡೆಸಿ 2009 ರಲ್ಲಿ ತನ್ನ ವರದಿಯನ್ನು ಸರಕಾರಕ್ಕೆ ಸಲ್ಲಿಸಿತು.

ಸ್ವತಂತ್ರ ಭಾರತದಲ್ಲಿ ಪ್ರಥಮವಾಗಿ ರಚಿಸಲ್ಪಟ್ಟ ಆಯೋಗದ ವರದಿಯು ಹಲವು ರೀತಿಯಲ್ಲಿ ದೇಶದ ಗಮನ ಸೆಳೆಯಿತು. ದೇಶವು ಆರ್ಥಿಕತೆಯಲ್ಲಿ ಮುನ್ನಡೆ ಸಾಧಿಸಿದ್ದಾಗ್ಯೂ ಇನ್ನೂ ದೇಶದ ಶೇ 77 ರಷ್ಟು ಜನರು ದಿನನಿತ್ಯ ತಮ್ಮ ಆಹಾರಕ್ಕಾಗಿ ಖರ್ಚು ಮಾಡುತ್ತಿರುವ ಹಣ ಕೇವಲ 20 ರುಪಾಯಿಗಿಂತ ಕಡಿಮೆ, ಆರ್ಥಿಕ ನೀತಿಗಳ ಲಾಭ ಪಡೆದವರ ಲಾಭಗಳು ನೂರಾರು ಪಟ್ಟು ಜಾಸ್ತಿಯಾಗಿದ್ದರೆ ಅಸಂಘಟಿತ ವಲಯದ ಜನರ ಬದುಕು ಮಾತ್ರ ಅಸಹನೀಯವಾಗಿದೆ. ಹೀಗೆ ತೀವ್ರ ರೀತಿಯ ಶೋಷಣೆಗೊಳಗಾದವರಲ್ಲಿ ದಲಿತರು ಹಾಗೂ ಮುಸ್ಲಿಂಮರು ಬಹುಸಂಖ್ಯಾತರಾಗಿದ್ದಾರೆ. ಒಂದೆಡೆ ಸಾಮಾಜಿಕವಾಗಿ ತಾರತಮ್ಯಕ್ಕೊಳಗಾದ ಕೋಟ್ಯಾಂತರ ಸಂಖ್ಯೆಯ ಈ ಜನರು ಆರ್ಥಿಕವಾಗಿಯೂ ತೀವ್ರ ಶೋಷಣೆಗೊಳಗಾಗಿ ಹೀನಾಯ ಬದುಕು ಸಾಗಿಸುತ್ತಿದ್ದಾರೆ ಎಂದು ಹೇಳುತ್ತಾ ಅಸಂಘಟಿತ ವಲಯದ ಈ ವಿಭಾಗದ ಅಭ್ಯೂದಯಕ್ಕೆ ಕೇಂದ್ರ ಹಾಗೂ ರಾಜ್ಯ ಸರಕಾರಗಳು ತುರ್ತಾಗಿ ಗಮನ ನೀಡಬೇಕೆಂದು ಹಲವು ಶಿಫಾರಸ್ಸುಗಳನ್ನು ಮಾಡಿತ್ತು.

ಇಚ್ಛಾ ಶಕ್ತಿ ಇಲ್ಲದ ಸರಕಾರಗಳು :

ಆದರೆ ಆಯೋಗವನ್ನು ರಚಿಸುವಾಗ ಇದ್ದ ಕಾಳಜಿ, ವರದಿಯನ್ನು ಸ್ವೀಕರಿಸುವಾಗ ಅಂದಿನ ಕೇಂದ್ರ ಸರಕಾರಕ್ಕೆ ಇರಲಿಲ್ಲ. ಯಾಕೆಂದರೆ ಸ್ವತಃ ಉದಾರೀಕರಣ ನೀತಿಗಳನ್ನು ದೇಶದಲ್ಲಿ ತೀವ್ರವಾಗಿ ಜಾರಿಗೊಳಿಸಿದ್ದ ಡಾ:ಮನಮೋಹನ್ ಸಿಂಗ್ ಅವರೇ ಅಂದು ಪ್ರಧಾನಿಯಾಗಿದ್ದರು. ಸ್ವತಃ ಕಾಂಗ್ರೆಸ್ ಪಕ್ಷದ ಸಂಸದನಾದರೂ ಡಾ:ಅರ್ಜುನ್ ಸೇನ್ ಗುಪ್ತಾ ತನ್ನ ವರದಿಯಲ್ಲಿ ಅಸಂಘಟಿತ ವಲಯದ ಕಾರ್ಮಿಕರ ದುಸ್ಥಿತಿಗೆ ಕಾರಣವಾದ ನೀತಿಗಳನ್ನು ಕಟುವಾಗಿ ಟೀಕಿಸಿದ್ದರು. ಅಂತೂ ಅಂದು ಎಡಪಕ್ಷಗಳ ಬೆಂಬಲದ ಅನಿವಾರ್ಯತೆಗೆ ತಲೆಬಾಗಿ 2008 ರಲ್ಲಿ 'ರಾಷ್ಟ್ರೀಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾನೂನನ್ನು' ಕೇಂದ್ರ ಸರಕಾರ ಉಭಯ ಸಂಸತ್ತಿನಲ್ಲಿ ಅಂಗೀಕರಿಸಿ ಅದರ ಅನುಷ್ಠಾನಕ್ಕಾಗಿ 'ರಾಷ್ಟ್ರೀಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯನ್ನು ಅಸ್ತಿತ್ವಕ್ಕೆ ತಂದಿತು. ಅಲ್ಲದೆ 1000 ಕೋಟಿ ಹಣವನ್ನು ಅಸಂಘಟಿತ ಕಾರ್ಮಿಕರ ಆರೋಗ್ಯ, ಪಿಂಚಣಿ, ವಸತಿ, ಮಕ್ಕಳ ಶಿಕ್ಷಣ ಇತ್ಯಾಧಿಗಳಿಗೆ ಘೋಷಣೆಯನ್ನು ಮಾಡಿತು. ಆದರೆ ಘೋಷಣೆಗಲೆಲ್ಲ ಜಾರಿ ಆಗಲಿಲ್ಲ ಬದಲಾಗಿ ಸರಕಾರ ಖಾಸಗಿ ಕಂಪನಿಗಳಿಗೆ ಅನುಕೂಲ ಮಾಡಲು ಶೇರು ಮಾರುಕಟ್ಟೆ ಆಧಾರಿತವಾದ ರಾಷ್ಟ್ರೀಯ ಪಿಂಚಣಿ ಯೋಜನೆಯನ್ನು ಪ್ರಕಟಿಸಿತು. ಆದರೆ ಕಾರ್ಮಿಕರು ಮಾಸಿಕವಾಗಿ ತಮ್ಮ ವಂತಿಗೆ ನೀಡಿದರೂ ಖಾತ್ರಿಯಾದ ಪಿಂಚಣಿಯ ಭರವಸೆಯನ್ನು ಪೆನ್ಷನ್ ಫಂಡ್ ರೆಗ್ಯೂಲೆರಿಟಿ ಆಥಾರಿಟಿ (ಪಿಎಫ್ಆರ್‌ಡಿ) ನೀಡಲಿಲ್ಲ ಹೀಗಾಗಿ ಇದು ಮಾರ್ಪಡಾಗಬೇಕೆಂಬುದು ಕೋಟ್ಯಾಂತರ ಅಸಂಘಟಿತ ಕಾರ್ಮಿಕ ಆಗ್ರಹವಾಗಿತ್ತು. ಅಧಿಕಾರದ ಕೊನೆಯಲ್ಲಿ ಅಂದಿನ ಕಾರ್ಮಿಕ ಸಚಿವರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರೆ ಸ್ವತಃ ಇದು ಕಾರ್ಮಿಕ ಸ್ನೇಹಿಯಾಗಿ ಬದಲಾಗಬೇಕಾದ ಅಗತ್ಯವಿದೆ ಎಂಬ ಅಭಿಪ್ರಾಯಕ್ಕೆ ಬಂದಿದ್ದರು.

ಯಶಸ್ವಿಯಾಗದ ಅಟಲ್ ಪಿಂಚಣಿ ಯೋಜನೆ:

2014 ರಲ್ಲಿ ಅಧಿಕಾರಕ್ಕೆ ಬಂದ ನರೇಂದ್ರ ಮೊದಿ ಸರಕಾರವು ಅಸಂಘಟಿತ ಕಾರ್ಮಿಕರ ಕುರಿತಾಗಿ ತುಂಬಾ ಮಾತನಾಡ ತೊಡಗಿತು. ಆದರೆ ವಾಸ್ತವವಾಗಿ ಯುಪಿಎ ಸರಕಾರ ಮತ್ತು ಅದಕ್ಕಿಂತ ಮುಂಚಿನಿಂದಲೂ ಅಸಂಘಟಿತ ವಲಯದ ಹಲವು ವಿಭಾಗಗಳಿಗೆ ಕನಿಷ್ಟ ಭರವಸೆಯಾಗಿದ್ದ 'ಆಮ್ ಆದ್ಮೀ ಬಿಮಾ ಯೋಜನೆ (ಹಿಂದಿನ ಜನಶ್ರೀ ಬಿಮಾ ಯೋಜನೆ) ಹಾಗೂ ರಾಷ್ಟ್ರೀಯ ಸ್ವಾಸ್ಥ ಬಿಮಾ ಯೋಜನೆ (ಆರ್.ಎಸ್.ಬಿ.ವೈ) ಹಾಗೂ ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್.ಪಿ.ಎಸ್) ಲೈಟ್ ಯೋಜನೆಗಳ ಹೆಸರುಗಳನ್ನು ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಯೋಜನಾ, ಪ್ರಧಾನ ಮಂತ್ರಿ ಸುರಕ್ಷಾ ಬೀಮಾ ಯೋಜನಾ ಹಾಗೂ ಅಟಲ್ ಪಿಂಚಣಿ ಯೋಜನೆಗಳೆಂದು 'ಮರುನಾಮಕರಣ' ಮಾಡಿತಾದರೂ ಇದಕ್ಕೆ ಯಾವುದೇ ರೀತಿಯ ಹಣಕಾಸಿನ ನೆರವನ್ನೂ ಸರಕಾರ ಪ್ರಕಟಿಸಲಿಲ್ಲ ಬದಲಾಗಿ ಸ್ವತ: ಕಾರ್ಮಿಕರೇ ಕ್ರಮವಾಗಿ ವಾರ್ಷಿಕ ರೂ 330 ಮತ್ತು ರೂ 12 ಹಾಗೂ ಪಿಂಚಣಿ ಯೋಜನೆಗೆ ಮಾಸಿಕ ಕನಿಷ್ಟ 100 ರಿಂದ ಹಿಡಿದು 1000 ವರೆಗೆ ವಂತಿಗೆ ತುಂಬುವ ಅವಕಾಶ ಕಲ್ಪಿಸಿತು. ಅದರೊಷ್ಟಿಗೆ ಬ್ಯಾಂಕ್‌ನಲ್ಲಿ ಉಳಿತಾಯ ಖಾತೆ ಹೊಂದಿರುವ ಕಾರ್ಮಿಕರಿಗೆ ಮಾತ್ರ ಇದನ್ನು ಕಡ್ಡಾಯಗೊಳಿಸಲಾಯಿತು. ಅಂದರೆ ಖಾತೆ ಹೊಂದಿರುವುದು ಮಾತ್ರವಲ್ಲ ಪ್ರತಿವರ್ಷ ಈ ಯೋಜನೆಗೆ ಸೇರುವ ಬಗ್ಗೆ ಸ್ವತ: ಖಾತೆದಾರರು ಪತ್ರ ನೀಡಬೇಕು ಹಾಗೂ ಖಾತೆಯಲ್ಲಿ ಯೋಜನೆಗೆ ತುಂಬುವಷ್ಟು ಹಣ ಹೊಂದಿರಬೇಕು. ಆದರೆ ನಿರಂತರ ಆದಾಯ ಹೊಂದಿಲ್ಲದ ಹಾಗೂ ಬ್ಯಾಂಕ್ ಖಾತೆ ಇದ್ದರೂ ಜೀರೋ ಬ್ಯಾಲೆನ್ಸ್ ಹೊಂದಿ, ಹೆಚ್ಚಾಗಿ ನಗದು ವ್ಯವಹಾರ ನಡೆಸುವ ಅಸಂಘಟಿತರಿಗೆ ಇದು ಯಾವುದೇ ಪ್ರಯೋಜನವಾಗಲಿಲ್ಲ. ಜೊತೆಗೆ ಅಟಲ್ ಪಿಂಚಣಿ ಯೋಜನೆ ಸೇರ್ಪಡೆ ವಯಸ್ಸನ್ನು 40 ಕ್ಕೆ ಮಿತಿಗೊಳಿಸಲಾಯಿತು. ಒಟ್ಟಾರೆ ಕೋಟ್ಯಾಂತರ ಅಸಂಘಟಿತರನ್ನು ಒಳಗೊಳ್ಳುವ ಮಹತ್ವಕಾಂಕ್ಷೆ ಹೊಂದಿದ್ದರೂ ಸರಕಾರ ಬಜೆಟ್‌ನಲ್ಲಿ ಯಾವ ಹಣಕಾಸು ನೆರವನ್ನು ನೀಡದಿರುವುದರಿಂದ ಈ ಮೂರು ಯೋಜನೆಗಳು ವಿಫಲವಾದವು.

40 ಕೋಟಿಗೆ 500 ಕೋಟಿ ಅನುದಾನ ಸಾಕೆ?

ಇದೀಗ ಮತ್ತೆ ಮೋದಿ ಸರಕಾರ ಫೆಬ್ರವರಿ ಮಧ್ಯಂತರ ಬಜೆಟ್‌ನಲ್ಲಿ ಹಿಂದೆ ತಾನೇ ಘೋಷಿಸಿದ್ದ ಅಟಲ್ ಪಿಂಚಣಿ ಯೋಜನೆಯನ್ನು ಬದಲಿಸಿ 'ಪ್ರಧಾನಮಂತ್ರಿ ಶ್ರಮಯೋಗಿ ಮಾನಧನ' ಎನ್ನುವ ಮಾಸಿಕ ರೂ 3000 ಪಿಂಚಣಿ ಸಿಗಲಿದೆ ಎನ್ನುವುದನ್ನು ಯೋಜನೆಯನ್ನು ಪ್ರಕಟಿಸಿದೆ ಮತ್ತು ಅಷ್ಟೇ ಶರವೇಗದಲ್ಲಿ ಅಧಿಸೂಚನೆ ಕೂಡ ಹೊರಡಿಸಿದೆ. ಆದರೆ ಚುನಾವಣೆ ಹತ್ತಿರವಿರುವಾಗ ಅತಿ ಮಹತ್ವಕಾಂಕ್ಷೆ ಯೋಜನೆ ಹೇಳಲಾದ ಈ ಯೋಜನೆಗೆ ಮೀಸಲಾಗಿರಿಸಿರುವ ಅನುದಾನ ಕೇವಲ ರೂ 500 ಕೋಟಿ ಮಾತ್ರ. ಅಲ್ಲದೆ ಇದು ನಿರಂತರ ದೇಣಿಗೆ ಆಧಾರಿತವಾಗಿರುವಂತದ್ದು. ನಿರಂತರ ದುಡಿಮೆ ಮತ್ತು ನಿಗದಿತ ಆದಾಯವಿಲ್ಲದ ಕಾರ್ಮಿಕರು ತಪ್ಪದೆ ಮಾಸಿಕ ವಂತಿಗೆ ಪಾವತಿಸುವುದು ದುಸ್ತರವೇ. ಒಬ್ಬ ಅಸಂಘಟಿತ ಕಾರ್ಮಿಕ 60 ವರ್ಷಕ್ಕೆ ಪಿಂಚಣಿ ಪಡೆಯಬೇಕಾದರೆ ಅವನು ನಿರಂತರವಾಗಿ 'ದೇಣಿಗೆ' ಪಾವತಿಸುತ್ತಲೇ ಇರಬೇಕು. ಅದು ಅಲ್ಲದೆ ಸತತ 18 ವರ್ಷದಿಂದ 59 ವರ್ಷದವರೆಗೂ ಮಾಸಿಕ ರೂ 55 ರಿಂದ 100 ರವರೆಗೆ ವಂತಿಗೆ ತುಂಬಿದರೂ 60 ವರ್ಷದ ಬಳಿಕಾ ಕಾರ್ಮಿಕನಿಗೆ ಸಿಗುವ ಮೊತ್ತ ಕೇವಲ ರೂ 3000 ಮಾತ್ರ. ಅಷ್ಟೂ ದೀರ್ಘ ವರ್ಷಗಳಲ್ಲಿ ಆಗುವ ಹಣದುಬ್ಬರದ ಮುಂದೆ ಈಗಿನ ರೂ 3000 ಎಷ್ಟಾಗಬಹುದು ಎಂಬುದನ್ನು ಊಹಿಸಿಕೊಳ್ಳಬಹುದು. ಅಲ್ಲದೆ ಈ ಯೋಜನೆಯಲ್ಲಿ ಹಲವು ನ್ಯೂನ್ಯತೆಗಳಿವೆ ನಿರಂತರ ವಂತಿಕೆ ಕಟ್ಟುವ ಕಾರ್ಮಿಕ ಒಂದು ವೇಳೆ ಮೃತಪಟ್ಟರೆ ಆತನ ಹೆಂಡತಿ ನಾಮಿನಿಯಾಗಿ ಅದೇ ಯೋಜನೆಗೆ ವಂತಿಗೆ ನೀಡುತ್ತಾ ಮುಂದುವರೆಯಬಹುದು ಇಲ್ಲವೇ ಶೇಖರಣೆಗೊಂಡ ಹಣ ವಾಪಸ್ ಪಡೆಯಬಹುದು ಆದರೆ ಆಕೆಯೂ ತೀರಿ ಹೋದಲ್ಲಿ ಅವರ ಅವಲಂಬಿತರು ಅಥವಾ ಮಕ್ಕಳಿಗೆ ಸಿಗುವುದಿಲ್ಲ. ಇದಕ್ಕೆ ಸೇರ್ಪಡೆಯಾಗುವ ಮಿತಿಯನ್ನು 18–40 ಮಾತ್ರ ಸೀಮಿತಗೊಳಿಸಲಾಗಿರುವುದರಿಂದ 40 ವರ್ಷಗಳನ್ನು ದಾಟಿದ ನಿಜವಾಗಿಯೂ ಆರ್ಹವಾಗಿರುವ ಕೋಟ್ಯಾಂತರ ಅಸಂಘಟಿತರು ಇದರಿಂದ ವಂಚಿತರಾಗುತ್ತಾರೆ. ಹೀಗಾಗಿ 'ಪ್ರಧಾನಮಂತ್ರಿ ಶ್ರಮಯೋಗಿ ಮಾನಧನ' ಯೋಜನೆಯೂ ಹಿಂದಿನ ಅಟಲ್ ಪಿಂಚಣಿ ಯೋಜನೆಯಂತೆ ನಿಷ್ಪ್ರಯೋಜನಕಾರಿ ಎನ್ನದೆ ಬೇರೆ ದಾರಿ ಇಲ್ಲ.

ಅಸಂಘಟಿತರಿಗೆ ಬೇಕಿರುವುದು ಭವಿಷ್ಯನಿಧಿ ಯೋಜನೆ

2005 ರಿಂದಲೂ ಯುಪಿಎ ಸರಕಾರ ಘೋಷಿಸಿದ ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್.ಪಿ.ಎಸ್) ಲೈಟ್ ಅಥವಾ 2014ರಿಂದ ಮೋದಿಯವರು ಘೋಷಿಸಿದ ಅಟಲ್ ಪಿಂಚಣಿ ಯೋಜನೆಗಳಿಗೆ ಪರ್ಯಾಯವಾಗಿ ಸಾಮಾಜಿಕ ಭದ್ರತೆ ಕಾನೂನು ಜಾರಿಯಾಗಬೇಕೆಂಬುದು ರಾಜ್ಯದಲ್ಲಿ ಕೆಲಸ ಮಾಡುತ್ತಿರುವ ಅಸಂಘಟಿತ ಕಾರ್ಮಿಕ ಸಂಘಗಳ ಆಗ್ರಹವಾಗಿತ್ತು. ನಮ್ಮ ಆಗ್ರಹಕ್ಕೆ ಮಣಿದ ಹಿಂದಿನ ಕಾಂಗ್ರಸ್ ಸರಕಾರದ ಅದರ ಕಾರ್ಮಿಕ ಸಚಿವಾಲಯವು ಪ.ಬಂಗಾಳಕ್ಕೆ ಮಾದರಿಯಲ್ಲಿ ರಾಜ್ಯದ ಅಸಂಘಟಿತ ಕಾರ್ಮಿಕರ ವಂತಿಗೆಯನ್ನು ಒಳಗೊಂಡು 'ಭವಿಷ್ಯನಿಧಿ' ಕರಡನ್ನು ಸಿದ್ದಗೊಳಿಸಿ ಸರಕಾರಕ್ಕೆ ಸಲ್ಲಿಸಿತ್ತು. 2018–19 ಸಾಲಿನ ಬಜೆಟ್‌ನಲ್ಲಿ ಅಂದಿನ ಮುಖ್ಯಮಂತ್ರಿ ಮಾನ್ಯ ಸಿದ್ದರಾಮಯ್ಯನವರು ಘೋಷಣೆ ಕೂಡ ಮಾಡಿ ಅದೀಗ ಜಾರಿಯ ಹಂತದಲ್ಲಿದೆ. ಆದರೆ ಕಾರ್ಮಿಕ ಇಲಾಖೆ ಕೇಳಿದ ರೂ 139 ಕೋಟಿ ಅನುದಾನವನ್ನು ಈ ಯೋಜನೆಗೆ ನೀಡದೆ ಬದಲಾಗಿ ಕೇವಲ 25 ಕೋಟಿ ಪ್ರಕಟಿಸಿತ್ತು.

ಈ ಯೋಜನೆಯು ಕೇಂದ್ರ ಸರಕಾರ 2019 ರ ನವೆಂಬರ್ 7 ರಂದು ಅಧಿಸೂಚನೆ ಮಾಡಿದ ಕಾರ್ಯಕ್ರಮಕ್ಕಿಂತ ಸಾಕಷ್ಟು ಭಿನ್ನವಾಗಿದೆ ಮತ್ತು ಈ ಯೋಜನೆಗೆ ಸೇರ್ಪಡೆಗೊಳ್ಳುವ ಕಾರ್ಮಿಕನಿಗೆ ನಿವೃತ್ತಿಯಾದಾಗ ಬದುಕಿನ ಭದ್ರತೆ ನೀಡುತ್ತದೆ. ಈ ಭವಿಷ್ಯನಿಧಿ ಯೋಜನೆ ಪ್ರಕಾರ ಒಬ್ಬ ಕಾರ್ಮಿಕ 18 ನೇ ವಯಸ್ಸಿಗೆ ಮಾಸಿಕ ರೂ 100 ವಂತಿಗೆ ನೀಡಿ ಸೇರ್ಪಡೆಗೊಂಡರೆ ಅಷ್ಟೇ ಪ್ರಮಾಣದ ವಂತಿಗೆಯನ್ನು ಸರಕಾರ ನೀಡುತ್ತದೆ. ಅಲ್ಲದೆ ವಾರ್ಷಿಕ ಸರಾಸರಿ 8% ಬಡ್ಡಿಯೂ ಸೇರಿ 60 ನೇ ವಯಸ್ಸಿಗೆ ಒಟ್ಟು 8.54,240.14 (ಎಂಟು ಲಕ್ಷದ ಐವತ್ತು ನಾಲ್ಕು ಸಾವಿರದ ಇನ್ನೂರ ನಲವತ್ತು) ರುಪಾಯಿಗಳನ್ನು ಭವಿಷ್ಯನಿಧಿಯಾಗಿ ಪಡೆಯಲಿದ್ದಾನೆ. ಅಲ್ಲದೆ ಹೀಗೆ ಸೇರ್ಪಡೆಗೊಳ್ಳುವ ಅಸಂಘಟಿತ ಕಾರ್ಮಿಕ ದಲಿತ, ಅಂಗವಿಕಲ ಹಾಗು ಮಹಿಳಾ ವಿಭಾಗಕ್ಕೆ ಸೇರಿದ್ದರೆ ಸರಕಾರ ನೀಡುವ ವಂತಿಗೆಯು ದುಪ್ಪಟ್ಟಾಗುತದೆ ಅಂದರೆ ಅವನು ನಿವೃತ್ತರಾಗುವ ಸಂದರ್ಭದಲ್ಲಿ ಸರಿ ಸುಮಾರು 14 ಲಕ್ಷದವರೆಗೂ ಹಣ ಕಾರ್ಮಿಕರ ಕೈ ಸೇರುತ್ತದೆ. ಇಲ್ಲಿ ಪಿಂಚಣಿ ಯೋಜನೆಗೆ ಸೇರುವ ಅವಕಾಶವನ್ನು ಐಚ್ಚಿಕವಾಗಿಡಲಾಗಿದೆ. ಒಂದು ವೇಳೆ ಕಾರ್ಮಿಕ ಪಿಂಚಣಿ ಯೋಜನೆಗೆ ಸೇರಲು ಆಸಕ್ತಿವಹಿಸಿದರೆ ಶೇಖರಣೆಗೊಂಡ ಭವಿಷ್ಯ ನಿಧಿಯ ಶೇ 40 ರಷ್ಟು ಹಣವನ್ನು ಅದಕ್ಕಾಗಿ ಬಿಟ್ಟುಕೊಡಬೇಕಾಗುತ್ತದೆ. ಆದರೆ ಇದು ಪ್ರಯೋಜನಕಾರಿಲ್ಲ ಯಾಕೆಂದರೆ ಪಿಂಚಣಿ ಹಣ ಮೂರಂಕಿ ದಾಟದು. ಇಲ್ಲಿ ಶೇಖರಣೆಗೊಂಡ ಭವಿಷ್ಯನಿಧಿ ಹಣ ಬಡ್ಡಿ ಸಹಿತ ಒಂದು ದೊಡ್ಡ ಮೊತ್ತವಾಗಿ ದೊರಕುವುದರಿಂದ ಒಬ್ಬ ಅಸಂಘಟಿತ ಕಾರ್ಮಿಕ ತನ್ನ ನಿವೃತ್ತಿ ಬದುಕನ್ನು ಆ ಹಣದಿಂದ ಕಟ್ಟಿಕೊಳ್ಳಬಹುದು. ರಾಜ್ಯದಲ್ಲಿ ಸುಮಾರು 2 ಕೋಟಿ ಅಸಂಘಟಿತ ಕಾರ್ಮಿಕರಿದ್ದರೂ ಸದ್ಯ ಹಮಾಲಿ, ಮನೆಕೆಲಸ, ಟೈಲರ್ಸ್, ಚಿಂದಿ ಆಯುವವರು ಹಲವು ವಿಭಾಗಗಳಿಗೆ ಘೋಷಿಸಲಾಗಿದೆ. ಇಲ್ಲೂ ನಿವೃತ್ತಿ ಅಂಚಿನಲ್ಲಿರುವ ಕಾರ್ಮಿಕರಿಗೆ ಕೆಲವು ಅನಾನೂಕೂಲಗಳು ಆಗುವ ಸಾಧ್ಯತೆಗಳಿದ್ದಾಗ್ಯೂ ಅದನ್ನು ಸರಿದೂಗಿಸಲು ಅವಕಾಶವಿದೆ. ಅಲ್ಲದೆ ಕೇಂದ್ರ ಸರಕಾರದ ಪಿಂಚಣಿ ಯೋಜನೆಗೆ ಹೋಲಿಸಿದಲ್ಲಿ ಇದು ಅಸಂಘಟಿತ ಕಾರ್ಮಿಕರಿಗೆ ಅತ್ಯಂತ ಪ್ರಯೋಜನಕಾರಿಯಾಗಿದೆ.

ಕೊನೆಯ ಮಾತು: ಕೇಂದ್ರಸರಕಾರಕ್ಕೆಪರ್ಯಾಯವಾಗಿ ಇಂತಹ ಯೋಜನೆಯನ್ನು ರಾಜ್ಯ ಸರಕಾರ ರೂಪಿಸಿ ಜಾರಿ ಮಾಡಬಹುದೆ? ಹೌದು ಕಾರ್ಮಿಕ ಖಾತೆಯು ಸಂವಿಧಾನದ 'ಸಮವರ್ತಿ ಪಟ್ಟಿ'ಯಲ್ಲಿ ಬರುವುದರಿಂದ ರಾಜ್ಯ ಸರಕಾರ ಸ್ವತಂತ್ರವಾಗಿ ಹಲವು ಯೋಜನೆಗಳನ್ನು, ಕಾನೂನುಗಳನ್ನು ರಚಿಸಲು, ಘೋಷಿಸಲು ಅವಕಾಶವಿದೆ. ಹೀಗಾಗಿ ಕೇಂದ್ರದ ಪಿಂಚಣಿ ಯೋಜನೆಗೆ ಬದಲಾಗಿರಾಜ್ಯ ಸರಕಾರವೇ ತನ್ನ ಸಂಪನ್ಮೂಲ ಬಳಸಿ 'ಭವಿಷ್ಯ ನಿಧಿ' ಯೋಜನೆ ಜಾರಿ ಮಾಡಲು ಯಾವುದೇ ಅಡ್ಡಿ ಬರುವುದಿಲ್ಲ. ಆದರೆ ' ರಾಜ್ಯ ಸರಕಾರ ಇದನ್ನು ತ್ವರಿತವಾಗಿ ಜಾರಿ ಮಾಡಲು ಮುಂದಾಗಬೇಕಷ್ಟೇ. ●

ದೇಶಭಕ್ತ ಪದದ ಸ್ತ್ರೀವಾಚಕ ಪದವಿಲ್ಲವೇ?

ನಮ್ಮ ಇಂದಿನ ಭಾರತದಲ್ಲಿ ದೇಶಭಕ್ತಿಯೆನ್ನುವುದು ಕೇವಲ ಪುರುಷರ ಸಾಮರ್ಥ್ಯ ಹಾಗೂ ಮೌಲ್ಯವಾಗಿರುವುದರಿಂದ ಅದಕ್ಕೆ ಸಮಾನವಾದ ಸ್ತ್ರೀವಾಚಕವಿಲ್ಲ ಮತ್ತು ಆ ಕಾರಣದಿಂದಾಗಿ ಸ್ತ್ರೀಯರಿಗೆ ದೇಶಭಕ್ತಿ ಸಾಧ್ಯವಿಲ್ಲವೆಂದು ನಾನು ಸಾಬೀತು ಮಾಡುತ್ತಿದ್ದೇನೆ. ದಯವಿಟ್ಟು ತಾಳ್ಮೆಯಿಂದ ಓದುವಂಥವರಾಗಿರಿ

ಅತಿಥಿ ಅಂಕಣ



ಪ್ರೊ. ರಾಜೇಂದ್ರ ಚೆನ್ನಿ

ಮಲಯಾಳಮ್ ಭಾಷೆಯಲ್ಲಿ ಬರೆಯುವ ಪ್ರಮುಖ ಬರಹಗಾರ್ತಿ ಸಾರಾ ಜೋಸೆಫ್ ಅವರ ಒಂದು ಅದ್ಭುತವಾದ ಆದರೆ ತಳಮಳ ಹುಟ್ಟಿಸುವ ಒಂದು ಕತೆಯಿದೆ. ಅದರ ಇಂಗ್ಲೀಷ್ ಅನುವಾದದ ಹೆಸರು 'The Masculine of Virgin' ಎಂದು. ಅಂದರೆ ದೈಹಿಕವಾಗಿ ಪರಿಶುದ್ಧಳಾದ ಯಾವುದೇ ಲೈಂಗಿಕ ಅನುಭವ ಇಲ್ಲದ 'ಕನ್ನಿಕೆ' ಎನ್ನುವ ಪದಕ್ಕೆ ಪುರುಷವಾಚಕ ಪದವೇನು ಎಂದು. ಅಂದಮಾತ್ರಕ್ಕೆ ಯಾಕೆ ಇಲ್ಲ ಕುಮಾರ, ಬ್ರಹ್ಮಚಾರಿ ಪದಗಳಲ್ಲವೇ ಎಂದು ಉತ್ತರ ಹೇಳುವುದಿಲ್ಲ. ಪ್ರಶ್ನೆಯೆಂದರೆ ಲೈಂಗಿಕ ಪರಿಶುದ್ಧತೆ ಕೇವಲ ಸ್ತ್ರೀಗೆ ಯಾಕೆ ಅನ್ವಯಿಸಲಾಗುತ್ತದೆ? ಗಂಡಿಗೆ ಅದು ಯಾಕೆ ಮುಖ್ಯವಲ್ಲ? ಏಸುವಿನ ತಾಯಿ ಮೇರಿ ಕನ್ನಿಕೆ, ಆದರೆ ಏಸು? ಈ ಪ್ರಶ್ನೆಗಳನ್ನು ಕೇಳುವ ಆ ಕತೆಯ ಹುಡುಗಿ ಆತ್ಮಹತ್ಯೆ ಮಡಿಕೊಳ್ಳುತ್ತಾಳೆ. ನಾನು ಇದನ್ನು ಸ್ವಲ್ಪ ಬದಲಾಯಿಸಿ 'ದೇಶಭಕ್ತ' ಎನ್ನುವ ಪದಕ್ಕೆ ಸ್ತ್ರೀವಾಚಕ ಪದವಿಲ್ಲವೆ ಎಂದು ಕೇಳುತ್ತಿದ್ದೇನೆ. ಎಂಥಾ ಮೂರ್ಖ ಪ್ರಶ್ನೆ 'ದೇಶಭಕ್ತೆ' ಎಂದು ಇದೆಯಲ್ಲ ಎಂದು ಹೇಳಬೇಡಿ. ನಮ್ಮ ಇಂದಿನ ಭಾರತದಲ್ಲಿ ದೇಶಭಕ್ತಿಯೆನ್ನುವುದು ಕೇವಲ ಪುರುಷರ ಸಾಮರ್ಥ್ಯ ಹಾಗೂ ಮೌಲ್ಯವಾಗಿರುವುದರಿಂದ ಅದಕ್ಕೆ ಸಮಾನವಾದ ಸ್ತ್ರೀವಾಚಕವಿಲ್ಲ ಮತ್ತು ಆ ಕಾರಣದಿಂದಾಗಿ ಸ್ತ್ರೀಯರಿಗೆ ದೇಶಭಕ್ತಿ ಸಾಧ್ಯವಿಲ್ಲವೆಂದು ನಾನು ಸಾಬೀತು ಮಾಡುತ್ತಿದ್ದೇನೆ. ದಯವಿಟ್ಟು ತಾಳ್ಮೆಯಿಂದ ಓದುವಂಥವರಾಗಿರಿ:



* ಇತ್ತೀಚೆಗೆ ಪುಲವಾಮಾನಲ್ಲಿ 49 ಸೈನಿಕರ ಹತ್ಯೆಯಾಯಿತು. ಅವರು ದೇಶಪ್ರೇಮದ ಉಜ್ವಲ ಸಂಕೇತವಾಗಿದ್ದರು. ನಾನು ಸೇರಿದಂತೆ ಇಡೀ ದೇಶದ ಜನರೆಲ್ಲಾ ಈ ಸೈನಿಕರ ಸಾವಿನಿಂದ ತೀವ್ರ ದುಃಖದಲ್ಲಿದ್ದಾರೆ. ಇಂಥ ದೇಶಭಕ್ತ ಸೈನಿಕರು ಹುತಾತ್ಮರಾದಾಗ ಅವರ ಪತ್ನಿಯರು ದೇಶಭಕ್ತೆಯರಾಗಬೇಕಲ್ಲವೆ? ಇಲ್ಲ. ಹುತಾತ್ಮರಾದ ಒಬ್ಬ ಸೈನಿಕ ಬಬ್ಲು ಸಂತ್ರಾನ ಪತ್ನಿ ಶ್ರೀಮತಿ ಮಿತಾ ಸಂತ್ರಾ ಅವರು ಒಂದು ಹೇಳಿಕೆಯನ್ನು ನೀಡಿದರು. "ನಾನು ನನ್ನ ಸೈನಿಕ ಪತಿಯನ್ನು ಕಳೆದುಕೊಂಡಿದ್ದೇನೆ. ಆದರೂ ಹೇಳುತ್ತೇನೆ, ಭಾರತ ಪಾಕಿಸ್ತಾನಗಳ ನಡುವೆ ಯುದ್ಧ ಬೇಡ; ಶಾಂತಿಯಿರಲಿ". ತಕ್ಷಣವೇ ಸಾಮಾಜಿಕ ಜಾಲತಾಣಗಳಲ್ಲಿ ಅವರನ್ನು ಅತ್ಯಂತ ಕ್ರೂರವಾಗಿ ಟ್ರಾಲ್ ಮಾಡಲಾಯಿತು. ಅವರನ್ನು ದ್ರೋಹಿ, ದೇಶದ್ರೋಹಿ ಎಂದು ಕರೆಯಲಾಯಿತು. ಇದರ ಅರ್ಥವೇನು? ಗಂಡನಾದ ಸೈನಿಕನು ಹುತಾತ್ಮನಾದಾಗ ದೇಶಭಕ್ತ ಟೀವಿ ಚಾನೆಲ್ ಗಳ ಎದುರು ಅಳಬೇಕು, ಬಿಳಿಸೀರೆ ಹಾಕಿಕೊಂಡು ದುಃಖದಲ್ಲಿ ಮುಳುಗಿರಬೇಕು. ಆಗ ಮಾತ್ರ ಹೂವಿನ ಜೊತೆಗೆ ನಾರು ಎನ್ನುವಂತೆ ಅವಳನ್ನು ಮನ್ನಿಸಲಾಗುತ್ತದೆ. ಆದರೆ ಅವಳು ಸ್ವತಂತ್ರ ಯೋಚನೆ ಮಾಡುವ ವ್ಯಕ್ತಿಯಾಗಿದ್ದು ಅವಳ ಗಂಡನ ಸಾವನ್ನು ರಾಜಕೀಯಕ್ಕಾಗಿ ಬಳಸಿಕೊಳ್ಳುತ್ತಿರುವ ದೇಶಭಕ್ತರ ಯುದ್ಧೋನ್ಮಾದವನ್ನು ಖಂಡಿಸಿ ಶಾಂತಿ ಬೇಕು ಎಂದ ಕೂಡಲೇ ಅವಳು ದ್ರೋಹಿಯಾಗುತ್ತಾಳೆ. ಏಕೆಂದರೆ ಮನುವಾದಿಗಳ ಪ್ರಕಾರ ಸ್ತ್ರೀ ಹುಟ್ಟಿನಿಂದಲೇ ದ್ರೋಹಿ. ಗಂಡಸು ತನ್ನ ಪುರುಷತ್ವದ ಬಲದಿಂದ ಬಂದೋಬಸ್ತಿನಲ್ಲಿ ಇಡದಿದ್ದರೆ ಅವಳು ದ್ರೋಹಬಗೆಯುತ್ತಾಳೆ. ವಿಶೇಷವೆಂದರೆ ಅತ್ಯಂತ ಅಸಹ್ಯವಾದ ರೀತಿಯಲ್ಲಿ ಟ್ರಾಲ್ ಗೆ ಒಳಗಾದರೂ ಈ ಧೈರ್ಯಶಾಲಿ ಮಹಿಳೆ "ಇವರು ಏನೂ ಹೇಳಿದರೂ ನಾನು ಈ ರಾಷ್ಟ್ರಗಳ ಮಧ್ಯ ಶಾಂತಿ ಇರಲಿ ಎಂದೇ ಹೇಳುತ್ತೇನೆ" ಎಂದು ಹೇಳಿಕೆ ಕೊಟ್ಟಿದ್ದಾರೆ. ಈಗ ಗೊತ್ತಾಯಿತಲ್ಲ, ದೇಶಭಕ್ತ ಹುತಾತ್ಮನ ಹೆಂಡತಿ ದೇಶಭಕ್ತೆಯಲ್ಲ. ಗಂಡಸು ಕ್ರಿಮಿಗಳು ಅವಳನ್ನು ಶಾಬ್ದಿಕ, ಮಾನಸಿಕ ಹಿಂಸೆಗೆ ಒಳಪಡಿಸುತ್ತವೆ. ಈ ಟ್ರೋಲ್ ಮಾಡುವ ಗಂಡಸು ಕ್ರಿಮಿಗಳು ದೇಶದ ಗಡಿಗೆ ಹೋಗಿ ಯುದ್ದ ಮಾಡಿ ತಮ್ಮ ದೇಶಭಕ್ತಿಯನ್ನು ತೋರಿಸುತ್ತವೆ ಎಂದುಕೊಳ್ಳಬೇಡಿ. ಛೆ! ಛೆ! ಅವರು ಇನ್ನೂ ಅನೇಕ ಮಹಿಳೆಯರನ್ನು ಟ್ರಾಲ್ ಮಾಡಬೇಕಿದೆ.
* ಈ ಲೇಖನ ಬರೆಯುತ್ತಿರುವಾಗ ಇಂದಿನ ದಿನ ಸಾಮಾಜಿಕ ತಾಣದಲ್ಲಿ ಹರಿದಾಡುತ್ತಿರುವ ಒಂದು ವಿಡಿಯೋ ನೋಡಿದೆ. ಕೆಲವು ದಿನಗಳಿಂದ ಪಾಕಿಸ್ತಾನ್ ನಲ್ಲಿ ಬಂಧನದಲ್ಲಿರುವ ಅಬಿನಂದನ್ ಎನ್ನುವ ಸೈನಿಕನ ಹೆಂಡತಿಯು 'ನನ್ನ ಪತಿಯಂಥ ಸೈನಿಕರ ತ್ಯಾಗವನ್ನು ರಾಜಕೀಯಕ್ಕೆ ಬಳಸಿಕೊಳ್ಳಬೇಡಿ. ಒಬ್ಬ ಸೈನಿಕನ ಬಂಧನದಿಂದ ನಮಗೆ ಮುಂಬರುವ ಚುನಾವಣೆಯಲ್ಲಿ ಎಷ್ಟು ಸೀಟುಗಳು ಬರುತ್ತಿವೆಯೆಂದು ಲೆಕ್ಕ ಮಾಡಬೇಡಿ' ಎಂದು ಅವಳು ಕೇಳಿಕೊಂಡಿದ್ದಾಳೆ ಈ ವಿಡಿಯೋನಲ್ಲಿ. ಒಂದು ವೇಳೆ ಈ ವಿಡಿಯೋ ನೈಜವಾಗಿದ್ದರೆ ಇಷ್ಟರಲ್ಲಿ ಅವಳನ್ನು ಕ್ರೂರವಾಗಿ ಟ್ರಾಲ್ ಮಾಡಲಾಗಿರುತ್ತದೆ. ಬೆದರಿಸಲಾಗಿರುತ್ತದೆ. ಇದಕ್ಕೆ ಕಾರಣವೆಂದರೆ ನಾನು ಹೇಳಿದ ವ್ಯಾಕರಣದ ನಿಯಮ. ಬಂಧನಕ್ಕಾಗಿ ಒಳಗಾಗಿರುವ ಧೀರ ಸೈನಿಕನು ದೇಶಭಕ್ತನಾಗಿದ್ದಾನೆ. ಅವನ ಬರವಿಗಾಗಿ ಅಳುತ್ತ ಪ್ರಧಾನಿಯವರನ್ನು ಪ್ರಾರ್ಥಿಸುತ್ತಾ ಕುಳಿತರೆ ಅವನ ಪತ್ನಿಯನ್ನು ಮನ್ನಿಸಬಹುದು. ಅವಳು ಸ್ವತಂತ್ರ ವ್ಯಕ್ತಿಯಾಗಿ ಸ್ವಂತ ಯೋಚನೆ ಮಾಡುವವಳಾಗಿದ್ದು ಸೈನಿಕರ ತ್ಯಾಗವನ್ನು ರಾಜಕೀಯವಾಗಿಸಬೇಡಿ ಎಂದರೆ ಅವಳು ದೇಶದ್ರೋಹಿಯೇ ಹೌದು. ಹೀಗಾಗಿ ಬನ್ನಿ ಟ್ರಾಲ್ ಗಳ ಮೂಲಕ ಅವಳನ್ನು ಶಾಬ್ದಿಕವಾಗಿ ಮುಗಿಸಿಹಾಕೋಣ. ಇಲ್ಲದಿದ್ದರೆ ನಮ್ಮ ದೇಶಭಕ್ತಿಯ ಸಾಕ್ಷಿಯೆಲ್ಲಿದೆ?
* ಇನ್ನೊಂದು ಪ್ರಸಿದ್ಧ ಪ್ರಕರಣ. ಸೈನಿಕನಾದ ತನ್ನ ತಂದೆಯನ್ನು ಈ ಎರಡು ರಾಷ್ಟ್ರಗಳ ನಡುವಣ ಯುದ್ಧದಲ್ಲಿ ಕಳೆದುಕೊಂಡಿದ್ದ ಯುವತಿಯೊಬ್ಬಳು ಟಿವಿ ಚಾನೆಲ್ ಎದುರಿಗೆ ಬಂದು ಯುದ್ಧ ಬೇಡ ಪ್ರೀತಿ, ಶಾಂತಿ ಇರಲಿ ಎಂದು ಹೇಳಿದಳು. ತಕ್ಷಣವೇ ಬಂದ ಟ್ರಾಲ್ ಗಳಲ್ಲಿ ಕೆಲವನ್ನು ನಾನು ಓದಿದೆ. ಅದರಲ್ಲಿ ಆ ಸುಂದರ ಮುಗ್ಧ ಮಗುವನ್ನು ಸೂಳೆ (ರಾಂಡ್) ಎಂದು ಕರೆಯಲಾಗಿತ್ತು. ಆ ಮಗು ಆಮೇಲೆ ಹೇಳಿದ್ದೆಂದರೆ, ನನ್ನ ತಂದೆಯನ್ನು ಕೊಂದರೆಂದು ನಾನು ಚಿಕ್ಕಂದಿನಲ್ಲಿ ರೋಷದಲ್ಲಿದ್ದೆ. ಒಬ್ಬನನ್ನು ಸಣ್ಣ ಚಾಕುವಿನೊಂದಿಗೆ ಇರಿಯಲು ಹೋಗಿದ್ದೆ. ಆಗ ನನ್ನ ತಾಯಿ ನನಗೆ ಹೇಳಿದಳು, "ನೋಡು ಯುದ್ಧ ನಡೆಯುವುದು ಎರಡು ರಾಷ್ಟ್ರಗಳ ಮಧ್ಯ; ಎರಡು ಧರ್ಮಗಳ ಮಧ್ಯವಲ್ಲ." ಅಂದಿನಿಂದ ನಾನು ಬದಲಾದೆ.

ನಾನು ಹೇಳಿದ ವ್ಯಾಕರಣದ ನಿಯಮದ ಪ್ರಕಾರ ಯುದ್ಧದಲ್ಲಿ ಹುತಾತ್ಮನಾದ ಆ ಸೈನಿಕನು ಮಾತ್ರ ದೇಶಭಕ್ತನಾಗಿದ್ದಾನೆ. "ನನ್ನ ಗಂಡನ ಸಾವಿಗೆ ಹಗೆ ತೀರಿಸಿ; ಯುದ್ಧ ಮಾಡಿ" ಎಂದು ಹೇಳದೇ ಇದ್ದ ಅವನ ಹೆಂಡತಿಯು ದೇಶದ್ರೋಹಿ. ಇದರಲ್ಲೇನು ಆಶ್ಚರ್ಯ? ಅವರಿಬ್ಬರೂ ಹೆಂಗಸರಲ್ಲವೆ? ವ್ಯಾಕರಣದ ನಿಯಮದ ಪ್ರಕಾರ ....

ಇದನ್ನು ಬರೆಯುತ್ತಾ ನಾನು ಒಂದೆರಡು ನಿಮಿಷ ನಿದ್ರೆಹೋದೆ. ಕನಸಿನಲ್ಲಿಯೋ ನಿಜವೋ ಗೊತ್ತಿಲ್ಲ. ದೊಂಬಿಕೋರರ ಒಂದು ಗುಂಪು ನನ್ನ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಮುನ್ನುಗ್ಗಿ ಬಂತು. "ಮಹಿಳೆಯರು ದೇಶಭಕ್ತರಾಗಲಾರರು ಎನ್ನುವ ಈ ದ್ರೋಹಿಗೆ ಧಿಕ್ಕಾರ! ಇಲ್ಲಿ ನೋಡಿ ದೇಶಭಕ್ತೆ!" ಎಂದು ಒಂದು ಫೋಟೋ ತೋರಿಸಿದರು. ಜನವರಿ 30 ರಂದು ಗಾಂಧಿಯ ಪ್ರತಿಕೃತಿಗೆ ಗುಂಡು ಹಾರಿಸಿದ ಮಹಾಮಾತೆಯ ಫೋಟೋ ಅದಾಗಿತ್ತು. ನನ್ನ ವ್ಯಾಕರಣದ ನಿಯಮ ನನಗೆ ಕೈಕೊಟ್ಟಿತ್ತು. ಅವರುಗಳ ಕೈಯಲ್ಲಿ ಇನ್ನೂ ಅನೇಕ ಪೋಟೋಗಳಿದ್ದವು. ಪ್ರಜ್ಞಾ ಠಾಕೂರ್, ಸಾಧ್ವಿ ರಿತಂಬರಿ, ಅದೆಷ್ಟು ಜನ! ಗಾಬರಿಯಿಂದ ಕೂಗಿಕೊಂಡು ಎಚ್ಚರವಾಯಿತು.

ಎಚ್ಚರವಾದ ಮೇಲೆ ಒಂದು ದೇಶಭಕ್ತ ಹಾಡಿನ ನೆನಪಾಯಿತು:

ನಡೆ ಮುಂದೆ, ನಡೆ ಮುಂದೆ, ನುಗ್ಗಿ ನಡೆ ಮುಂದೆ
ನಾನಿರುವೆ, ನೀನಳಿವೆ
ನಿನ್ನ ಎಲುವುಗಳ ಮೇಲೆ
ಮೂಡುವುದು ನಮ್ಮ ಇಲೆಕ್ಷನ್ ನ ನವಲೀಲೆ."

ಯಾಕೋ ಒಂದೆರಡು ಅಕ್ಷರಗಳು ತಪ್ಪಾಗಿವೆ. ಮಾತೆಯರ ಭೀತಿಯು ಇಳಿದ ಮೇಲೆ ತಪ್ಪುಗಳನ್ನು ತಿದ್ದುತ್ತೇನೆ.



ಪುಣೆಯಲ್ಲಿ ಅಂಗವಿಕಲ ಚಳುವಳಿಗಾರರ ಮೇಲೆ ಲಾಠೀ ಪ್ರಹಾರ- ಎನ್‌ಪಿಆರ್‌ಡಿ ಖಂಡನೆ

ಮಹಾರಾಷ್ಟ್ರದ ಪುಣೆಯಲ್ಲಿ ಫೆಬ್ರುವರಿ 25 ರಂದು ಅಂಗವಿಕಲತೆಯ ಪ್ರಮಾಣ ಪತ್ರಗಳನ್ನು ನೀಡಬೇಕು ಎಂದು ಸುಮಾರು 11,000 ಕಿವುಡುತನದಿಂದ ಬಾಧಿತರಾದ ಯುವಜನರು ಆಗ್ರಹಿಸುತ್ತಿದ್ದಾಗ ಮಹಾರಾಷ್ಟ್ರದ ಬಿಜೆಪಿ-ಶಿವಸೇನೆ ಸರಕಾರದ ಪೋಲೀಸರು ಅವರ ಮೇಲೆ ಲಾಠೀ ಪ್ರಹಾರ ನಡೆಸುವ ಅಮಾನವೀಯತೆಯನ್ನು ಪ್ರದರ್ಶಿಸಿದ್ದಾರೆ.

ಈ ಲಾಠೀ ಪ್ರಹಾರದಲ್ಲಿ ಹಲವರು ಗಾಯಗೊಂಡಿದ್ದಾರೆ, ಹಲವರನ್ನು ಬಂಧಿಸಲಾಗಿದೆ ಎಂದು ವರದಿಯಾಗಿದೆ. ಅವರಿಗೆ ಧರಣಿ ನಡೆಸಲು ಮಾತ್ರ ಅನುಮತಿ ನೀಡಲಾಗಿತ್ತು, ಅವರು ರ್‍ಯಾಲಿ ನಡೆಸಲು ಹೊರಟಾಗ ಅದನ್ನು ತಡೆಯಲು ಲಘು ಲಾಠೀ ಪ್ರಹಾರ ಮಾಡಲಾಯಿತು ಎಂದು ಪೋಲೀಸರು ತಮ್ಮ ಕ್ರಮವನ್ನು ಸಮರ್ಥಿಸಿಕೊಂಡಿದ್ದಾರೆ.

ಇದು ಅಮಾನುಷ ಕೃತ್ಯ ಎಂದು ರಾಷ್ಟ್ರೀಯ ಅಂಗವಿಕಲರ ಹಕ್ಕುಗಳ ವೇದಿಕೆ(ಎನ್‌ಪಿಆರ್‌ಡಿ) ಬಲವಾಗಿ ಖಂಡಿಸಿದೆ. ಇವರು ಶಿಕ್ಷಣ ಮತ್ತು ಉದ್ಯೋಗ ಕುರಿತಂತೆ ಅಂಗವಿಕಲತೆಯಿರುವ ವ್ಯಕ್ತಿಗಳ ಹಕ್ಕುಗಳ ಕಾಯ್ದೆಯ ಅಂಶಗಳನ್ನು ಜಾರಿಗೆ ತರಬೇಕು ಎಂದು ಆಗ್ರಹಿಸುತ್ತಿದ್ದರು. ಬಹುಪಾಲು ಶಿಕ್ಷಣ ಸಂಸ್ಥೆಗಳಲ್ಲಿ ಈಗಲೂ ಅವರಿಗೆ ಪ್ರವೇಶ ಅಲಭ್ಯವಾಗಿದೆ, ಈ ವಿಭಾಗದವರಿಗಾಗಿ ಮೀಸಲಾದ ಹುದ್ದೆಗಳನ್ನು ಭರ್ತಿಮಾಡಲಾಗುತ್ತಿಲ್ಲ. ಭರ್ತಿ ಮಾಡದ ಹುದ್ದೆಗಳ ಸಂಖ್ಯೆ ಅಪಾರವಾಗಿದ್ದರೂ ಸರಕಾರ ಅವನ್ನು ಭರ್ತಿ ಮಾಡಲು ನಿರಾಕರಿಸುತ್ತಿದೆ. ಸರಕಾರ ಈ ಕುರಿತ ಅವರ ಅಳಲನ್ನು ಕೇಳಲು ನಿರಾಕರಿಸುತ್ತಿರುವುದರಿಂದಾಗಿ ಸಾಮಾಜಿಕ ಕಲ್ಯಾಣ ಆಯುಕ್ತರ ಕಚೇರಿಯಿಂದ ಶಾಂತಿಯುತ ಮೆರವಣಿಗೆ ಹೊರಡಲು ನಿರ್ಧರಿಸಿದಾಗ ಈ ಅಂಗವಿಕಲರ ಮೇಲೆ ಲಾಠೀ ಪ್ರಹಾರ ನಡೆಸಲಾಗಿದೆ.

ಅಂಗವಿಕಲತೆಯಿರುವ ವ್ಯಕ್ತಿಗಳ ಹಕ್ಕುಗಳ ಕಾಯ್ದೆಯನ್ನು 2016ರಲ್ಲಿ ತಂದಿದ್ದು, ಆರುತಿಂಗಳ ಒಳಗೆ ಇದರ ಅನುಷ್ಠಾನಕ್ಕೆ ನಿಯಮಾವಳಿಯನ್ನು ರೂಪಿಸಬೇಕು ಎಂದು ಅದು ವಿಧಿಸಿದೆ. ಆದರೂ ಇದುವರೆಗೂ ಮಹಾರಾಷ್ಟ್ರ ಸರಕಾರ ನಿಯಮಾವಳಿಗಳನ್ನು ರೂಪಿಸದಿರುವುದು ಈ ಕುರಿತ ಅದರ ಅಸಡ್ಡೆಯ ನಿಲುವನ್ನು ಪ್ರಕಟಪಡಿಸಿದೆ. ಈ ಕಾಯ್ದೆಯ ಅಡಿಯಲ್ಲಿ ವಿವಿಧ ಏಜೆನ್ಸಿಗಳನ್ನು, ಸಮಿತಿಗಳನ್ನು ನೇಮಿಸಬೇಕಾಗಿದೆ. ಆ ದಿಕ್ಕಿನಲ್ಲೂ ಸರಕಾರ ಹೆಜ್ಜೆಯಿಟ್ಟಿಲ್ಲ.

ಆದ್ದರಿಂದ ಅಂಗವಿಕಲ ವ್ಯಕ್ತಿಗಳ ಈ ಚಳುವಳಿಗೆ ಬೆಂಬಲ ವ್ಯಕ್ತಪಡಿಸಿರುವ ಎನ್‌ಪಿಆರ್‌ಡಿ ಫಡ್ನವೀಸ್ ಸರಕಾರ ಕೂಡಲೇ ಪ್ರತಿಭಟನಾಕಾರರೊಂದಿಗೆ ಮಾತುಕತೆ ನಡೆಸಬೇಕು, ಅವರ ನ್ಯಾಯಬದ್ಧ ಬೇಡಿಕೆಗಳನ್ನು ಸ್ವೀಕರಿಸಿ ಒಂದು ಸಮಯಬದ್ಧ ಚೌಕಟ್ಟಿನಲ್ಲಿ ಅದನ್ನು ಜಾರಿಗೆ ತರಬೇಕು ಎಂದು ಕರೆ ನೀಡಿದೆ.









ಭಾರತ-ಪಾಕಿಸ್ತಾನ ಪರಿಸ್ಥಿತಿ

ಉದ್ವಿಗ್ನಗೊಳಿಸುವುದಲ್ಲ ಶಮನಗೊಳಿಸಬೇಕಾಗಿದೆ



ರಾಷ್ಟ್ರೋನ್ಮಾದವನ್ನು ಉದ್ರೇಕಿಸಲು ಬಿಜೆಪಿ-ಆರ್‌ಎಸ್‌ಎಸ್ ಕೂಟ ಕಾರ್ಯನಿರತವಾಗಿದೆ. ಸೇಡು ತೀರಿಸಿಕೊಳ್ಳಲು ಮತ್ತು ಮಿಲಿಟರಿ ಕಾರ್ಯಾಚರಣೆ ನಡೆಸುವಂತೆ ಬಹುತೇಕ ಟಿವಿ ಚಾನೆಲ್‌ಗಳು ಕರೆ ನೀಡುತ್ತಿವೆ. ಫೆಬ್ರವರಿ 26 ಮತ್ತು 27ರಂದು ನಡೆದ ದಾಳಿ-ಪ್ರತಿದಾಳಿಗಳು ಪರಿಸ್ಥಿತಿ ಉಲ್ಬಣಿಸಿ ಯುದ್ಧಕ್ಕೆ ದಾರಿ ಮಾಡಿಕೊಡುವ ಅಪಾಯದ ಸೂಚನೆಯಾಗಿದೆ. ಕಾಶ್ಮೀರಿ ಜನರು ತಮ್ಮ ರಾಜಕೀಯಾಟದ ದಾಳಗಳು ಎಂದು ಪರಿಗಣಿಸುವುದುನ್ನು ಮೋದಿ ಸರಕಾರ ಮತ್ತು ಬಿಜೆಪಿ ತಕ್ಷಣವೇ ನಿಲ್ಲಿಸಬೇಕು. ಉದ್ವಿಗ್ನತೆ ಕಡಿಮೆ ಮಾಡಿ ಸಾಮಾನ್ಯ ಸ್ಥಿತಿ ಮರಳಲು ಕ್ರಮಗಳನ್ನು ಕೈಗೊಳ್ಳಬೇಕು. ಭಯೋತ್ಪಾದನೆ ವಿರುದ್ಧದ ಹೋರಾಟವನ್ನು ಸಂಕುಚಿತ ರಾಜಕೀಯ ಲಾಭಕ್ಕೆ ಬಳಸಿಕೊಳ್ಳಬಾರದು.

*** ಪ್ರಕಾಶ್ ಕಾರಟ್**

ಪುಲ್ವಾಮಾದಲ್ಲಿ ನಡೆದಂಥ ಗಡಿಯಾಚೆಯಿಂದ ಪ್ರೇರಿತ ಭಯೋತ್ಪಾದಕ ಆಕ್ರಮಣಗಳನ್ನು ಭಾರತ ಸಹಿಸಿಕೊಳ್ಳುವುದಿಲ್ಲ ಎಂಬ ಪರಿಣಾಮಕಾರಿ ಸಂದೇಶವನ್ನು ಕಳಿಸುವ ಉದ್ದೇಶದಿಂದ ಪಾಕಿಸ್ತಾನದ ಬಾಲಾಕೋಟ್‌ನಲ್ಲಿದ್ದ ಜೈಷ್-ಎ-ಮೊಹಮದ್ (ಜೆಇಎಂ) ಶಿಬಿರದ ಮೇಲೆ ಭಾರತೀಯ ವಾಯು ಪಡೆ ಫೆಬ್ರವರಿ 26ರಂದು ವೈಮಾನಿಕ ದಾಳಿ ನಡೆಸಿತು. ಭಯೋತ್ಪಾದಕರ ನೆಲೆಗೆ ಆದ ಹಾನಿಯ ಲೆಕ್ಕದಲ್ಲಿ ಈ ಕಾರ್ಯಾಚರಣೆಯ ಯಶಸ್ಸು ಎಷ್ಟೆಂಬುದನ್ನು ಇನ್ನೂ ಸಾಬೀತು ಮಾಡಬೇಕಾಗಿದೆ. ಪ್ರಖ್ಯಾತ ಅಂತಾರಾಷ್ಟ್ರೀಯ ರಕ್ಷಣಾ ಉಸ್ತುವಾರಿ ಸಂಸ್ಥೆ 'ಜೇನ್ ಇನ್ಫರ್ಮೇಶನ್ ಗ್ರೂಪ್', ಕಾರ್ಯಾಚರಣೆ ಯಶಸ್ಸಿನ ಬಗ್ಗೆ ಹೇಳಿಕೊಂಡಿರುವುದು "ಊಹಾಪೋಹದ್ದು" ಎಂದು ಅಭಿಪ್ರಾಯಪಟ್ಟಿದೆ. ಅದೇನೇ ಇರಲಿ, ಭಾರತೀಯ ವಾಯುಪಡೆ ಪಾಕಿಸ್ತಾನದ ಗಡಿಯ ಒಳಗೆ ನುಗ್ಗಿ ಕಾರ್ಯಾಚರಣೆ ನಡೆಸಿತೆಂಬುದೇ ಒಂದು ಮಹತ್ವದ ಮಿಲಿಟರಿ ಮಧ್ಯಪ್ರವೇಶವಾಗಿದೆ. ಯಾಕೆಂದರೆ ಅದು ಪಾಕಿಸ್ತಾಓ ಆಕ್ರಮಿತ ಕಾಶ್ಮೀರದ ಗಡಿಗಳನ್ನು ದಾಟಿ ಹೋಗಿತ್ತು.

ಮರುದಿನ ನಿಯಂತ್ರಣ ರೇಖೆಯಲ್ಲಿ ವೈಮಾನಿಕ ದಾಳಿ ಮಾಡುವ ಮೂಲಕ ಪ್ರತೀಕಾರಕ್ಕೆ ಪಾಖಿಸ್ತಾನ ಯತ್ನಿಸಿದ್ದು ಭಾರತೀಯ ವಾಯು ಪಡೆಯ ಯುದ್ಧವಿಮಾನಗಳೊಂದಿಗಿನ ಮುಖಾಮುಖಿಗೆ ಕಾರಣವಾಯಿತು. ಈ ಮುಖಮುಖಿಯಲ್ಲಿ ಎರಡೂ ಕಡೆಯ ತಲಾ ಒಂದು ವಿಮಾನ ನಷ್ಟವಾಯಿತು. ಹೊಡೆದುರುಳಿಸಲಾದ ಭಾರತದ ಮಿಗ್-21 ವಿಮಾನದ ಪೈಲಟ್ ವಿಂಗ್ ಕಮಾಂಡರ್ ಅಭಿನಂದನ್ ಪ್ಯಾರಾಚೂಟ್ ಮೂಲಕ ಹೊರಕ್ಕೆ ಜಿಗಿದಾಗ ನಿಯಂತ್ರಣ ರೇಖೆಯಾಚೆ ಬಿದ್ದು ಪಾಕಿಸ್ತಾನಿ ಸೈನಿಕರ ವಶವಾಗಿದ್ದಾರೆ. ರಜೌರಿ ಮತ್ತು ಪೂಂಚ್ ವಲಯದಲ್ಲಿ ಮಾರ್ಟಾರ್ ಶೆಲ್ ದಾಳಿ ನಡೆದಿದ್ದು ಗಡಿಯಲ್ಲಿರುವ ಗ್ರಾಮಗಳು ಸಂತ್ರಸ್ತವಾಗಿವೆ.

ಈ ರೀತಿಯಾಗಿ ಉಭಯ ದೇಶಗಳ ನಡುವೆ ಮಿಲಿಟರಿ ಮಟ್ಟದ ಉದ್ವಿಗ್ನತೆ ಹಠಾತ್ತನೆ ಹೆಚ್ಚಾಗಿದೆ. ಇದೊಂದು ಅಪಾಯಕಾರಿ ಪರಿಸ್ಥಿತಿಯಾಗಿದ್ದು ಉದ್ವಿಗ್ನತೆಯ ಶಮನಕ್ಕೆ ತಕ್ಷಣವೇ ಕ್ರಮಗಳನ್ನು ಕೈಗೊಳ್ಳಬೇಕು.

ಪುಲ್ವಾಮಾ ದಾಳಿಯ ವಿಚಾರವನ್ನು ಜಗತ್ತಿನ ಪ್ರಮುಖ ದೇಶಗಳೊಂದಿಗೆ ಪರಿಣಾಮಕಾರಿಯಾಗಿ ಪ್ರಸ್ತಾವಿಸುವ ಮೂಲಕ ಭಾರತವು ರಾಜತಾಂತ್ರಿಕ ರಂಗದಲ್ಲಿ ಪ್ರಗತಿಯನ್ನು ಸಾಧಿಸಿತ್ತು. ವಿಶ್ವ ಸಂಸ್ಥೆಯ ಭದ್ರತಾ ಮಂಡಳಿ ಪುಲ್ವಾಮಾ ಆಕ್ರಮಣವನ್ನು ಖಂಡಿಸಿ ಗೊತ್ತುವಳಿಯನ್ನು ಅಂಗೀಕರಿಸಿದೆ. ಜೆಇಎಂ ಈ ದಾಳಿಗೆ ಕಾರಣವೆಂದು ಅದು ಗೊತ್ತುವಳಿಯಲ್ಲಿ ಹೆಸರಿಸಿದೆ. ಈ ಖಂಡನೀಯ ಭಯೋತ್ಪಾದನೆಯ ಸಂಘಟಕರು ಮತ್ತು ಪ್ರಾಯೋಜಕರನ್ನು ಹೊಣೆಗಾರರನ್ನಾಗಿ ಮಾಡಬೇಕು ಹಾಗೂ ಅವರನ್ನು ನ್ಯಾಯಾಲಯದ ಕಟಕಟೆಯಲ್ಲಿ ನಿಲ್ಲಿಸಬೇಕು ಎಂದು ಭದ್ರತಾ ಮಂಡಳಿಯ ಗೊತ್ತುವಳಿ ಕರೆ ನೀಡಿದೆ. ಇಂಥ ಭಯೋತ್ಪಾದಕ ಚಟುವಟಿಕೆಗಳನ್ನು ತಡೆಯಲು ದೃಢವಾದ ಕ್ರಮಗಳನ್ನು ಕೈಗೊಳ್ಳಬೇಕೆಂದು ವಿಶ್ವ ಸಂಸ್ಥೆಯು ಎಲ್ಲಾ ದೇಶಗಳಿಗೆ ಕರೆ ನೀಡಿದೆ.

ಜೆಇಎಂ, ಲಷ್ಕರ್ ಎ ತೊಯ್ಬಾ ಮತ್ತಿತರ ಉಗ್ರಗಾಮಿ ಸಂಘಟನೆಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಪಾಕಿಸ್ತಾನದ ಮೇಲೆ ಇನ್ನಷ್ಟು ಒತ್ತಡಗಳನ್ನು ಹೇರುವ ದಿಸೆಯಲ್ಲಿ ರಾಜತಾಂತ್ರಿಕ ಮತ್ತು ರಾಜಕೀಯ ರಂಗದ ಪ್ರಯತ್ನಗಳನ್ನು ಭಾರತ ಮುಂದುವರಿಸಬೇಕು. ಪುಲ್ವಾಮಾ ದಾಳಿಯಲ್ಲಿ ಜೆಇಎಂ ಪಾತ್ರ ಮತ್ತು ಅದರ ಇತರ ಚಟುವಟಿಕೆಗಳ ಕುರಿತ ಸಾಕ್ಷ್ಯವನ್ನು ಭಾರತ ಈಗಾಗಲೇ ಪಾಕಿಸ್ತಾನಕ್ಕೆ ಸಲ್ಲಿಸಿದೆ.

ಆಳುವ ಪಕ್ಷದ ಚುನಾವಣಾ ಲಾಭಕ್ಕೆ ಹೊರತಾಗಿ ಮಿಲಿಟರಿ ಕಾರ್ಯಾಚರಣೆಯು ಗಡಿಯಾಚೆಯಿಂದ ನಡೆಯುವ ಭಯೋತ್ಪಾದನೆಯನ್ನು ನಿಗ್ರಹಿಸುವಲ್ಲಿ ವ್ಯೂಹಾತ್ಮಕ ಯಶಸ್ಸನ್ನು ಸಾಧಿಸುತ್ತದೆಯೋ ಇಲ್ಲವೋ ಎಂದು ಕಳೆದ ವಾರದ ಲೇಖನದಲ್ಲಿ ಪ್ರಸ್ತಾವಿಸಲಾಗಿತ್ತು.

ಪುಲ್ವಾಮಾ ದಾಳಿಯ ನಂತರದಲ್ಲಿ ಪ್ರಧಾನಿ ಮತ್ತು ಬಿಜೆಪಿ ಅಧ್ಯಕ್ಷ ಅಮಿತ್ ಷಾ ಅವರ ನಡವಳಿಕೆ ಪುಲ್ವಾಮಾದ ಹುತಾತ್ಮರ ಹೆಸರಿನಲ್ಲಿ ಪ್ರತೀಕಾರ ತೆಗೆದುಕೊಳ್ಳುವುದಕ್ಕೆ ಕರೆ ನೀಡುವಂತಿತ್ತು. ಜನರ ಭಾವನೆಗಳನ್ನು ಕೆಣಕಿ ರಾಜಕೀಯ ಬಂಡವಾಳವಾಗಿ ಮಾಡಿಕೊಳ್ಳಲು ಬಳಸಿಕೊಳ್ಳುವಂತಿತ್ತು. ಫೆಬ್ರವರಿ 26ರ ವೈಮಾನಿಕ ದಾಳಿ ನಡೆದ ತಕ್ಷಣದಲ್ಲಿ ಕೂಡ, ಸಾರ್ವಜನಿಕ ಸಭೆಯೊಂದರಲ್ಲಿ ಅಮಿತ್ ಷಾ, 'ಗಠಬಂಧನ್' ಸರಕಾರ ಇಲ್ಲದೆ, ಬಿಜೆಪಿ ಸರಕಾರವಿದ್ದ ಕಾರಣಕ್ಕೆ ಈ ದಾಳಿ ಸಾಧ್ಯವಾಯಿತು, ಎಂದು ಹೇಳಿದರು.

ರಾಷ್ಟ್ರೋನ್ಮಾದವನ್ನು ಉದ್ರೇಕಿಸಲು ಬಿಜೆಪಿ-ಆರ್‌ಎಸ್‌ಎಸ್ ಕೂಟ ಕಾರ್ಯನಿರತವಾಗಿದೆ. ಸೇಡು ತೀರಿಸಿಕೊಳ್ಳಲು ಮತ್ತು ಮಿಲಿಟರಿ ಕಾರ್ಯಾಚರಣೆ ನಡೆಸುವಂತೆ ಬಹುತೇಕ ಟಿವಿ ಚಾನೆಲ್‌ಗಳು ಕರೆ ನೀಡುತ್ತಿವೆ. ಫೆಬ್ರವರಿ 26 ಮತ್ತು 27ರಂದು ನಡೆದ ದಾಳಿ-ಪ್ರತಿದಾಳಿಗಳು ಪರಿಸ್ಥಿತಿ ಉಲ್ಬಣಿಸಿ ಯುದ್ಧಕ್ಕೆ ದಾರಿ ಮಾಡಿಕೊಡುವ ಅಪಾಯದ ಸೂಚನೆಯಾಗಿದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಮೋದಿ ಸರಕಾರದ ವೈಫಲ್ಯವೇ ಅಲ್ಲಿ ಹಿಂಸೆ ಮತ್ತು ಭಯೋತ್ಪಾದನೆ ಮುಂದುವರಿಯಲು ಮೂಲ ಕಾರಣವಾಗಿದೆ. ಕಳೆದ ಸುಮಾರು ಐದು ವರ್ಷಗಳಲ್ಲಿ ಕಾಶ್ಮೀರ ವಿಚಾರದಲ್ಲಿ ಇತ್ಯರ್ಥಕ್ಕಾಗಿ ರಾಜಕೀಯ ಪ್ರಕ್ರಿಯೆಯನ್ನು ಆರಂಭಿಸುವ ಯಾವುದೇ ರಾಜಕೀಯ ಉಪಕ್ರಮವನ್ನು ಕೈಗೊಳ್ಳಲಾಗಿಲ್ಲ. ಅದಕ್ಕೆ ಬದಲಿಗೆ, ಕೋಮುವಾದಿ ಭಾವನೆಗಳನ್ನು ಉದ್ದೀಪಿಸಲು ಮತ್ತು 35-ಎ ವಿಧಿಯಂಥ ಸೂಕ್ಷ್ಮ ವಿಚಾರಗಳನ್ನು ಕೆದಕುವ ನಿಟ್ಟಿನಲ್ಲಿ ಬಿಜೆಪಿ ಛಿದ್ರಕಾರಿ ಪಾತ್ರವನ್ನು ನಿರ್ವಹಿಸಿದೆ. ಪುಲ್ವಾಮಾ ದಾಳಿಯ ನಂತರ ಕೈಗೊಂಡ ದಮನಕಾರಿ ಕ್ರಮಗಳು ಪರಿಸ್ಥಿತಿಯನ್ನು ಇನ್ನಷ್ಟು ಬಿಗಡಾಯಿಸಲಿವೆ.

ಕಾಶ್ಮೀರಿ ಜನರು ತಮ್ಮ ರಾಜಕೀಯಾಟದ ದಾಳಗಳು ಎಂದು ಪರಿಗಣಿಸುವುದುನ್ನು ಮೋದಿ ಸರಕಾರ ಮತ್ತು ಬಿಜೆಪಿ ತಕ್ಷಣವೇ ನಿಲ್ಲಿಸಬೇಕು. ಉವಿಗ್ನತೆ ಕಡಿಮೆ ಮಾಡಿ ಸಾಮಾನ್ಯ ಸ್ಥಿತಿ ಮರಳಲು ಕ್ರಮಗಳನ್ನು ಕೈಗೊಳ್ಳಬೇಕು. ಭಯೋತ್ಪಾದನೆ ವಿರುದ್ಧದ ಹೋರಾಟವನ್ನು ಸಂಕುಚಿತ ರಾಜಕೀಯ ಲಾಭಕ್ಕೆ ಬಳಸಿಕೊಳ್ಳಬಾರದು. ಒಂದು ಬೃಹತ್ ಪ್ರಜಾಸತ್ತಾತ್ಮಕ ಕಾರ್ಯಾಚರಣೆ, ಅಂದರೆ ಲೋಕಸಭೆ ಚುನಾವಣೆಗೆ ದೇಶದ ಮುಂದಿದೆ, ಅದಕ್ಕೆ ಸಜ್ಜಾಗಬೇಕಿದೆ.

ಅನು: ವಿಶ್ವ

ಅಕ್ರಮ ಟೋಲ್‌ಗೇಟ್ ತೆರವುಗೊಳಿಸಲು ಸುರತ್ಕಲ್‌ನಲ್ಲಿ ಜನಾಗ್ರಹ ಸಭೆ:

ಮಂಗಳೂರು ಮಹಾನಗರ ವ್ಯಾಪ್ತಿಯ ಸುರತ್ಕಲ್ ಎನ್‌ಐಟಿಕೆ ಬಳಿಯ ಕರಾವಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಕಳೆದ ನಾಲ್ಕು ವರ್ಷಗಳಿಂದ ಸ್ಥಾಪಿಸಿ, ಖಾಸಗಿ ಗುತ್ತಿಗೆದಾರರ ಮೂಲಕ ಸಂಚರಿಸುವ ವಾಹನಗಳಿಂದ ಟೋಲ್ ಸಂಗ್ರಹ ಮಾಡುತ್ತಿದ್ದಾರೆ. ಈ ರಾಷ್ಟ್ರೀಯ ಹೆದ್ದಾರಿಯಲ್ಲಿ ದ.ಕ. ಜಿಲ್ಲೆಯ ದಕ್ಷಿಣ ತುದಿಯಲ್ಲಿರುವ ತಲಪಾಡಿಯಿಂದ ಉತ್ತರದ ತುದಿಯಲ್ಲಿರುವ ಹೆಜಮಾಡಿಯಲ್ಲಿ ಎರಡು ಟೋಲ್‌ಗೇಟ್ ಸ್ಥಾಪನೆಯಾಗಿದ್ದು, ಅವುಗಳ ಮಧ್ಯೆ ಸುರತ್ಕಲ್‌ನಲ್ಲಿ ಟೋಲ್‌ಗೇಟ್ ಆರಂಭಿಸಿರುವುದು ಅಕ್ರಮವಾಗಿದೆ. ಹಾಗಾಗಿ ಈ ಹೆಚ್ಚುವರಿ ಟೋಲ್‌ಗೇಟನ್ನು ತೆರವುಗೊಳಿಸಬೇಕೆಂದು ಆಗ್ರಹಿಸಿ ಸುರತ್ಕಲ್ ಪರಿಸರದ ನಾಗರಿಕರು ಟೋಲ್‌ಗೇಟ್ ವಿರೋಧಿ ಹೋರಾಟ ಸಮಿತಿ ರಚಿಸಿಕೊಂಡಿದ್ದು, ಈ ಸಮಿತಿಯಿಂದ ಈಗಾಗಲೇ ಕಳೆದ 3 ವರ್ಷಗಳಲ್ಲಿ ಹಲವು ಪ್ರತಿಭಟನೆಗಳು ನಡೆದಿವೆ.

ಈ ಪ್ರತಿಭಟನೆಗಳಲ್ಲಿ ಕೆಲವು ತಿಂಗಳ ಹಿಂದೆ ಕೂಳೂರಿನಿಂದ ಸುರತ್ಕಲ್ ಟೋಲ್‌ಗೇಟ್‌ವರೆಗೆ ನಡೆದ ಪಾದಯಾತ್ರೆ ಒಂದು ಪ್ರಮುಖ ಹೋರಾಟವಾಗಿತ್ತು. ಬಳಿಕ ಕಳೆದ ನವಂಬರದಲ್ಲಿ 11 ದಿನಗಳ ಅಹೋರಾತ್ರಿ ಧರಣಿ ಸತ್ಯಾಗ್ರಹವನ್ನು ನಡೆಸಲಾಗಿತ್ತು. ಅದರ ಬಳಿಕ ಟೋಲ್‌ಗೇಟನ್ನು ರದ್ದುಗೊಳಿಸುವ ಬಗ್ಗೆ ಕೇಂದ್ರ ಸರಕಾರದ ಇಲಾಖೆ ಹಾಗೂ ಸಚಿವರೊಂದಿಗೆ ವ್ಯವಹರಿಸುವುದಾಗಿ ದ.ಕ. ಜಿಲ್ಲೆಯ ಉಸ್ತುವಾರಿ ಸಚಿವರಾದ ಯು.ಟಿ.ಖಾದರ್ ದ.ಕ.ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ಭರವಸೆ ನೀಡಿದ ಮೇರೆಗೆ ಧರಣಿ ಸತ್ಯಾಗ್ರಹವನ್ನು ಹಿಂತೆಗೆಯಲಾಗಿತ್ತು.

ಈ ಸತ್ಯಾಗ್ರಹ ನಡೆದು 3 ತಿಂಗಳು ಕಳೆದರೂ ಯಾವ ಕ್ರಮವನ್ನೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಕೈಗೊಂಡಿಲ್ಲ ಮಾತ್ರವಲ್ಲ ಮತ್ತೊಂದು ಅವಧಿಗೆ ಟೋಲ್ ಗುತ್ತಿಗೆಯನ್ನು ಗುತ್ತಿಗೆದಾರರಿಗೆ ಮುಂದುವರಿಸಿತು. ಇದನ್ನು ಪ್ರತಿಭಟಿಸಿ ಫೆಬ್ರವರಿ 28 ರಂದು ಸುರತ್ಕಲ್ ಎನ್‌ಐಟಿಕೆ ಟೋಲ್‌ಗೇಟ್ ಎದುರು ಹೋರಾಟ ಸಮಿತಿಯು ಪ್ರತಿಭಟನೆ ನಡೆಸಿದೆ. ಈ ಸಮಿತಿ ಈ ಜನಾಗ್ರಹ ಸಭೆಯಲ್ಲಿ ಟೋಲ್‌ಗೇಟನ್ನು ಆತ್ಯಂತಿಕವಾಗಿ ನಿಲುಗಡೆ ಮಾಡುವ ನಿರ್ಣಯ ಕೈಗೊಂಡಿದ್ದು ಈ ಬಗ್ಗೆ ನಾಳೆಯಿಂದಲೇ ಕಾರ್ಯಕ್ರಮ ಹಾಕಿಕೊಂಡಿದೆ.

ಈ ಜನಾಗ್ರಹ ಸಭೆಯನ್ನು ಉದ್ದೇಶಿಸಿ, ಇಡೀ ಹೋರಾಟದ ವಿವರವನ್ನು ಸಮಿತಿಯ ಪ್ರಧಾನ ಸಂಚಾಲಕ ಮುನೀರ್ ಕಾಟಿಪಳ್ಳ ಮಾತನಾಡಿ, ಈ ಪ್ರದೇಶದ ಸಂಸದ ನಳಿನ್ ಕುಮಾರ್ ಕಟೀಲ್ ಬೇಜವಬ್ದಾರಿಯ ಮಾತುಗಳನ್ನು ಆಗೀಗ ಹರಿಯಬಿಡುತ್ತಿದ್ದಾರೆ ಎಂಬುದಾಗಿ ಟೀಕಿಸಿದರು. ಹೋರಾಟ ಸಮಿತಿಯ ಪ್ರಮುಖರಾದ ಮಾಜಿ ಸಚಿವ ವಿಜಯ ಕುಮಾರ್ ಶೆಟ್ಟಿ, ಹಾಲಿ ಮಂಗಳೂರು ಪಾಲಿಕೆ ಸದಸ್ಯರಾದ ಪುರುಷೋತ್ತಮ ಚಿತ್ರಾಪುರ, ರೇವತಿ ಪುತ್ರನ್, ಸಿಪಿಐ(ಎಂ) ಪಾಲಿಕೆ ಸದಸ್ಯ ದಯಾನಂದ ಶೆಟ್ಟಿ, ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಮಾಜಿ ಸಚಿವ ಅಭಯಚಂದ್ರ ಜೈನ್ ಮೊದಲಾದವರು ಹೋರಾಟವನ್ನು ಬೆಂಬಲಿಸಿ ಮಾತನಾಡಿದರು.

ಡಿವೈಎಫ್‌ಐ ದ.ಕ.ಜಿಲ್ಲಾಧ್ಯಕ್ಷ ಬಿ.ಕೆ.ಇಮ್ತಿಯಾಜ್ ಸ್ವಾಗತಿಸಿ ಕಾರ್ಯಕ್ರಮ ನಿರ್ವಹಿಸಿದರು. ಕಾರ್ಯದರ್ಶಿ ಸಂತೋಷ್ ಬಜಾಲ್ ಹಾಗೂ ಜನತಾದಳ ಕಾರ್ಯತಕರ್ತರು ಸಂಘ ಸಂಸ್ಥೆಗಳ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಭೂಮಿ ಹಕ್ಕು ಮತ್ತು ಇತರ ಬೇಡಿಕೆಗಳಿಗಾಗಿ ಕೃಷಿ ಕಾರ್ಮಿಕರ ಧರಣಿ





ಅರಣ್ಯ ಹಕ್ಕು ಕಾಯ್ದೆ ಅಡಿಯಲ್ಲಿ ತಮ್ಮ ಹಕ್ಕನ್ನು ಸಾಬೀತುಪಡಿಸಲು ಸಾಧ್ಯವಾಗದೇ ತಿರಸ್ಕರಿಸಲ್ಪಟ್ಟ ಅರ್ಜಿದಾರರನ್ನು ಮುಂದಿನ ಜುಲೈ 24 ರೊಳಗೆ ಅವರು ಮಾಡುತ್ತಿದ್ದಾರೆ ಭೂಮಿಯಿಂದ ಒಕ್ಕಲೆಸಬೇಕೆಂದು ಸುಪ್ರೀಂಕೋರ್ಟ್ ನೀಡಿದ ಆದೇಶವನ್ನು ಸುಗ್ರೀವಾಜ್ಞೆಯ ಮೂಲಕ ತಡೆಹಿಡಿಯಬೇಕು ಎಂದು ಆಗ್ರಹಿಸಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘವು ಇಂದು ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಿ ಸರ್ಕಾರಕ್ಕೆ ಮನವಿ ಪತ್ರವನ್ನು ಸಲ್ಲಿಸಿತು. ಇದಕ್ಕೂ ಮೊದಲು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಮೆರವಣಿಗೆಯಲ್ಲಿ ಆಗಮಿಸಿದ ಪ್ರತಿಭಟನಾಕಾರರು ಸ್ವಾತಂತ್ರ ಉದ್ಯಾನದಲ್ಲಿ ಧರಣಿ ನಡೆಸಿದರು.

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿ ಹಾಗೂ ಮಾಜಿ ರಾಜ್ಯಸಭಾ ಸದಸ್ಯರಾದ ಎ. ವಿಜಯ್‌ರಾಘವನ್, ರಾಜ್ಯ ಘಟಕದ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ, ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ, ಉಪಾಧ್ಯಕ್ಷರಾದ ಜಿ.ಎನ್. ನಾಗರಾಜ್, ಭೀಮಶೆಟ್ಟಿ ಯಂಪಳ್ಳಿ, ಎಂ. ಪುಟ್ಟಮಾದು, ಕರಿಯಪ್ಪ ಅಚ್ಚೊಳ್ಳಿ, ಸಹ ಕಾರ್ಯದರ್ಶಿಗಳಾದ ದಾವಲ್ ಸಾಬ್ ನದಾಫ್, ಕೆ. ನಾಗರಾಜ್, ಹನುಮೇಗೌಡ ಹೋರಾಟದ ನೇತೃತ್ವ ವಹಿಸಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದ ಸ್ವಾಮಿ ಅವರು ಮಾತನಾಡುತ್ತಾ, "ಅರಣ್ಯದಲ್ಲಿ ನೆಲೆಸಿರುವ ಆದಿವಾಸಿಗಳು ಅರಣ್ಯ ನಾಶ ಮಾಡುವುದಿಲ್ಲ. ಅವರು ಅರಣ್ಯದಲ್ಲಿರುವ ಮರಗಳನ್ನು ಹಾಗೂ ವನ್ಯಜೀವಿಗಳನ್ನು ಪೂಜಿಸುತ್ತಾರೆ. ಆದಿವಾಸಿಗಳು ಅರಣ್ಯದಲ್ಲಿ ನೆಲೆಸಿರುವುದರಿಂದ ಕಾಡುಗಳ್ಳರ ಹಾವಳಿ ಹತೋಟಿಯಲ್ಲಿದೆ" ಎಂದು ಹೇಳಿದರು. ಪಾರಂಪರಿಕ ಅರಣ್ಯ ಭೂಮಿ ಸಾಗುವಳಿದಾರರು ಸಹ ಅರಣ್ಯವನ್ನು ನಾಶ ಮಾಡುವುದಿಲ್ಲ. ಅವರು ಅರಣ್ಯದ ಅಂಚಿನಲ್ಲಿ ಇರುವ ಮರಗಳೇ ಇಲ್ಲದ, ಅರಣ್ಯ ವ್ಯಾಪ್ತಿಗೆ ಸೇರುವ ಪಡಭೂಮಿಯನ್ನು ಸಾಗುವಳಿ ಮಾಡುತ್ತಾ ಬಂದಿದ್ದಾರೆ ಎಂದರು. ಇವರನ್ನು ಅರಣ್ಯ ಭೂಮಿಯಿಂದ ತೆರವುಗೊಳಿಸಿದರೆ ಸುಮಾರು 20 ಲಕ್ಷಕ್ಕೂ ಹೆಚ್ಚು ಆದಿವಾಸಿ ಹಾಗೂ ಇತರ ಬಡ ಕುಟುಂಬಗಳು ಬೀದಿ ಪಾಲಾಗಲಿದ್ದಾರೆ ಎಂದು ಹೇಳಿದ ಅವರು ಕೇಂದ್ರ ಸರ್ಕಾರ ಕೂಡಲೇ ಮಧ್ಯಪ್ರವೇಶ ಮಾಡಿ ಸುಗ್ರೀವಾಜ್ಞೆಯೊಂದನ್ನು ಹೊರಡಿಸುವ ಮೂಲಕ ಈ ಅನಾಹುತವನ್ನು ತಡೆಗಟ್ಟಬೇಕು ಎಂದು ಆಗ್ರಹಿಸಿದರು.



ಕೃಷಿ ಕಾರ್ಮಿಕರ ಇತರ ಬೇಡಿಕೆಗಳನ್ನು ಪ್ರಸ್ತಾಪಿಸಿದ ಅವರು ಕೇರಳ ರಾಜ್ಯದಲ್ಲಿ ಕೃಷಿ ಕಾರ್ಮಿಕರನ್ನು 60 ನೇ ವಯಸ್ಸಿನಲ್ಲಿ ನಿವೃತ್ತಿ ಘೋಷಿಸಿ ಅವರಿಗೆ ಕೈಗಾರಿಕಾ ಕಾರ್ಮಿಕರಂತೆ ವಾರ್ಷಿಕ ನಿವೃತ್ತಿ ವೇತನ ನೀಡಲಾಗುತ್ತದೆ. ಕೇರಳದ ಕೃಷಿ ಕಾರ್ಮಿಕರಿಗಾಗಿ ಸಮಗ್ರವಾದ ಕಲ್ಯಾಣ ಕಾಯ್ದೆ ಮತ್ತು ಕಲ್ಯಾಣ ಮಂಡಳಿ ನಿರ್ವಹಿಸುತ್ತಿರುವ ಕಲ್ಯಾಣ ನಿಧಿಯನ್ನು ರೂಪಿಸಲಾಗಿದೆ ಎಂದರು. ಕರ್ನಾಟಕದ ಸಮ್ಮಿಶ್ರ ಸರಕಾರವು ಇಂತಹ ಕಾಯ್ದೆಯನ್ನು ರೂಪಿಸಿ ಸಮಾಜದಲ್ಲಿ ಕಟ್ಟ ಕಡೆಯವರಾದ ಕೃಷಿ ಕಾರ್ಮಿಕರ ಹಿತರಕ್ಷಣೆಗೆ ಮುಂದಾಗಬೇಕು ಎಂದು ಆಗ್ರಹಿಸಿದರು. ಕರ್ನಾಟಕ ಬರಗಾಲಕ್ಕೆ ತುತ್ತಾಗಿ ಬರುತ್ತಿರುವುದರಿಂದ ಕೃಷಿ ಕಾರ್ಮಿಕರು ಅಕ್ಕ ಪಕ್ಕದ ರಾಜ್ಯಗಳಿಗೆ ವಲಸೆ ಹೋಗುತ್ತಿದ್ದಾರೆ ಎಂದ ಅವರು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ವ್ಯಾಪಕವಾಗಿ ಜಾರಿಗೊಳಿಸಲು ಕೇಂದ್ರ ಸರ್ಕಾರ ತಾರತಮ್ಯ ಮಾಡದೆ ಅಗತ್ಯ ಅನುದಾನವನ್ನು ನೀಡಬೇಕೆಂದು ಆಗ್ರಹಿಸಿದರು.

ರಾಜ್ಯ ಪದಾಧಿಕಾರಿಗಳಾದ ಜಿ.ಎನ್. ನಾಗರಾಜ್, ಚಂದ್ರಪ್ಪ ಹೊಸ್ಕೇರಾ, ಎಂ. ಪುಟ್ಟಮಾದು, ಕೆ. ಹನುಮೇಗೌಡ, ಕೆ. ನಾಗರಾಜ ಮೊದಲಾದವರು ಮಾತನಾಡಿದರು. ಪ್ರತಿಭಟನಾಕಾರರ ನಿಯೋಗ ವಿಧಾನ ಸೌಧಕ್ಕೆ ತೆರಳಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಟಿ.ಎಂ. ವಿಜಯಭಾಸ್ಕರ್‌ರವರಿಗೆ ಮನವಿ ಪತ್ರವನ್ನು ಸಲ್ಲಿಸಿತು. ಮನವಿಯನ್ನು ಸ್ವೀಕರಿಸಿದ ಅವರು ಸಂಬಂಧಪಟ್ಟ ಇಲಾಖೆಗಳ ಹಿರಿಯ ಅಧಿಕಾರಿಗಳು ಸಭೆ ಕರೆಯುವುದಾಗಿ ಹೇಳಿದರು. ಚಿಕ್ಕಬಳ್ಳಾಪುರ, ಮಂಡ್ಯ, ರಾಯಚೂರು, ಕೊಪ್ಪಳ, ಬಳ್ಳಾರಿ, ಯಾದಗಿರಿ, ಕಲಬುರ್ಗಿ, ಬೀದರ್, ಬೆಳಗಾವಿ, ಗದಗ, ಮೊದಲಾದ ಜಿಲ್ಲೆಗಳಿಂದ ಸಾವಿರಾರು ಕೂಲಿಕಾರರು ಭಾಗವಹಿಸಿದ್ದರು.



ಬಡವರ ವಿರೋಧಿ ನರೇಂದ್ರ ಮೋದಿ ಸರಕಾರವನ್ನು ಕಿತ್ತೊಗೆಯಿರಿ ಕೃಷಿಕೂಲಿಕಾರರ ರ್‍ಯಾಲಿಯಲ್ಲಿ ವಿಜಯರಾಘವನ್ ಕರೆ



ದೇಶದ ಸಂಸತ್ತಿಗೆ ಚುನಾವಣೆ ನಡೆಯುವ ಹೊಸ್ತಿಲಲ್ಲಿ ಕೃಷಿಕೂಲಿಕಾರರ ಈ ರ್‍ಯಾಲಿಯನ್ನು ಬೆಂಗಳೂರಿನಲ್ಲಿ ಸಂಘಟಿಸಿದ್ದೀರಿ. ಈ ಸಂದರ್ಭದಲ್ಲಿ ಕಳೆದ ಐದು ವರ್ಷಗಳ ಕಾಲ ಕೇಂದ್ರದಲ್ಲಿ ಅಧಿಕಾರ ನಡೆಸಿದ ಮೋದಿ ಸರಕಾರದ ಆಡಳಿತವನ್ನು ವಿಮರ್ಶಿಸುವ ಕಾಲ ಇದಾಗಿದೆ. ಐದು ವರ್ಷದ ಮೋದಿ ಆಡಳಿದಲ್ಲಿ ದೇಶದ ಶ್ರೀಮಂತರಿಗೆ ಸುಮಾರು 14 ಲಕ್ಷ ಕೋಟಿ ರುಪಾಯಿಗಳನ್ನು ಅವರು ಧಾರೆ ಎರೆದಿದ್ದಾರೆ. ಇದರಲ್ಲಿ 4.5 ಲಕ್ಷ ಕೋಟಿ ರೂ. ಶ್ರೀಮಂತರು ಬ್ಯಾಂಕ್‌ಗಳಿಂದ ಪಡೆದ ಸಾಲದ ಮನ್ನಾ ಹಾಗೂ ರಿಸರ್ವ ಬ್ಯಾಂಕ್ ನ 1.30 ಲಕ್ಷ ಕೋಟಿ ರೂ. ಸೇರಿದೆ.

ಆದರೆ ಅದೇ ವೇಳೆಗೆ ಬಡಜನರು, ಕೃಷಿಕೂಲಿಕಾರರಿಗೆ ಮೋದಿ ಆಡಳಿತದಲ್ಲಿ ಏನೂ ಸಿಗಲಿಲ್ಲ ಮಾತ್ರವಲ್ಲ ಉದ್ಯೋಗ ಖಾತ್ರಿ, ಆಹಾರ ಭದ್ರತೆ, ಆರೋಗ್ಯ, ಶಿಕ್ಷಣ ಮೊದಲಾದ ರಂಗಗಳಿಗೆ ನೀಡುತ್ತಿದ್ದ ಅನುದಾನವನ್ನೇ ಕಡಿತ ಮಾಡಿ ಕೋಟ್ಯಾಂತರ ಕೃಷಿಕೂಲಿಕಾರರನ್ನು ನಿರ್ಲಕ್ಷ್ಯ ಮಾಡಲಾಗಿದೆ ಎಂದು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಪ್ರಧಾನ ಕಾರ್ಯದರ್ಶಿ ಹಾಗೂ ಮಾಜಿ ಸಂಸತ್ ಸದಸ್ಯರೂ ಆದ ಎ. ವಿಜಯರಾಘವನ್ ಆರೋಪಿಸಿದರು.

ನಮ್ಮ ದೇಶದಲ್ಲಿ ಉದಾರಿಕರಣ ನೀತಿಗಳು ಜಾರಿಯಾದ ಬಳಿಕ ಕೃಷಿ ಬಿಕ್ಕಟ್ಟು ತೀವ್ರಗೊಂಡು ಗ್ರಾಮೀಣ ಭಾಗದ ರೈತಾಪಿ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಇದರಿಂದಾಗಿ ಕೃಷಿಕೂಲಿಕಾರರಿಗೆ ಸಿಗುತ್ತಿದ್ದ ಉದ್ಯೋಗವಕಾಶಗಳು ಕಡಿಮೆಯಾಗಿವೆ. 2016 ನವೆಂಬರ್ ನಲ್ಲಿ ಜಾರಿ ಮಾಡಲಾದ ನೋಟು ಅಮಾನ್ಯೀಕರಣ ಬಳಿಕ ದೇಶದಲ್ಲಿ ನಿರುದ್ಯೋಗ ಹಿಂದೆದೂ ಕೇಳರಿಯದ ಮಟ್ಟ ತಲುಪಿದೆ ಹೀಗಾಗಿ ಈ ಸರಕಾರ ಇದ್ದಷ್ಟು ನಿರುದ್ಯೋಗಿ ಯುವಕರು, ಬಡವರು ಹಾಗೂ ಕೃಷಿಕೂಲಿಕಾರರಿಗೆ ಸಂಕಷ್ಟ ತಪ್ಪಿದ್ದಲ್ಲ ಆದ್ದರಿಂದ ಸಾಧ್ಯವಾದಷ್ಟು ಬೇಗ ಈ ಜನ ವಿರೋಧಿ ಮೋದಿ ಸರಕಾರವನ್ನು ಸೋಲಿಸುವ ಅವಶ್ಯಕತೆಯನ್ನು ⇨

ಭೀಕರ ಬರ: ಬಾಕಿ ಅನುದಾನ ನೀಡಲು ಮೋದಿ ಸರ್ಕಾರಕ್ಕೆ ಕೂಲಿಕಾರರ ಆಗ್ರಹ



ರಾಜ್ಯಾದ್ಯಂತ ಭೀಕರ ಬರ ಅವರಿಸಿದೆ. ಜನ, ಜಾನುವಾರುಗಳಿಗೆ ಕುಡಿಯಲು ನೀರಿಲ್ಲ. ಕೂಲಿಕಾರರಿಗೆ ಕೆಲಸ ಇಲ್ಲ. ಅವಮಾನಕರ, ಅವಮಾನವೀಯವಲಸೆ ಹೆಚ್ಚುತ್ತಿದೆ. ವಲಸೆ ಹೋದವರಿಗೆ ರಕ್ಷಣೆ ಇಲ್ಲ. ಕನಿಷ್ಠ ಸೌಲಭ್ಯಗಳಿಲ್ಲ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅವರ ನೆರವಿಗೆ ಬರುತ್ತಿಲ್ಲ.



ಸರ್ಕಾರದ ಪ್ರಧಾನ ಕಾರ್ಯದರ್ಶಿ ಎಲ್. ಕೆ ಅತೀಕ್

ಸಂತ ಭೂಮಿ ಇಲ್ಲದ ಗ್ರಾಮೀಣ ಕೆಲಸಗಾರರು ಕೆಲಸ ಅರಸಿ ವಲಸೆ ಹೋಗುವುದನ್ನು ತಡೆಯಲು ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ರೂಪಿಸಲಾಗಿತ್ತು. ಆದರೆ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರಕ್ಕಾಗಲಿ ಈಗ ಅಧಿಕಾರ ನಡೆಸುತ್ತಿರುವ ಮೋದಿ ನೇತೃತ್ವದ ಬಿಜೆಪಿ ಸರ್ಕಾರವಾಗಲಿ ಈ ಯೋಜನೆಯ ಸಮರ್ಪಕ ಅನುಷ್ಠಾನದ ವಿಷಯದಲ್ಲಿ ಆಸಕ್ತಿ ಹೊಂದಿಲ್ಲ. ಈ ಎರಡು ಸರ್ಕಾರಗಳು ಉದಾರೀಕರಣ, ಜಾಗತೀಕರಣ ನೀತಿಗಳನ್ನು ಸಮರ್ಥಿಸುತ್ತಿರುವುದುರಿಂದ ದುರ್ಬಲ ವರ್ಗಗಳಿಗೆ ಸೇರಿದ ಜನರ ಪರವಾಗಿ ಸರ್ಕಾರ ಮಧ್ಯ ಪ್ರವೇಶ ಮಾಡುವುದನ್ನು ಕಾಂಗ್ರೆಸ್ ಪಕ್ಷದ ಸರ್ಕಾರವೇ ಆಗಲಿ, ಬಿಜೆಪಿ ಪಕ್ಷದ ಸರ್ಕಾರವೇ ಆಗಲಿ ಆದ್ಯತೆ ನೀಡುವುದಿಲ್ಲ. ಹೀಗಾಗಿ ಮೋದಿ ಆಡಳಿತದಲ್ಲಿ ಉದ್ಯೋಗ ಖಾತರಿ ಯೋಜನೆ ಸೊರಗುತ್ತಿದೆ. ಬಜೆಟ್ ನಲ್ಲಿ ಹೆಚ್ಚಿಗೆ ಹಣ ಘೋಷಿಸುತ್ತಾರೆ. ಆದರೆ ರಾಜ್ಯಗಳಲ್ಲಿ ಹಂಚುವಾಗ ತಾರತಮ್ಯ ಮಾಡುತ್ತಾರೆ. ವಿರೋಧ ಪಕ್ಷಗಳು ಸರ್ಕಾರ ಇರುವ ರಾಜ್ಯಗಳಿಗೆ ಪಕ್ಷಪಾತ ಮಾಡುತ್ತಾರೆ. ಕರ್ನಾಟಕದಲ್ಲಿ ವಿರೋಧ ಪಕ್ಷಗಳ ಸರ್ಕಾರ ಇರುವುದರಿಂದ ರಾಜ್ಯದ ಉದ್ಯೋಗ ಖಾತ್ರಿ ಕೆಲಸಕ್ಕೆ ಅನುದಾನ ನೀಡುವುದರಲ್ಲಿ ಪಕ್ಷಪಾತ ಮಾಡುತ್ತಾರೆ. ಕೋಟಿಗಟ್ಟಲೆ ರೂ. ಅನುದಾನ ಬಾಕಿ ಇಟ್ಟು ಕೊಂಡಿದ್ದಾರೆ. ಹೀಗಾಗಿ, ರಾಜ್ಯದಲ್ಲಿ ಕೆಲವು ಕಡೆ ವಾರಗಟ್ಟಲೆ, ಕೆಲವು ಕಡೆ ತಿಂಗಳುಗಟ್ಟಲೆ ಕೂಲಿಕಾರರಿಗೆ ಕೂಲಿ ಹಣ ಪಾವತಿಯಾಗಿಲ್ಲ. ರಾಜ್ಯದ ಬಾಕಿ ಇರುವ ಅನುದಾನವನ್ನು ಕೂಡಲೇ ಸಂದಾಯ ಮಾಡಬೇಕೆಂದು ಫೆಬ್ರುವರಿ 28 ರಂದು ಬೆಂಗಳೂರು ಎನ್‌ಜಿಓ ಸಭಾ ಭವನದಲ್ಲಿ ನಡೆದ ರಾಜ್ಯ ಮಟ್ಟದ ಸಮಾವೇಶ ಕೇಂದ್ರದ ಬಿಜೆಪಿ ಸರ್ಕಾರವನ್ನು ಒತ್ತಾಯಿಸಿದೆ. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘವು ಈ ಸಮಾವೇಶವನ್ನು ಏರ್ಪಾಡುಮಾಡಿತ್ತು. ಗ್ರಾಮೀಣ ಅಭಿವೃದ್ಧಿ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಎಲ್ ಕೆ ಅತೀಕ್ ಗಿಡಕ್ಕೆ ನೀರೆರುವ ಮೂಲಕ ಸಮಾವೇಶವನ್ನು ಉದ್ಘಾಟಿಸಿದರು. ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದ ಸ್ವಾಮಿ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು.

ಆರಂಭದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ ಎಲ್ಲರನ್ನೂ ಸ್ವಾಗತಿಸಿದರು. ರಾಯಚೂರು ತಾಲೂಕಿನ ಬಿಚ್ಚಾಲಿ ಗ್ರಾಮದ ಉದ್ಯೋಗ ಖಾತ್ರಿ ಕೆಲಸದಲ್ಲಿ ನಿರತನಾಗಿದ್ದ ಕೂಲಿಕಾರ ಬುಡ್ಡೆ ಯಲ್ಲಪ್ಪ ಎಂಬುವವರು ಫೆಬ್ರುವರಿ 27 ರಂದು ಬಿಸಿಲಿನ ತಾಪಕ್ಕೆ ಬಲಿಯಾಗಿ ಮರಣ ಹೊಂದಿದ್ದು ಅವರಿಗೆ ಸಮಾವೇಶವು ಮೌನ ಆಚರಿಸಿ ಶ್ರದ್ಧಾಂಜಲಿ ಸಲ್ಲಿಸಿತು.

ಸಂಘದ ಉಪಾಧ್ಯಕ್ಷ ಜಿ.ಎನ್. ನಾಗರಾಜ್ ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಕೇಂದ್ರ ಬಿಜೆಪಿ ಸರ್ಕಾರದ ಬಡವರ ವಿರೋಧಿ ಖಂಡಿಸಿದರು. ಸಮಾವೇಶದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಜನವಾದಿ ಮಹಿಳಾ ಸಂಘಟನೆಯ ಉಪಾಧ್ಯಕ್ಷರಾದ ಶ್ರೀಮತಿ ಕೆ. ನೀಲಾರವರು ಮಾತನಾಡಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸಿದರೆ, ಮಹಿಳೆಯರಿಗೆ ಪುರುಷರೊಂದಿಗೆ ಸಮಾನ ವೇತನ ದೊರೆಯುತ್ತದೆ. ಗ್ರಾಮೀಣ ಕೆಲಸಗಾರರ ಸಾಮೂಹಿಕ ಚೌಕಾಸಿಯ ಶಕ್ತಿ ಬಲಗೊಳ್ಳುತ್ತದೆ. ಗ್ರಾಮೀಣ ಬಡವರ ಆದಾಯ ಹೆಚ್ಚುವಾಗ ಜೊತೆಯಲ್ಲಿ ಅವರ ಕೊಳ್ಳುವ ಶಕ್ತಿ ವೃದ್ಧಿಸುತ್ತದೆ ಎಂದು ಹೇಳಿದರು.



ಕೆ. ನೀಲಾ

ಕೂಲಿಕಾರರ ಪರವಾಗಿ ಮಂಡ್ಯ ಜಿಲ್ಲೆಯಎಂ. ಪುಟ್ಟಮಾದು ಮತ್ತು ಯಾದಗಿರಿ ಜಿಲ್ಲೆಯ ದಾವಲ್ ಸಾಬ್ ನದಾಫ್ ಮಾತನಾಡಿದರು. ಕೂಲಿಕಾರರು ಎತ್ತಿದ ಪ್ರಶ್ನೆಗಳಿಗೆ ಮತ್ತು ಅನುಮಾನಗಳಿಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿ ಎಲ್. ಕೆ ಅತೀಕ್ ಉತ್ತರ ನೀಡುತ್ತಾ ಬಾಕಿ ಇರುವ ವೇತನವನ್ನು ಕೂಡಲೇ ಪಾವತಿ ಮಾಡಲಾಗುವುದೆಂದು ಭರವಸೆ ನೀಡಿದರು. ಯೋಜನೆಯನ್ನು ಇನ್ನಷ್ಟು ಕೂಲಿಕಾರರ ಸ್ನೇಹಿ ಮಾಡಲು ನೀಡಲಾದ ಸಲಹೆಗಳನ್ನೆಲ್ಲಾ ಪರಿಶೀಲಿಸಲಾಗುವುದೆಂದು ತಿಳಿಸಿದರು.

ಕೆ. ಹನುಮೇಗೌಡ



⇨ ವಿಜಯರಾಘವನ್ ಪ್ರತಿಪಾದಿಸಿದರು.

ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೆಲಸ ಮಾಡುತ್ತಿರುವ ಕೂಲಿಕಾರರಿಗೆ ಸರಿಯಾಗಿ ವೇತನ ಸಿಗುತ್ತಿಲ್ಲ. ಕೂಲಿ ದಿನಗಳು ಸರಿಯಾಗಿ ಸಿಗುತ್ತಿಲ್ಲ ಕೂಲಿಯೂ ಕಡಿಮೆ ಇದೆ. ಅಲ್ಲದೆ ನರೇಂದ್ರ ಮೋದಿ ಸರಕಾರ ಬಂದ ಬಳಿಕ ಈ ಯೋಜನೆಗೆ ಅವಶ್ಯಕತೆ ಇದ್ದ 1.30 ಲಕ್ಷ ಕೋಟಿ ರೂ. ಅನುದಾನವನ್ನು ಅರ್ಧಕ್ಕೆ ಅಂದರೆ 54 ಸಾವಿರ ಕೋಟಿಗೆ ಇಳಿಸಿದೆ. ಕಾನೂನಿನಲ್ಲಿ ವರ್ಷಕ್ಕೆ 100 ದಿನಗಳ ಉದ್ಯೋಗ ನೀಡಬೇಕು ಎನ್ನುವ ನಿಯಮವಿದ್ದರೂ ಕಳೆದ ವರ್ಷದಲ್ಲಿ ಇಡೀ ದೇಶದಲ್ಲಿ ಸರಾಸರಿ 32 ದಿನಗಳು ಮಾತ್ರ ಕೆಲಸ ಸಿಕ್ಕಿದೆ. ಹೀಗಾದಾಗ ಬಡವರು ಬದುಕವುದಾದರೂ ಹೇಗೆ ಎಂದು ಅವರು ಪ್ರಶ್ನಿಸಿದರು.


ಕೇರಳದಲ್ಲಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವದ ಸರಕಾರವಿದೆ. ಅಲ್ಲಿ ಇತ್ತೀಚಿಗೆ ನೆರೆಹಾವಳಿಗೆ ಒಳಗಾದ ಪ್ರದೇಶಗಳಲ್ಲಿ ಉದ್ಯೋಗ ಖಾತ್ರಿ ಯೋಜನೆಯನ್ನು ಸಮರ್ಪಕವಾಗಿ ಬಳಸಲಾಗಿದೆ. ನೂರು ದಿನ ಕೆಲಸ ಮಾಡಿದ ಕೂಲಿಕಾರರಿಗೆ ಹೆಚ್ಚಿನ ದಿನಗಳ ಉದ್ಯೋಗ ನೀಡಲು ಸಾಧ್ಯವಾಗುತ್ತಿದೆ. ಅಲ್ಲದೆ ವಸತಿರಹಿತ ದಲಿತರು, ಬಡವರು ಹಾಗೂ ಕೂಲಿಕಾರರಿಗೆ ಎಲ್ಲಾ ಕನಿಷ್ಟ ಸೌಲಭ್ಯಗಳನ್ನು ಒಳಗೊಂಡ ಮನೆಗಳನ್ನು ಕಟ್ಟಿಸಿಕೊಡಲು ಸರಕಾರ ಮುಂದಾಗಿದೆ. ಇದಕ್ಕಾಗಿ 200 ಕೋಟಿ ರೂ. ಹಣವನ್ನು ಈ ವರ್ಷ ಮೀಸಲಿಡಲಾಗಿದೆ. 600 ರುಪಾಯಿ ಇದ್ದ ಮಾಸಿಕ ಪಿಂಚಣಿಯನ್ನು 1200 ರೂ ಗೆ ಏರಿಸಿ ಪ್ರತಿ ವರ್ಷ 14400 ರುಪಾಯಿ ಪ್ರತಿಯೊಬ್ಬರಿಗೆ ಪಿಂಚಣಿ ನೀಡಲಾಗುತ್ತಿದೆ. ಅಲ್ಲದೆ ಕೃಷಿಕೂಲಿಕಾರರ ಕಲ್ಯಾಣ ನಿಧಿಯ ಮೂಲಕ ಹಲವು ಕಾರ್ಯಕ್ರಮಗಳನ್ನು ಕೃಷಿಕೂಲಿಕಾರರಿಗಾಗಿಯೇ ಜಾರಿಮಾಡಲಾಗುತ್ತಿದೆ. ಈ ಕೆಲಸವನ್ನು 70ರ ದಶಕಗಳಿಂದ ಭೂಸುಧಾರಣೆ ಮತ್ತು ಊಳುವವನೆ ಭೂ ಒಡೆಯ ಕಾನೂನು ಮೂಲಕ ಕಮ್ಯೂನಿಸ್ಟ್ ಸರಕಾರಗಳು ಜಾರಿ ಮಾಡುತ್ತಾ ಬಂದಿವೆ. ಇದರಿಂದಾಗಿ ಕೇರಳದ ರೈತರು ಮತು ಕೂಲಿಕಾರರ ಬದುಕಿನಲ್ಲಿ ಗುಣಾತ್ಮಕ ಬದಲಾವಣೆ ಆಗಿದೆ.

ಆದರೆ ಕೇಂದ್ರದ ನರೇಂದ್ರ ಮೊದಿ ಸರಕಾರ ಹಾಗೂ ರಾಜ್ಯದ ಕಾಂಗ್ರೆಸ್ ಜೆಡಿಎಸ್ ಮೈತ್ರಿ ಸರಕಾರಗಳು ಮಾಡುತ್ತಿರುವುದಾದರೂ ಏನು? ಕರ್ನಾಟಕದ ಶೇ 80 ಜನರು ಬರ ಸಮಸ್ಯೆ ಎದುರಿಸುತ್ತಿದ್ದಾರೆ ಕೂಲಿಕಾರರು, ರೈತರು ವಲಸೆ ಹೋಗುತ್ತಿದ್ದಾರೆ. ಇಂತಹ ಸಮಯದಲ್ಲಿ ಬಿಜೆಪಿ ಶಾಸಕರು ಮುಂಬೈನಲ್ಲಿ ಮೈತ್ರಿ ಸರಕಾರದ ಶಾಸಕರು ಬಿಡದಿಯ ರೆಸಾರ್ಟಗಳಲ್ಲಿ ವಿಲಾಸಿ ಮೋಜು ನಡೆಸಿದರು ಸಾಲದೆಂಬಂತೆ ತಲಾ 200 ಕೋಟಿಗಳಿಗೆ ಶಾಸಕರನನ್ನು ಖರೀದಿಸುವ ಹೀನ ರಾಜಕಾರಣ ನಡೆಸಲಾಯಿತು. ಇಂತಹ ಸನ್ನಿವೇಶದಲ್ಲಿ ಬಡವರ ಕುರಿತಾಗಿ ಅವರಿಗೆ ಕಾಳಜಿ ಎಲ್ಲಿಂದ ಬರುತ್ತೇ? ಕೇರಳದಲ್ಲಿ ಪ್ರತಿಯೊಬ್ಬ ಶಾಸಕ ಹಾಗೂ ಸಚಿವರು ಜನರ ಪ್ರಶ್ನೆಗಳನ್ನು ಆಧ್ಯತೆಯಾಗಿಸಿಕೊಂಡು ಕೆಲಸ ಮಾಡಿದರೆ ಕರ್ನಾಟಕ ರಾಜ್ಯದ ಕಾಂಗ್ರೆಸ್ ಜೆಡಿಎಸ್ ಶಾಸಕರು ಮಾತ್ರ ಅಧಿಕಾರಕ್ಕಾಗಿ ಹಪಹಪಿಸುತ್ತಿರುವುದು ವಿಷಾದದ ಸಂಗತಿಯಾಗಿದೆ ಎಂದರು.

ಇದು ಸೂಕ್ತ ಕಾಲ:

ಇನ್ನೇನೂ ಕೆಲವೇ ದಿನಗಳಲ್ಲಿ ದೇಶದ ಜನರು ಹೊಸ ಸರಕಾರವನ್ನು ಚುನಾಯಿಸಲಿದ್ದಾರೆ. ಇಂತಹ ಸನ್ನಿವೇಶದಲ್ಲಿ ಬಡವರು, ದಲಿತರು, ಕೂಲಿಕಾರರು ಅಲ್ಪಸಂಖ್ಯಾತ ವಿರೋಧಿ ಮತ್ತು ಸಂವಿಧಾನ ವಿರೋಧಿಯಾದ ನರೇಂದ್ರ ಮೋದಿ ಸರಕಾರವನ್ನು ಅಧಿಕಾರದಿಂದ ಕಿತ್ತೊಗೆಯುವ ಕೆಲಸವನ್ನು ನಾವು ಮಾಡಬೇಕು. ಅದೇ ವೇಳೆಗೆ ದುಡಿಯುವ ಜನರ ಪರವಾಗಿ ಸಂಸತ್ತಿನಲ್ಲಿ ಧ್ವನಿ ಎತ್ತಲು ಸಾಧ್ಯವಾಗಬೇಕಾದರೆ ಕಮ್ಯೂನಿಸ್ಟ್ ಪಕ್ಷಗಳ ಸಂಸದರು ಹೆಚ್ಚಿನ ರೀತಿಯಲ್ಲಿ ಆಯ್ಕೆಯಾಗುವಂತೆ ಜನರು ಕೆಲಸ ಮಾಡಬೇಕು ಮತ್ತು ಶ್ರೀಮಂತರು ಹಾಗೂ ಕಾರ್ಪೋರೇಟ್ ಪರವಾದ ನೀತಿಗಳಿಗೆ ಪರ್ಯಾಯವಾದ ಒಂದು ಜನಪರ ಸರಕಾರವನ್ನು ಅಸ್ತಿತ್ವಕ್ಕೆ ತರುವ ಕೆಲಸವನ್ನು ದೇಶದ ಮತದಾರರು ಮಾಡಬೇಕು ಅದಕ್ಕಾಗಿ ಇಡೀ ದೇಶದ್ಯಾಂತ ಕೆಂಬಾವುಟವನ್ನು ಹಿಡಿದ ಕೂಲಿಕಾರರು ಅವಿರತವಾಗಿ ಶ್ರಮಿಸಬೇಕು ಎಂದು ವಿಜಯರಾಘವನ್ ಕರೆ ನೀಡಿದರು.

ಕೇರಳ: ಎಲ್.ಡಿ.ಎಫ್ ಸರಕಾರ ಸಾರ್ಥಕ ಸಾಧನೆಗಳ ಸಾವಿರ ದಿನಗಳು ಸಾಮಾಜಿಕ, ಆರ್ಥಿಕ ಮುನ್ನಡೆ



ಎಸ್.ವೈ.ಜಿ

ಈ ಸರಕಾರಕ್ಕೆ ಸದಾ ಸವಾಲುಗಳು. ಸವಾಲುಗಳ ಸರಮಾಲೆ. ಆದರೆ ಎಲ್ಲವನ್ನೂ ಎದುರಿಸಿ ಯಶೋಗಾಥೆಯತ್ತ ಸಾಗುವ ಸಂಕಲ್ಪ. ಇದರ ಕಾರ್ಯ ಸಾಧನೆಗೆ, ಸಾಕಾರಕ್ಕೆ ಮೂಲ ಆಧಾರವೇ ಜನ ಸಮೂಹ.

ಕಾಮ್ರೇಡ್ ಪಿಣರಾಯಿ ವಿಜಯನ್ ಕೇರಳ ರಾಜ್ಯದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದಾಗ ಇದ್ದ ಸವಾಲುಗಳು ಒಂದೆರಡಲ್ಲ. ಅವುಗಳ ಸ್ವರೂಪವೂ ಹಲವು ಹತ್ತು ಬಗೆಯವು. ರಾಜಕೀಯ, ಆರ್ಥಿಕ, ಸಾಮಾಜಿಕ ಹೀಗೆ ಬಗೆ, ಬಗೆಯ ಪ್ರಶ್ನೆಗಳು. ಯುಡಿಎಫ್ ಸರಕಾರದ ಭ್ರಷ್ಟಾಚಾರ, ಜನ ವಿರೋಧಿ ಆಡಳಿತದಿಂದ ಬೇಸತ್ತಿದ್ದ ಜನ ಅದನ್ನು ಸೋಲಿಸಿ ಎಲ್.ಡಿ.ಎಫ್. ನ್ನು ಅಧಿಕಾರಕ್ಕೆ ತಂದರು. ಅವರ ನಿರೀಕ್ಷೆಗಳೋ ಅಪಾರ. ಆದರೆ ಸಂಪನ್ಮೂಲಗಳು ಸೀಮಿತ. ಸಾಮಾಜಿಕ, ಆರ್ಥಿಕ, ರಾಜಕೀಯ ಹಾದಿಯಲ್ಲಿ ಅಡೆ ತಡೆಗಳು. ಪ್ರತಿ ಹೆಜ್ಜೆಯಲ್ಲಿಯೂ ಪ್ರತಿಗಾಮಿಗಳ ಸವಾಲುಗಳು ಸಹ!

ಸವಾಲುಗಳು ಹಲವು

'ಸವಾಲುಗಳು ಎಂದರೆ ನಮಗೆ ಇಷ್ಟ. ಸವಾಲುಗಳು ನಮ್ಮನ್ನು ಸದಾ ಎಚ್ಚರದಿಂದ ಇರಿಸುತ್ತವೆ, ಜನಮುಖೀಗಳಾಗಿರುವುದರಿಂದ ಸವಾಲುಗಳನ್ನೆದಿರಿಸುವುದೇ ನಮ್ಮ ಸಂಕಲ್ಪವಾಗುತ್ತದೆ. ಜನತೆಯ ಹಿತ ಕಾಯಲು ಹೊಸತನ, ಹೊಸ ರೀತಿಯಿಂದ ಕಾರ್ಯವೆಸಗಬೇಕು. ಪ್ರಗತಿಗೆ ಎದುರಾಗುವ ಪ್ರತಿಗಾಮಿಗಳನ್ನು ಉಕ್ಕಿನ ಸಂಕಲ್ಪದಿಂದ ಎದುರಿಸಬೇಕು. ನಮ್ಮ ಕಣ್ಣೋಟವನ್ನು ನಿಚ್ಚಳಗೊಳಿಸುವ, ವಿಸ್ತರಿಸಿ ಮುನ್ನಡೆಸುವುದೇ ನಾವು ನಂಬಿರುವ ತಾತ್ವಿಕತೆ. ಈ ಬದ್ಧತೆಯಿಂದ ಸವಾಲುಗಳಿಗೆ ಮುಖಾಮುಖಿಯಾದಾಗಲೇ ನಾವು ಬೆಳೆಯುತ್ತೇವೆ, ಸಮಾಜವನ್ನು ಬೆಳೆಸುತ್ತೇವೆ. ಆಗ ಜನತೆಗೂ ಒಂದಿಷ್ಟು ಪರಿಹಾರ ಸಿಗುತ್ತದೆ '

ಸಂಕಷ್ಟ, ಸಂಘರ್ಷಗಳ ನಡುವೆ ಸಾವಿರ ದಿನಗಳನ್ನು ಪೂರೈಸಿದ ಕೇರಳದ ಎಡ ಪ್ರಜಾಸತ್ತಾತ್ಮಕ ರಂಗದ (ಎಲ್.ಡಿ.ಎಫ್.) ಸರಕಾರದ ನಡೆ, ಸಂಕಲ್ಪವನ್ನು ಗಮನಿಸಿದರೆ ಆ ಆಶಯದ ಸಾಕಾರ ಸ್ವರೂಪ ಅರ್ಥವಾಗುವುದು. ಈ ಸರಕಾರ ಕೇವಲ ಒಂದು ರಾಜ್ಯಕ್ಕೇ ಸೀಮಿತವಾಗದೇ ಎಡಪಂಥೀಯ ಚಿಂತನೆಗಳ ನೆಲೆಯಲ್ಲಿ ಪರ್ಯಾಯ ನೀತಿ, ಆಡಳಿತದಿಂದ ದೇಶದ ರಾಜಕೀಯ, ಆಡಳಿತಾತ್ಮಕ ನಕಾಶೆಯಲ್ಲಿ ತನ್ನದೇ ವಿಶಿಷ್ಟ ಛಾಪು ಮೂಡಿಸಿರುವುದು ಅದರ ಹೆಗ್ಗಳಿಕೆ.

2016 ರ ಮೇ ತಿಂಗಳಿನಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ 140 ಸ್ಥಾನಗಳಲ್ಲಿ 91 ಸ್ಥಾನಗಳನ್ನು ಎಲ್‌ಡಿಎಫ್ ನ್ನು ಗೆಲ್ಲಿಸಿದರು. ಸಿಪಿಐ(ಎಂ) ನೇತೃತ್ವದ ಎಲ್‌ಡಿಎಫ್ ಶೇ.43.35, ಕಾಂಗ್ರೆಸ್ ನೇತೃತ್ವದ ಯುಡಿಎಫ್ ಶೇ.38.8 ಮತಗಳನ್ನು ಗಳಿಸಿದ್ದವು. ಅದೇ ಹೊತ್ತಿನಲ್ಲಿ ಬಿಜೆಪಿ ಪಕ್ಷ ಶೇ.15 ಮತಗಳನ್ನು ಪಡೆದಿತ್ತು. ಈ ಸನ್ನಿವೇಶವೇ ನೂತನ ಸರಕಾರದ ಮುಂದಿದ್ದ ರಾಜಕೀಯ ಸವಾಲನ್ನು ಮನಗಾಣಿಸುತ್ತದೆ.

ಪ್ರಗತಿ ಮುಖಿ ಸಮಾಜವನ್ನು ಹಿಂದಕ್ಕೆ ತಳ್ಳುವ ಯತ್ನ

ಎಡ ಪ್ರಜಾಸತ್ತಾತ್ಮಕ ರಂಗದ ವಿರುದ್ಧ, ಸಿಪಿಐ(ಎಂ) ವಿರುದ್ಧ ಕೋಮುವಾದ ಬಿಜೆಪಿ ಹಿಂಸಾತ್ಮಕ ಧಾಳಿಗಳನ್ನೂ ಒಳಗೊಂಡು ಆಕ್ರಮಣ ಮಾಡುವಾಗಲೆಲ್ಲಾ ವಿರೋಧ ಪಕ್ಷವಾಗಿರುವ ಮತ್ತು ಸೆಕ್ಯುಲರ್ ಎಂದು ಹೇಳಿಕೊಳ್ಳುವ ಕಾಂಗ್ರೆಸ್ ಪಕ್ಷ, ಎಲ್‌ಡಿಎಫ್ ನ್ನು, ಅದರ ಪ್ರಮುಖ ಭಾಗವಾಗಿರುವ ಸಿಪಿಐ(ಎಂ)ನ್ನು ವಿರೋಧಿಸಲು ಅದರೊಂದಿಗೆ ಸ್ಪರ್ಧೆಗೆ ಇಳಿಯುತ್ತದೆ, ಕೈ ಜೋಡಿಸುತ್ತದೆ. ಎಲ್‌ಡಿಎಫ್, ವಿಶೇಷವಾಗಿ ಸಿಪಿಐ(ಎಂ) ಮೇಲೆ ಎಲ್ಲಾ ರೀತಿಯ ಕ್ರಿಮಿನಲ್ ಧಾಳಿಗಳನ್ನು ನಡೆಸುತ್ತಾ, ಅದರ ಕಾರ್ಯಕರ್ತರನ್ನು ಕಗ್ಗೊಲೆಗೈಯ್ಯುತ್ತಾ ಆರೆಸ್ಸೆಸ್–ಬಿಜೆಪಿ ಬಂದಿವೆ. ಕಾಮ್ರೇಡ್ ಪಿಣರಾಯಿ ವಿಜಯನ್ ಅವರ ಮೇಲೆ ಧಾಳಿಯ ಹಲವು ಯತ್ನಗಳು ನಡೆದವು. ಒಂದು ಹಂತದಲ್ಲಿ ಅವರ ತಲೆ ಕಡೆಯುವ ಬೆದರಿಕೆಯನ್ನು, ಅದಕ್ಕೆ ಬಹುಮಾನ ಕೊಡುವುದಾಗಿ ಘೋಷಿಸಲಾಯಿತು. ಹಸಿ, ಹಸಿ ಸುಳ್ಳುಗಳ ಮೂಲಕ ಕಮ್ಯೂನಿಸ್ಟರ ವಿರುದ್ಧ ದೇಶಾದ್ಯಂತ ಭಾರಿ ಅಪಪ್ರಚಾರ ಮಾಡಲಾಯಿತು. ಸಮಾಜದಲ್ಲಿ ಅಶಾಂತಿ, ಅರಾಜಕತೆಯನ್ನು ಸೃಷ್ಟಿಸಿ, ಕೇಂದ್ರ ಸರಕಾರದ ಬಲ ಬಳಸಿ ಸರಕಾರವನ್ನೇ ಉರುಳಿಸುವ ಸಂಚುಗಳೂ ನಡೆದವು. ಶಬರಿ ಮಲೆ ಅಯ್ಯಪ್ಪಸ್ವಾಮಿ ದೇವಸ್ಥಾನಕ್ಕೆ ವಯಸ್ಕ ಮಹಿಳೆಯರ ಪ್ರವೇಶಕ್ಕೆ ಸಂಬಂಧಿಸಿದ ಸುಪ್ರಿಂ ಕೋರ್ಟ್‌ನ ತೀರ್ಪಿನ ಜಾರಿಯ ವಿಷಯದಲ್ಲಿ ಬಿಜೆಪಿ–ಸಂಘಪರಿವಾರ ವರ್ತಿಸಿದ ರೀತಿ ಅತ್ಯಂತ ಅಸಂವಿಧಾನಿಕ ಹಾಗೂ ಅನಾಗರೀಕವೂ ಆಗಿತ್ತು. ದೇವರು ಮತ್ತು ಮತಧರ್ಮದ ಬಗೆಗಿನ ಜನತೆಯ ನಂಬಿಕೆಗಳನ್ನು ದುರ್ಬಳಕೆ ಮಾಡುವ ಹುನ್ನಾರವಿತ್ತು.

ಇಂತಹ ಅನೇಕ ಸಂದಿಗ್ಧ, ಸೂಕ್ಷ್ಮ ಪ್ರಶ್ನೆಗಳನ್ನು ಎಲ್‌ಡಿಎಫ್ ಅತ್ಯಂತ ತಾಳ್ಮೆ, ಸಂಯಮದಿಂದ ಎದುರಿಸಿದೆ. ಹಾಗೂ ಸಂವಿಧಾನ, ನೆಲದ ಕಾನೂನು ಗೌರವಿಸಿ, ಪ್ರಗತಿಪರ, ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ಬದ್ಧವಾಗಿ ನಿಂತಿದೆ. ಲಿಂಗ ಸಮಾನತೆಯನ್ನು ಎತ್ತಿ ಹಿಡಿದಿದೆ. ಇದರೊಟ್ಟಿಗೆ ಅಲ್ಪ ಸಂಖ್ಯಾತ ಮತೀಯ ಮೂಲಭೂತವಾದಿಗಳನ್ನೂ ಎದುರಿಸುತ್ತಾ ಬರಲಾಗಿದೆ. ಜನತೆಗೆ ಎಲ್ಲವನ್ನೂ ವಿವರಿಸಿ ಅವರ ಮನ ಗೆದ್ದಿದೆ. ಒಂದು ಗಮನಾರ್ಹ ಹೆಜ್ಜೆಯೆಂದರೆ ದೇವಸ್ಥಾನಗಳಲ್ಲಿ ದಲಿತ ಸಮುದಾಯದಿಂದ ಪೂಜಾ ಹೊಣೆಗಾರಿಕೆಯೂ ಒಳಗೊಂಡು ವಿವಿಧ ಹಂತಗಳಲ್ಲಿ ನೇಮಕ ಮಾಡಿರುವುದು.

ಪ್ರಕೃತಿಯೂ ಮುನಿದಾಗ

ರಾಜಕೀಯ ಸವಾಲುಗಳು ಹಲವು. ಇದರೊಟ್ಟಿಗೆ ಪ್ರಕೃತಿಕವಾದ ಭಾರೀ ಸಮಸ್ಯೆಗಳನ್ನು ಕೇರಳ ಎದುರಿಸಿತು. ಓಖಿ ಚಂಡಮಾರುತ, ನಿಫಾ ಸಾಂಕ್ರಾಮಿಕ ವೈರಸ್ ಧಾಳಿ, 2018 ರಲ್ಲಿನ ಜಲ ಪ್ರಳಯದ ಭಾರೀ ಅನಾಹುತವನ್ನು ಕೇರಳ ಕಂಡಿತು. ಇವೆಲ್ಲವುಗಳನ್ನೂ ಕೇರಳ ಸರಕಾರ ಎದುರಿಸಿದ ರೀತಿ ಅನನ್ಯವಾಗಿದೆ. ಎಲ್ಲೆಡೆಗಳಿಂದ ಪ್ರಶಂಸೆಗೆ ಒಳಗಾಗಿದೆ. ನಿಫಾ ವೈರಸ್ ಬಬ್ಬುವಿಕೆಯನ್ನು ತಡೆಯಲು ಕೇರಳ ಸರಕಾರದ ಆರೋಗ್ಯ ಸಚಿವೆ ಶೈಲಜಾ ಟೀಚರ್ ಮುಂಚೂಣಿಯಲ್ಲಿ ನಿಂತು ಅದನ್ನು ನಿಭಾಯಿಸಿ ನಿಯಂತ್ರಿಸಿದ ರೀತಿ ಪ್ರಶಂಸೆಗೆ ಒಳಗಾಯಿತು. 2018 ರ ಜಲಪ್ರಳಯ ಕೇರಳದ ಬಹು ಭಾಗವನ್ನು ಧ್ವಂಸಗೊಳಿಸಿತ್ತು. 1664 ಹಳ್ಳಿಗಳಲ್ಲಿ 1269 ಹಳ್ಳಿಗಳು, 13,362 ಮನೆಗಳು ಧ್ವಂಸಗೊಂಡವು. 443 ಜನರು ದುರ್ಮರಣ ಹೊಂದಿದರು. ಸಾವಿರಾರು ಜನರಿಗೆ ಗಾಯಗಳಾದವು. 14.5 ಲಕ್ಷ ಜನ ನಿರ್ವಸತಿಯಾದರು. ಅಪಾರ ಪ್ರಮಾಣದ ಆಸ್ತಿ ಹಾನಿಯಾಯಿತು. ಇದು ಅತ್ಯಂತ ಧಾರುಣ ಸಂದರ್ಭ. ಇದನ್ನೆದುರಿಸಲು ರಾಜ್ಯ ಸರಕಾರದಲ್ಲಿ ಇದ್ದದ್ದು ಸೀಮಿತ ಸಂಪನ್ಮೂಲ. ಕೇಂದ್ರದ ನೆರವಿಗೆ ಮನವಿ ಮಾಡಿದರೆ ಮಾನವೀಯತೆಯನ್ನೇ ಮರೆತು ಅದರಲ್ಲಿ ರಾಜಕೀಯ ಸೇಡು ತೀರಿಸಿಕೊಳ್ಳಲು ಅದು ಬಯಸಿತು. ವಿದೇಶದ ಜನತೆ ಮಾನವೀಯ ಹಸ್ತ ಚಾಚಲು ಬಂದಾಗ ಆ ನೆರವು ಬರದಂತೆ ತಡೆಯಿತು. ಹೀಗಿರುವಾಗ ಎಲ್‌ಡಿಎಫ್ ಎದೆಗುಂದದೇ ಜನತೆಯ ನೆರವಿನೊಂದಿಗೆ ಹಾನಿಗೊಳಗಾದ ಇಡೀ ಕೇರಳವನ್ನು ಪುನರ್ ನಿರ್ಮಾಣ ಮಾಡಲು ನಿರ್ಧರಿಸಿತು. ಈ ಸವಾಲು ನೂತನ ಕೇರಳದ ನಿರ್ಮಾಣ ಮಾಡಲು ಸುಸಂದರ್ಭವೆಂದು ಭಾವಿಸಿ ಜನತೆಯ ಹಾಗೂ ಸಾಮೂಹಿಕ ಸಂಘಟನೆಗಳ ನೆರವಿನೊಂದಿಗೆ ಆ ಕಾರ್ಯದಲ್ಲಿ ಅದ್ಭುತವಾದ ಪ್ರಗತಿಯನ್ನು ಸಾಧಿಸಲಾಗಿದೆ. 5000 ಕೋಟಿಗೂ ಅಧಿಕ ಹಣ ವೆಚ್ಚ ಮಾಡಲಾಗಿದೆ. ಇದನ್ನು ನಿರ್ವಹಿಸಿದ ರೀತಿ ರಾಜ್ಯದ ಇತಿಹಾಸದಲ್ಲೇ ದಾಖಲಾದ ವಿಶಿಷ್ಟ ಸಂಗತಿ.



ಭರವಸೆಗಳ ಜಾರಿ

ಬಹುತೇಕರು ಚುನಾವಣಾ ಭರವಸೆಗಳನ್ನು ಮರೆತೇ ಬಿಡುತ್ತಾರೆ. ಎಲ್‌ಡಿಎಫ್ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಹಲವಾರು ಭರವಸೆಗಳನ್ನು ನೀಡಿತ್ತು. ಮುಖ್ಯವಾಗಿ ಹೊಸ ಕೇರಳವನ್ನು ನಿರ್ಮಿಸುವುದಾಗಿ ಘೋಷಿಸಿತ್ತು. ಸಾಮಾಜಿಕ ಭದ್ರತಾ ಪೆನ್ಷನ್, ಸಾರ್ವಜನಿಕ ಕೈಗಾರಿಕೆಗಳ ಪುನಶ್ಚೇತನ, ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಉನ್ನತ ಗುಣ ಮಟ್ಟದ ಸೇವೆಗಳು, ಮೂಲ ಸೌಕರ್ಯಗಳ ಅಭಿವೃದ್ಧಿ, ದುಡಿಯುವ ವರ್ಗದ ಜನರ ಜೀವನ ಸ್ಥಿತಿಯ ಸುಧಾರಣೆ, ಅಂಚಿಗೆ ತಳ್ಳಲ್ಪಟ್ಟ ಸಮುದಾಯಗಳು, ಜಾತಿಗಳಿಗೆ ವಿಶೇಷ ಒತ್ತು, ಕೃಷಿ–ಕೈಗಾರಿಕಾ ರಂಗದ ಪ್ರಗತಿ ಇವು ಸರಕಾರ ಇರಿಸಿಕೊಂಡ ಗುರಿ ಮತ್ತು ಸಾಧನೆ. ಪ್ರತಿಯೊಬ್ಬರಿಗೂ ಮನೆ ನೀಡುವ ಸರಕಾರದ ಸಂಕಲ್ಪ ಬಹುತೇಕ (ಶೇ.93) ಹತ್ತಿರದಲ್ಲಿದೆ. ಮುಚ್ಚುವ ಹಂತದಲ್ಲಿದ್ದ ಶಾಲೆಗಳನ್ನು ಸರಕಾರ ವಹಿಸಿಕೊಂಡಿತು. ಇವನ್ನೂ ಒಳಗೊಂಡು ಶಿಕ್ಷಣ ಸಂಸ್ಥೆಗಳನ್ನು ಉನ್ನತೀಕರಣ ಮಾಡಲಾಗಿದೆ. 45,000 ತರಗತಿ ಕೋಣೆಗಳನ್ನು ಹೈಟೆಕ್ ದರ್ಜೆಗೆ ಏರಿಸಲಾಗಿದೆ. ಇದರಿಂದಾಗಿ ಎರಡೇ ವರುಷಗಳಲ್ಲಿ 3 ಲಕ್ಷದ 42 ಸಾವಿರ ಮಕ್ಕಳು ಸರಕಾರಿ ಸಂಸ್ಥೆಗಳಿಗೆ ಹೊಸದಾಗಿ ಸೇರ್ಪಡೆಗೊಂಡಿದ್ದಾರೆ. ಹೀಗೆ ಸರಕಾರ ಸಾರ್ವಜನಿಕ ಶಿಕ್ಷಣ ಸಂಸ್ಥೆಗಳನ್ನು ಬಲಗೊಳಿಸುತ್ತಿದೆ.

ವಲಸೆ ಕಾರ್ಮಿಕರಿಗೂ ಪೆನ್ಷನ್, ಅವರಿಗೆ ಅಪ್ನಾ ಘರ್, ಅವರ ಮಕ್ಕಳಿಗೆ ಶಾಲೆ ಕಲಿಯುವ ಸೌಲಭ್ಯಗಳು ಕಲ್ಪಿಸಲಾಗಿದೆ.

ಸರಕಾರವು ಎಲ್ಲರನ್ನೂ 'ಒಳಗೊಳ್ಳುವ ನೀತಿ' ಅನುಸರಿಸುತ್ತಿರುವುದರಿಂದ ವಿವಿಧ ವಿಭಾಗಗಳನ್ನು ಒಂದೆಡೆ ತಂದಿದೆ. 51 ಲಕ್ಷಕ್ಕೂ ಅಧಿಕ ಜನ ಸಾಮಾಜಿಕ ಭದ್ರತಾ ಪೆನ್ಷನ್ ನೀಡುತ್ತಿದೆ. ಯುಡಿಎಫ್ ಸರಕಾರ ಕೇವಲ ರೂ.600 ಗಳನ್ನು ನೀಡುತ್ತಿತ್ತು. ಅದನ್ನೀಗ ರೂ.1200 ಕ್ಕೆ ಹೆಚ್ಚಿಸಲಾಗಿದೆ. ಇದರ ವ್ಯಾಪ್ತಿಗೆ 11 ಲಕ್ಷ ಹೊಸ ಫಲಾನುಭವಿಗಳ ಸೇರ್ಪಡೆಯಾಗಿದೆ. ಇಲ್ಲಿನ 'ಕುಟುಂಬಶ್ರೀ' ಸ್ವಸಹಾಯ ಯೋಜನೆ ಅದ್ಭುತವಾದ ಪ್ರಗತಿಯನ್ನು ತರುತ್ತಿದೆ. ಮಹಿಳೆಯರ ಭಾಗಿತ್ವ ಹೊಸ ಮಜಲಿನತ್ತ ಸಾಗಿದೆ.

ಕನಿಷ್ಠ ವೇತನ ನಿಗದಿ ಇದರ ವ್ಯಾಪ್ತಿಗೆ 26 ವಿವಿಧ ಕ್ಷೇತ್ರಗಳ ಕಾರ್ಮಿಕರು, ಕೆಲಸಗಾರರ್ನು ಒಳಗೊಳ್ಳಲಾಗಿದೆ. ವಿಶೇಷವಾಗಿ ಅತ್ಯಂತ ಶೋಷಿತ ವಿಭಾಗವಾಗಿರುವ ನರ್ಸಿಂಗ್ ಕ್ಷೇತ್ರಕ್ಕೂ ವಿಸ್ತರಣೆಯಾಗಿದೆ.. ವಲಸೆ ಕಾರ್ಮಿಕರಿಗೆ, ಅಂಚಿಗೆ ತಳ್ಳಲ್ಪಟ್ಟವರಿಗೆ ಹಲವಾರು ಸ್ಕೀಮ್‌ಗಳು ರೂಪಿತವಾಗಿ ಜಾರಿಯಾಗುತ್ತಿವೆ. ತೃತೀಯ ಲಿಂಗಿಗಳಿಗೆ ಸಹಕಾರ ಸಂಘ ದ ಸೊಸೈಟಿ ಸ್ಥಾಪಿಸಲಾಗಿದೆ. ಅವರಿಗೆ ಆರೋಗ್ಯ ಮತ್ತು ಶಿಕ್ಷಣಕ್ಕೆ ಸಂಬಂಧಿಸಿ ವಿಶೇಷ ಯೋಜನೆಗಳೂ ಜಾರಿಯಾಗಿವೆ. ಸರಕಾರವು ಅರಣ್ಯ ಹಕ್ಕುಗಳ ಕಾಯ್ದೆಯನ್ವಯ ಅರ್ಜಿ ⇨

ಗುತ್ತಿಗೆ ಕಾರ್ಮಿಕರಿಗೆ 5 ತಿಂಗಳ ಬಾಕಿ ವೇತನ ಪಾವತಿಗೆ ಆಗ್ರಹ ಬಿಎಸ್‌ಎನ್‌ಎಲ್ ಕಚೇರಿ ಎದುರು ರಾಜ್ಯದ್ಯಾಂತ ಸಿಐಟಿಯು ಪ್ರತಿಭಟನೆ

ಬಿಎಸ್‌ಎನ್‌ಎಲ್ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಗುತ್ತಿಗೆ ಕಾರ್ಮಿಕರಿಗೆ 5 ತಿಂಗಳಿಂದ ಬಾಕಿ ಇರುವ ವೇತನವನ್ನು ಕೂಡಲೆ ಪಾವತಿಸಬೇಕು, ಆರ್ಥಿಕ ಮಿತವ್ಯಯದ ನೆಪದಲ್ಲಿ ಕಾರ್ಮಿಕರಿಗೆ ಕೆಲಸ ನಿರಾಕರಣೆ ಕೈಬಿಡಬೇಕು ಮತ್ತು ದೇಶದ ಮಹತ್ವದ ಸಾರ್ವಜನಿಕ ವಲಯದ ಉದ್ಯಮವಾದ ಬಿಎಸ್‌ಎನ್‌ಎಲ್ ಸಂಸ್ಥೆಯನ್ನು ಖಾಸಗೀಕರಣ ಮಾಡಲು ಹೊರಟಿರುವ ಕೇಂದ್ರ ಸರಕಾರದ ನೀತಿಗಳನ್ನು ವಿರೋಧಿಸಿ ಮತ್ತು ಬಿಎಸ್‌ಎನ್‌ಎಲ್ ನೌಕರರ ಮತ್ತು ಗುತ್ತಿಗೆ ಕಾರ್ಮಿಕರ ಹೋರಾಟವನ್ನು ಬೆಂಬಲಿಸಿ ಫಬ್ರವರಿ 25 ರಂದು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ನೇತೃತ್ವದಲ್ಲಿ ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಯಶಸ್ವಿ ಪ್ರತಿಭಟನೆಗಳನು ನಡೆಸಲಾಯಿತು. ಫಬ್ರವರಿ 15 ರಂದು ಬೆಂಗಳೂರಿನಲ್ಲಿ ರಾಜ್ಯ ಸಮಿತಿ ಸಭೆಯಲ್ಲಿ ಬಿಎಸ್‌ಎನ್ ಎಲ್ ನೌಕರರು ಮೂರು ಫೆಬ್ರವರಿ 18 ರಿಂದ ನಡೆಸಿದ ಮೂರು ದಿನಗಳ ಮುಷ್ಕರಕ್ಕೆ ಬೆಂಬಲಿಸಲು ತೀರ್ಮಾನಿಸಲಾಗಿತ್ತು. ಅದರಂತೆ ಬೆಂಗಳೂರಿನಲ್ಲಿ ಆಲ್ ಯೂನಿಯನ್ಸ್ ಹಾಗೂ ಅಸೋಷಿಯೇಷನ್ಸ್ ಗಳು ಜಂಟಿಯಾಗಿ ಸಂಘಟಿಸಿದ್ದ ಸಮಾವೇಶದಲ್ಲಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ರಾಜ್ಯ ಕಾರ್ಯದರ್ಶಿಗಳಾದ ಕೆ.ಮಹಾಂತೇಶ್, ಕೆ.ಎನ್ ಉಮೇಶ್ ಬೆಂಬಲಿಸಿ ಭಾಗವಹಿಸಿ ಮಾತನಾಡಿದ್ದರು.

ಇದಲ್ಲದೆ ಕಳೆದ ಐದಾರು ತಿಂಗಳಿಂದ ವೇತನವಿಲ್ಲದೆ ಇಡೀ ದೇಶದಲ್ಲಿ ಸುಮಾರು ಒಂದೂವರೆ ಲಕ್ಷ ಹಾಗೂ ಕರ್ನಾಟಕದಲ್ಲಿ ಸುಮಾರು 3000 ಕಾರ್ಮಿಕರು ಕಷ್ಟದ ದಿನಗಳನ್ನು ದೂಡುತ್ತಿದ್ದಾರೆ ಸಾಲದೆಂಬಂತೆ ಆರ್ಥಿಕ ಮಿತವ್ಯಯದ ನೆಪದಲ್ಲಿ ಅಧಿಕಾರಿಗಳು ನೂರಾರು ಕಾರ್ಮಿಕರಿಗೆ ಕೆಲಸ ನಿರಾಕರಿಸಿದ್ದಾರೆ. ಈ ಬಗ್ಗೆ ಹಲವು ಹಂತದ ಹೋರಾಟಗಳನ್ನು ಕಾರ್ಮಿಕರು ಯೂನಿಯನ್ ನೇತೃತ್ವದಲ್ಲಿ ನಡೆಸುತ್ತಿದ್ದಾರೆ ಮಾತ್ರವಲ್ಲ ಹೈಕೋರ್ಟ ಮೊರೆ ಹೋಗಿ ಆದೇಶ ಪಡೆದುಕೊಂಡಿದ್ದರು ಅಧಿಕಾರಿಗಳ ಹಠಮಾರಿ ಧೋರಣೆಯಿಂದಾಗಿ ಕೆಲಸ ನೀಡಲಾಗಿಲ್ಲ. ಮತ್ತೊಂದೆಡೆ ಮೋದಿ ಸರಕಾರ ಸಾಧ್ಯವಾದಷ್ಟು ಬೇಗ ಸಾರ್ವಜನಿಕ ವಲಯದ ಈ ಸಂಸ್ಥೆಯನ್ನು ಮುಚ್ಚಿ ರಿಲೆಯನ್ಸ್, ಜಿಯೋ ಗೆ ಮಾರಾಟ ಮಾಡಲು ಹವಣಿಸುತ್ತಿದೆ. ಇದರ ಪರಿಣಾಮವಾಗಿ ನೌಕರರು ಹೋರಾಟ ಮಾಡಿದರೂ ಅವರ ಜೀವಿತನ ಪರಿಷ್ಕರಣೆ ಆರಂಭಗೊಂಡಿಲ್ಲ, ಅಲ್ಲದೆ 4ಜಿ ಸ್ಪೆಕ್ಟ್ರಂ ಬಿಡುಗಡೆ ಮಾಡುತ್ತಿಲ್ಲ ಅಲ್ಲದೆ ಬ್ಯಾಂಕ್ ಸಾಲ ಪಡೆಯಲು ಅವಕಾಶ ನೀಡುತ್ತಿಲ್ಲ ಹೀಗಾಗಿ ಆರ್ಥಿಕ ಸಂಕಷ್ಟಕ್ಕೆ ಬಿಎಸ್‌ಎನ್ ಎಲ್ ಸಿಲುಕಿದೆ ಅದಕ್ಕೆ ನೇರ ಬಲಪಶುಗಳು ಗುತ್ತಿಗೆ ಕಾರ್ಮಿಕರಾಗಿದ್ದಾರೆ. ಈ ಹಿನ್ನಲೆಯಲ್ಲಿ ಅವರಿಗೆ ನೈತಿಕವಾಗಿ ಸೌಹಾರ್ದ ಬೆಂಬಲ ನೀಡಿ ರಾಜ್ಯವ್ಯಾಪಿ ಪ್ರದರ್ಶನ ನಡೆಸಲು ಸಿಐಟಿಯು ಕರೆ ನೀಡಿತ್ತು.

ಬೆಂಗಳೂರಿನಲ್ಲಿ ಅಲಸೂರಿನ ಕೇಂದ್ರ ಕಚೇರಿ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿ ಚೀಫ್ ಜನರಲ್ ಮ್ಯಾನೇಜರ್ ರವರಿಗೆ ಮನವಿ ಸಲ್ಲಿಸಲಾಯಿತು. ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ, ಬೆಂಗಳೂರು ಉತ್ತರ ಜಿಲ್ಲಾ ಕಾರ್ಯದರ್ಶಿ ಮುನಿರಾಜ್, ಟಿಇಐಇಗಿ ಜಿಲ್ಲಾ ಕಾರ್ಯದರ್ಶಿ ಗಿರೀಶ್, ಉಪಾಧ್ಯಕ್ಷ ಚೆಲುವರಾಜ್, ಜಿಲ್ಲಾ ಮುಖಂಡರಾದ ಈಶ್ವರ್, ಗುರುಮೂರ್ತಿ, ಸಿಜಿಎಂ ಕಛೇರಿಯ ನಾಗೇಶ್ ಸೇರಿದಂತೆ ಐವತ್ತಕ್ಕೂ ಹೆಚ್ಚಿನ ಕಾರ್ಮಿಕರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಧಾರವಾಡ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಡಾ. ಬಿ.ಆರ್.ಅಂಬೇಡ್ಕರ ವೃತ್ತದಲ್ಲಿರುವ ಬಿಎಸ್‌ಎನ್‌ಎಲ್ ಜನರಲ್ ಮ್ಯಾನೇಜರ್ ಕಚೇರಿಯ ಎದುರು ಪ್ರತಿಭಟನೆ ನಡೆಸಲಾಯಿತು. ನಂತರ ಜನರಲ್ ಮ್ಯಾನೇಜರ ಶ್ರೀ ಜೆ.ಎಲ್. ಗೌತಮ ಅವರಿಗೆ ಮನವಿ ಸಲ್ಲಿಸಲಾಯಿತು



ಪ್ರತಿಭಟನೆಕಾರರನ್ನು ಉದ್ದೇಶಿಸಿ ಸಿಐಟಿಯು ಜಿಲ್ಲಾಪ್ರಧಾನ ಕಾರ್ಯದರ್ಶಿ ಮಹೇಶ ಪತ್ತಾರ, ಅಧ್ಯಕ್ಷ ಬಿ.ಐ.ಈಳಿಗೇರ, ಗೌರವಾಧ್ಯಕ್ಷ ಬಿ.ಎನ್.ಪೂಜಾರಿ ಬಿಎಸ್‌ಎನ್‌ಎಲ್ ನೌಕರರ ಸಂಘದ ಹರೀಶ ದೊಡ್ಡಮನಿ



ಮಾತನಾಡಿದರು. ಪದಾಧಿಕಾರಿಗಳಾದ ಗುರುಸಿದ್ದಪ್ಪ ಅಂಬಿಗೇರ, ಎನ್.ಡಿ. ಪಾಟೀಲ, ಶಿವಶಂಕರಪ್ಪ, ರಾಜು ಕೊಟಗಿ, ರಫೀಕ ಗೂಡನಾಯ್ಕರ, ಉಳಿವೆಪ್ಪ ವಾಳದ, ಹುಸೇನಸಾಬ ನದಾಫ್, ಎಂ.ಎಚ್.ಮುಲ್ಲಾ ಕರವೇ ಅಧ್ಯಕ್ಷ ಅಮೃತ ಇಜಾರಿ ಮುಂತಾದವರು ನೇತೃತ್ವ ವಹಿಸಿದ್ದರು.

ದಕ್ಷಿಣ ಕನ್ನಡ ಜಿಲ್ಲಾ ಟೆಲಿಕಾಂ ಜನರಲ್ ಮ್ಯಾನೇಜರ್ ಕಛೇರಿ ಮುಂಭಾದಲ್ಲಿ ಸಿಐಟಿಯು ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನೆಯನ್ನು ಉದ್ದೇಶಿಸಿ ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ವಸಂತ ಆಚಾರಿ, ಜಿಲ್ಲಾ ಅಧ್ಯಕ್ಷರಾದ ಬಾಲಕೃಷ್ಣ ಶೆಟ್ಟಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನೀಲ್ ಕುಮಾರ್ ಬಜಾಲ್ ಮಾತನಾಡಿದರು. ನಂತರ ಮನವಿ ಸಲ್ಲಿಸಲಾಯಿತು. ಯೂನಿಯನ್ ಜಿಲ್ಲಾ ಕಾರ್ಯದರ್ಶಿ ಉದಯಕುಮಾರ್ ಸೇರಿ ಹಲವಾರು ಮುಖಂಡರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಕೊಡಗು ಜಿಲ್ಲೆಯ ಮಡಿಕೇರಿಯ ಟೆಲಿಕಾಂ ಜನರಲ್ ಮ್ಯಾನೇಜರ್ ಕಛೇರಿ ಎದುರು ಸಿಐಟಿಯು ಜಿಲ್ಲಾ ಸಮಿತಿಯಿಂದ ಪ್ರತಿಭಟನೆ ನಡೆಸಲಾಯಿತು.ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ಡಾ: ದುರ್ಗಾ ಪ್ರಸಾದ್,ಜಿಲ್ಲಾ ಕಾರ್ಯದರ್ಶಿ ರಮೇಶ್ ಹಾಗೂ ಯೂನಿಯನ್ ಇತರೆ ಮುಖಂಡರು ಪ್ರತಿಭಟನೆಯಲ್ಲಿ ಮಾತನಾಡಿದರು.

ಮೈಸೂರು ಜಿಲ್ಲೆಯ ಜನರಲ್ ಮ್ಯಾನೇಜರ್ ಕಚೇರಿ ಮುಂಭಾಗ ನಡೆದ ಪ್ರತಿಭಟನೆಯಲ್ಲಿ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಯ ಕಾರ್ಮಿಕರು ಭಾಗವಹಿಸಿದ್ದರು. ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ಬಾಲಾಜಿ ರಾವ್, ಜಿಲ್ಲಾ ಕಾರ್ಯದರ್ಶಿ ಜಯರಾಂ ಹಾಗೂ ಜಿಲ್ಲಾ ಉಪಾಧ್ಯಕ್ಷರಾದ ಎಚ್.ಎಸ್. ಜಗದೀಶ್, ಮಾತನಾಡಿ ವೇತನ ನೀಡದೇ ದುಡಿಸಿಕೊಳ್ಳುತ್ತಿರುವ ಆಡಳಿತ ಮಂಡಳಿ ಕ್ರಮವನ್ನು ಖಂಡಿಸಿದರು. ಮತ್ತು ಕೆಲಸ ನಿರಾಕರಣೆ ಮಾಡಿರುವ ಮುಖಂಡರನ್ನು ಕೂಡಲೇ ಮರು ನೇಮಕ ಮಾಡಿಕೊಳ್ಳಲು ಆಗ್ರಹಿಸಿದರು. ಕಟ್ಟಡ ಕಾರ್ಮಿಕ ಸಂಘದ ಜಿಲ್ಲಾ ಕಾರ್ಯದರ್ಶಿ ಬಸವಯ್ಯ, ಯೂನಿಯನ್ ಜಿಲ್ಲಾ ಮುಖಂಡರಾದ ಶಬರೀಶ್, ಬಾಬು, ಶ್ರೀನಿವಾಸ ಮೊದಲಾದವರು ನೇತೃತ್ವವಹಿಸಿದ್ದರು.

ಬಳ್ಳಾರಿ ಜಿಲ್ಲಾ ಟೆಲಿಕಾಂ ಕಛೇರಿಯ ಮುಂಭಾಗ ಕಾರ್ಮಿಕರು ಹಾಗೂ ಸಿಐಟಿಯು ಮತ್ತು ಎಂಪ್ಲಾಯೀಸ್ ಯೂನಿಯನ್ ಮುಖಂಡರು ಧರಣಿ ಸತ್ಯಾಗ್ರಹ ನಡೆಸಿದರು. ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಜೆ ಸತ್ಯಾಬಾಬು, ಜಿಲ್ಲಾ ಮುಖಂಡರಾದ ಯರ್‍ರಮ್ಮ, ಎಂಪ್ಲಾಯೀಸ್ ಯೂನಿಯನ್ ಜಿಲ್ಲಾ ಕಾರ್ಯದರ್ಶಿ ತಿಪ್ಪೇಸ್ವಾಮಿ ಸೇರಿದಂತೆ ಹಲವು ಮುಖಂಡರು ಪ್ರತಿಭಟನೆಯಲ್ಲಿ ಮಾತನಾಡಿದರು. ಹೋರಾಟ ನೇತೃತ್ವವನ್ನು, ಯೂನಿಯನ್ ಜಿಲ್ಲಾ ಮುಖಂಡರಾದ ನಜೀರ್, ಅಲ್ಲಾಬಕ್ಷಾ, ಮಲ್ಲಿಕಾರ್ಜುನ್ ಸಿದ್ದೇಶ್ ಮೊದಲಾದವರು ವಹಿಸಿದ್ದರು.

ಕಾರವಾರದಲ್ಲಿ ವೇತನವಿಲ್ಲದ ಕಾರ್ಮಿಕರು ಅಕ್ಷರಶಃ ಆಕ್ರೋಶಗೊಂಡು ಬಿಎಸ್‌ಎನ್‌ಎಲ್ ಜನರಲ್ ಮ್ಯಾನೇಜರ್ ಕಚೇಯ ಒಳ ನುಗ್ಗಿ ಅಧಿಕಾರಿಗಳಿಗೆ ದಿಗ್ಭಂದನ ವಿಧಿಸಿ ಪ್ರತಿಭಟನೆ ನಡೆಸಿ ವೇತನ ಬಿಡುಗಡೆಗಾಗಿ ಆಗ್ರಹಿಸಿದರು. ಹೋರಾಟ ನೇತೃತ್ವವನ್ನು ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಸಿ.ಆರ್. ಶಾನಭಾಗ್, ಜಿಲ್ಲಾ ಅಧ್ಯಕ್ಷರಾದ ತಿಲಕ್ ಗೌಡ, ಉಪಾಧ್ಯಕ್ಷರಾದ ಯಮುನಾ ಗಾಂವ್ಕರ್ ಸೇರಿದಂತೆ ಹಲವು ಮುಖಂಡರು ವಹಿಸಿದ್ದರು.

ಹಾಸನದ ಟೆಲಿಕಾಂ ಕಚೇರಿ ಮುಂಭಾಗ ನಡೆದ ಪ್ರತಿಭಟನೆಯಲ್ಲಿ ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ಧರ್ಮೇಶ್, ಮುಖಂಡರಾದ ಅರೇಹಳ್ಳಿ ಸ್ವಾಮಿ, ಮಲ್ಲಿಕಾರ್ಜುನ್ ಸೇರಿ ಹಲವಾರು ಮುಖಂಡರು ಭಾಗವಹಿಸಿದ್ದರು. ನಂತರ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಇದಲ್ಲದೆ ವಿಜಯಪುರ, ತುಮಕೂರು, ಕೋಲಾರ, ಬೀದರ್, ಮೊದಲಾದ ಜಿಲೆಗಳಲ್ಲಿ ಹೋರಾಟಗಳು ನಡೆದಿವೆ.

ಕ್ಲೇಮ್‌ಗಳನ್ನು ಹಾಕಿದವರಲ್ಲಿ ಸುಮಾರು ಶೇ.98 ರಷ್ಟು ಕುಟುಂಬಗಳಿಗೆ ಭೂಮಿ ಮತ್ತು ಸಮುದಾಯ ಹಕ್ಕುಗಳನ್ನು ನೀಡಿ ಇಡೀ ಭಾರತದಲ್ಲೇ ಮೇಲ್ಪಂಕ್ತಿಯಲ್ಲಿದೆ.

ಆರೋಗ್ಯ ಕ್ಷೇತ್ರದಲ್ಲಿಯೂ ಸರಕಾರದ ಸಾಧನೆ ಅಪೂರ್ವವಾದುದು. ಬಹುತೇಕ ಆಸ್ಪತ್ರೆಗಳೂ ಮೇಲ್ದರ್ಜೆಗೆ ಏರಿವೆ. ಇದಕ್ಕೆ ಸಾಥ್ ನೀಡಲು ಮದ್ಯಾಹ್ನದಲ್ಲಿ 'ಸಾಂತ್ವನಂ' ಯೋಜನೆ ಮೂಲಕ ರೋಗಿಗಳ ಸಂಬಂಧಿಗಳಿಗೂ ಊಟ ನೀಡುವುದು ಸಾರ್ವಜನಿಕ ಸಹಕಾರದಿಂದ ನಡೆಯುತ್ತಿದೆ.

ಎಲ್‌ಡಿ ಎಫ್ ಸರಕಾರ ಉದ್ಯಮಗಳ ಬೆಳವಣಿಗೆಗೆ ಉತ್ಸುಕವಾಗಿದೆ. ಹಲವು ಹೊಸ ಯೋಜನೆಗಳನ್ನು ರೂಪಿಸಿದೆ. ಗ್ಯಾಸ್ ಅಥಾರಿಟಿ ಆಫ್ ಇಂಡಿಯಾದೊಂದಿಗೆ ಉದ್ಯಮ ಬೆಳವಣಿಗೆ ಯೋಜನೆಗಳು ಜಾರಿಯಲ್ಲಿವೆ. ರಸ್ತೆ ಒಳಗೊಂಡು ಮೂಲ ಸೌಕರ್ಯಗಳ ನಿರ್ಮಾಣವೂ ಗಮನಾರ್ಹ ಮುನ್ನಡೆಯಲ್ಲಿದೆ. ಹೆದ್ದಾರಿಗಳು ವಿಸ್ತರಣೆಯಾಗುತ್ತಿವೆ. ಸಾರ್ವಜನಿಕ ಉದ್ಯಮಗಳನ್ನು ಬಲಗೊಳಿಸಿರುವುದು ಮತ್ತು ಮುಚ್ಚಲು ಶಿಫಾರಸುಗೊಂಡ ಉದ್ಯಮಗಳನ್ನು ತಾನು ವಹಿಸಿಕೊಂಡು ಪುನಶ್ಚೇತನ ಮಾಡಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿವೆ. ದೇಶದಲ್ಲಿ ಕೃಷಿರಂಗ ಬಿಕ್ಕಟ್ಟನ್ನು ಎದುರಿಸುತ್ತಿರುವಾಗ ಕೇರಳದಲ್ಲಿ ನಡೆದಿರುವ ಪ್ರಯೋಗಗಳು ವಿಭಿನ್ನ. ಇದರಿಂದಾಗಿ ಕೃಷಿ ರಂಗವೂ ಪುನಶ್ಚೇತನ ಪಡೆದು ಬೆಳೆಯುತ್ತಿದೆ.

ಹೊಸ ಕೇರಳದ ನಿರ್ಮಾಣದತ್ತ

ಇವೆಲ್ಲಾ ಪ್ರಯತ್ನಗಳಿಂದಾಗಿ ರಾಜ್ಯದಲ್ಲಿ ಬಂಡವಾಳ ಹೂಡಿಕೆಗೆ ಅನುಕೂಲಕರ ವಾತಾವರಣ ನಿರ್ಮಾಣಗೊಂಡಿದ್ದು ಹಲವಾರು ಕ್ಷೇತ್ರಗಳಲ್ಲಿ ಹಣ ಹೂಡಿಕೆಯಾಗುತ್ತಿದೆ. ಇತ್ತೀಚೆಗೆ ಕಣ್ಣೂರಿನಲ್ಲಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಕಾರ್ಯಾರಂಭಿಸಿರುವುದು ಕೇರಳದ ಆರ್ಥಿಕತೆಗೆ ವೇಗ ತರಲಿದೆ. ರಾಜ್ಯದ ಯೋಜನಾ ಮಂಡಳಿಯೇ ಎಲ್ಲಾ ಪ್ರಮುಖ ವಿಷಯಗಳಲ್ಲಿ ಮಾರ್ಗದರ್ಶಿ.

ಸರಕಾರದ ಆಡಳಿತದಲ್ಲಿ ಪಾರದರ್ಶಕತೆ, ಸಮರ್ಥತೆ, ಕಾರ್ಯ ಕ್ಷಮತೆ ಹೆಚ್ಚಿರುವುದು ಗಮನಿಸಬೇಕಾದ ಸಂಗತಿ. ಹಿಂದಿನ ಸರಕಾರದಲ್ಲಿ ಭಾರಿ ಭ್ರಷ್ಟಾಚಾರ ಮನೆ ಮಾಡಿತ್ತು. ಆದರೆ ಪಿಣರಾಯಿ ನೇತೃತ್ವದ ಸರಕಾರದಲ್ಲಿ ಭ್ರಷ್ಟಾಚಾರ ಗಣನೀಯವಾಗಿ ತಗ್ಗಿದೆ. ಭ್ರಷ್ಟಾಚಾರ ಮುಕ್ತ ಆಡಳಿತವನ್ನಾಗಿಸುವ ಪ್ರಯತ್ನ ಬಿರುಸಿನಿಂದ ಸಾಗಿದೆ. ಎಲ್ಲಾ ಹಂತಗಳಲ್ಲಿ ಪ್ರಜಾಪ್ರಭುತ್ವೀಕರಣ ಮಾಡಲಾಗಿರುವುದು ಸಮರ್ಥ ಆಡಳಿತ ನೀಡಲು ಬಹು ಮುಖ್ಯ ಕಾರಣ. ಇದರಿಂದಾಗಿಯೇ ನೈಸರ್ಗಿಕ ಪ್ರಕೋಪದ ಸಂದರ್ಭದಲ್ಲಿ, ಸಾಂಕ್ರಾಮಿಕ ಪಿಡುಗು ಹಬ್ಬುವಾಗ ಸಮರೋಪಾಧಿಯಲ್ಲಿ ಸಮರ್ಥವಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗಿದೆ.

ಸಾಧನೆಗೆ ಹುಡುಕಿ ಬಂದ ಪ್ರಶಸ್ತಿಗಳು

ಇಂತಹ ಅನೇಕ ವಿಷಯಗಳನ್ನು ಹೇಳಬಹುದು. ಎಸ್.ಡಿ.ಫ್. ಸರಕಾರ ಪಡೆದ ಪ್ರಶಸ್ತಿಗಳೂ ಸಹ ಇದನ್ನು ನಿಚ್ಚಳಗೊಳಿಸುತ್ತವೆ. ವಿಶ್ವ ಸಂಸ್ಥೆ ಮತ್ತು ನಿತಿ ಆಯೋಗಗಳು 'ಸುಸ್ಥಿರ ಅಭಿವೃದ್ಧಿಯಲ್ಲಿ ನಂಬರ್ ಒನ್ ರಾಜ್ಯ' ಎಂದು ಪ್ರಶಸ್ತಿ ನೀಡಿದೆ. ಸಾರ್ವಜನಿಕ ವ್ಯವಹಾರಗಳ ಕೇಂದ್ರವು ನೀಡುವ 'ಉತ್ತಮ ಆಡಳಿತ' ದ ಅವಾರ್ಡನ್ನು ಸತತವಾಗಿ ಮೂರು ವರುಷಗಳಲ್ಲಿಯೂ ಪಡೆದಿದೆ. ಎಲ್ಲಾ ರಂಗಗಳಲ್ಲಿ ಉತ್ತಮ ಸಾಧನೆ ಮಾಡಲಾಗಿದೆಯೆಂದು 'ಇಂಡಿಯಾ ಟುಡೇ' ಪ್ರಶಸ್ತಿ ನೀಡಿದೆ. ಮಾಧ್ಯಮ ಅಧ್ಯಯನ ಕೇಂದ್ರವು 'ಭ್ರಷ್ಟಾಚಾರ ಅತೀ ಕಡಿಮೆ ಇರುವ ರಾಜ್ಯ' ವೆಂದು ಪ್ರಶಸ್ತಿಯನ್ನು ನೀಡಿದೆ. 'ಸುರಕ್ಷಿತ ಮಾತೃತ್ವ ಅಭಿಯಾನ್' ಪ್ರಶಸ್ತಿಯನ್ನು ಪ್ರಧಾನಮಂತ್ರಿಗಳು ನೀಡಿ ಅಭಿನಂದಿಸಿದ್ದಾರೆ. ಇಷ್ಟೆಲ್ಲಾ ಇರುವಾಗಲೂ ಅದೇ ಬಿಜೆಪಿಯ ಕೇಂದ್ರದ ನಾಯಕರೂ ಸೇರಿ ಈ ಸರಕಾರದ ವಿರುದ್ಧ ಆರೋಪ ಮಾಡುವುದು ದುರುದ್ದೇಶ ಪೂರ್ವಕ ಅಲ್ಲವೇ?

ಸೈದ್ಧಾಂತಿಕ, ರಾಜಕೀಯ ಬದ್ಧತೆ-ಐಕ್ಯತೆ

2019 ಫೆಬ್ರವರಿ 20 ರಂದು 1000 ದಿನಗಳ ಸಮಾರಂಭವನ್ನು ಉಧ್ಘಾಟಿಸಿ ಮಾತನಾಡಿದ ಮುಖ್ಯಮಂತ್ರಿ ಕಾಮ್ರೇಡ್ ಪಿಣರಾಯಿ ವಿಜಯನ್ ರವರು "ರಾಜ್ಯದಲ್ಲಿ ಜನತೆಯ ಮನೋಭಾವವು ನಕಾರಾತ್ಮಕತೆಯಿಂದ ಸಕಾರಾತ್ಮಕತೆಯತ್ತ ಬದಲಾಗುತ್ತಿದೆ. ಆಡಳಿತ ದಕ್ಷತೆ ಹೆಚ್ಚಿದೆ. ಭ್ರಷ್ಟಾಚಾರ ತಗ್ಗಿದೆ. ನಿಗದಿತ ಅವಧಿಯಲ್ಲೇ ಅಭಿವೃದ್ಧಿ ಕಾರ್ಯಗಳು ಗುರಿ ತಲುಪುತ್ತಿವೆ. ಹೀಗಾಗಿ ರಾಜ್ಯದ ಅಭಿವೃದ್ಧಿಗೆ ಬಂಡವಾಳ ಹೂಡಿಕೆಯ ಸ್ನೇಹಿ ರಾಜ್ಯವಾಗಿದೆ. ಜನತೆಯ ಹಿತಾಸಕ್ತಿಯೇ ಕೇಂದ್ರವಾಗಿರುವ ಒಳಗೊಳ್ಳುವಿಕೆ ನೀತಿ ನಮ್ಮದು" ಎನ್ನುತ್ತಾರೆ.

ಇದು ವಿವಿಧ ಪಕ್ಷಗಳು ಸೇರಿ ನಡೆಸುತ್ತಿರುವ ಮೈತ್ರಿ ಪಕ್ಷಗಳ ಸರಕಾರ. ರಾಜಕೀಯ, ಸೈದ್ಧಾಂತಿಕ, ಐಕ್ಯತೆ ಹಾಗೂ ಜನತೆಗೆ ಬದ್ಧತೆ ನಿರ್ಣಾಯಕ ಮುನ್ನಡೆ ಸಾಧಿಸುವಲ್ಲಿನ ಶಕ್ತಿ.

ಹಾರೈಕೆ

ಕೇರಳದಲ್ಲಿನ 1000 ದಿನಗಳ ಆಡಳಿತ ಸಾಮಾಜಿಕ, ಆರ್ಥಿಕ ಸ್ಥರಗಳಲ್ಲಿ ಗಮನಾರ್ಹ ಮುನ್ನಡೆ ಸಾಧಿಸುತ್ತಿರುವುದನ್ನು ಬಹುತೇಕ ಮಾಧ್ಯಮಗಳೂ ಮುಕ್ತ ಕಂಠದಿಂದ ಶ್ಲಾಘಿಸಿವೆ. ನಿಜಕ್ಕೂ ಚುನಾವಣಾ ಪ್ರಣಾಳಿಕೆಯನ್ನೂ ಚಾಚೂ ತಪ್ಪದೇ ಪಾಲಿಸುತ್ತಿರುವ ಸರಕಾರ ಕೇರಳದ ಎಲ್.ಡಿ.ಎಫ್ ಸರಕಾರ. ಅದು ಮತ್ತಷ್ಟೂ ಮುನ್ನಡೆ ಸಾಧಿಸಲಿ ಎಂಬುದು ಜನತೆಯ ಹಾರೈಕೆ. ●

ಅಂದು ಗೈರುಹಾಜರು, ಇಂದು ಆದೇಶ ಮರುಪರಿಶೀಲನೆ ಅರ್ಜಿ–ಗೋಸುಂಬೆತನದ ಮತ್ತೊಂದು ಅಚ್ಛೇದಿನ್ ಮಾದರಿ!

23 ಲಕ್ಷ ಆದಿವಾಸಿಗಳನ್ನು ಒಕ್ಕಲೆಬ್ಬಿಸುವ ಆದೇಶಕ್ಕೆ ನಾಲ್ಕು ತಿಂಗಳ ತಡೆಯಾಜ್ಞೆ

ಸುಪ್ರಿಂ ಕೋರ್ಟ್, ಯಾರ್‍ಯಾರ ಜಮೀನು ದಾವೆಗಳನ್ನು ಸ್ವೀಕರಿಸಲಾಗಿಲ್ಲವೋ ಆ ಎಲ್ಲ ಆದಿವಾಸಿಗಳು ಮತ್ತು ಪಾರಂಪರಿಕ ಅರಣ್ಯವಾಸಿಗಳನ್ನು ಅವರು ಈಗಿರುವ ನೆಲದಿಂದ ಒಕ್ಕಲೆಬ್ಬಿಸಬೇಕು ಎಂದು ನೀಡಿರುವ ತನ್ನ ಫೆಬ್ರುವರಿ 13 ರ ಆದೇಶಕ್ಕೆ ಫೆಬ್ರುವರಿ 28ರಂದು ತಡೆಯಾಜ್ಞೆ ನೀಡಿದೆ. ಈ ಮೂಲಕ ಅರಣ್ಯ ಹಕ್ಕುಗಳ ಕಾಯ್ದೆಯ ಅಡಿಯಲ್ಲಿ ತಮ್ಮ ಹಕ್ಕುಗಳಿಗಾಗಿ ಆದಿವಾಸಿಗಳು ಮತ್ತು ಇತರ ಅರಣ್ಯವಾಸಿಗಳು ನಡೆಸಿರುವ ಹೋರಾಟಕ್ಕೆ ಮಹತ್ವದ ವಿಜಯ ಸಿಕ್ಕಿದೆ, ಹಾಗೂ ಈ ಮೂಲಕ ಆದೇಶ ನೀಡುವ ಮೊದಲಿನ ವಿಚಾರಣೆಗಳಲ್ಲಿ ಹಾಜರಾಗದೆ, ಇಂತಹ ಆದೇಶ ಬರುವಂತೆ ಮಾಡಿದ ಅಚ್ಛೇ ದಿನ್ ಸರಕಾರಕ್ಕೆ ಮಹತ್ವದ ಸೋಲು ಉಂಟಾಗಿದೆ.


ಪ್ರಜಾಪ್ರಭುತ್ವವಾದಿ ಶಕ್ತಿಗಳು, ಅದರಲ್ಲೂ ಎಡಪಕ್ಷಗಳ ಬಹುಕಾಲದ ಹೋರಾಟಗಳ ನಂತರ 2006ರಲ್ಲಿ ರೂಪುಗೊಂಡ ಅರಣ್ಯ ಹಕ್ಕುಗಳ ಕಾಯ್ದೆಯನ್ನು ಅಧಿಕಾರ ವಹಿಸಿಕೊಂಡ ಕೂಡಲೇ 'ಸುಗಮ ವ್ಯಾಪಾರ'ದ ಹೆಸರಲ್ಲಿ ಕಾರ್ಪೊರೇಟ್‌ಗಳಿಗೆ ಅನುಕೂಲ ಮಾಡಿಕೊಡಲು ಮೂಲೆಗೊತ್ತಲಾರಂಭಿಸಿದ ಈ ಅಚ್ಛೇ ದಿನ್ ಸರಕಾರದ ವಕೀಲರು ಅರಣ್ಯ ಹಕ್ಕು ಕಾಯ್ದೆಯನ್ನೇ ಪ್ರಶ್ನಿಸಿದ್ದ ವೈಲ್ಡ್ ಲೈಫ್ ಫಸ್ಟ್ ರಿಟ್ ಅರ್ಜಿಯ ವಿಚಾರಣೆಯ ವೇಳೆಯಲ್ಲಿ ಸಹಜವಾಗಿಯೇ ಗೈರು ಹಾಜರಾಗಿದ್ದರು. ಈ ಸರಕಾರಕ್ಕೂ ಈ 20 ಲಕ್ಷಕ್ಕೂ ಹೆಚ್ಚು ಆದಿವಾಸಿಗಳು ಮತ್ತು ಇತರ ಅರಣ್ಯವಾಸಿಗಳನ್ನು ಒಕ್ಕಲೆಬ್ಬಿಸುವುದು 'ಸುಗಮ ವ್ಯಾಪಾರ'ಕ್ಕಾಗಿ ಬೇಕಾಗಿತ್ತೆಂದು ಕಾಣುತ್ತದೆ.

ವಾಸ್ತವವಾಗಿ, ಈ ಅಚ್ಛೇ ದಿನ್ ಪಕ್ಷದ ರಾಜ್ಯ ಸರಕಾರಗಳು, ವಿಶೇಷವಾಗಿ, ಬುಲೆಟ್ ರೈಲೆಂಬ ಪ್ರತಿಷ್ಠಿತ ಪ್ರಾಜೆಕಟ್ಟಿನ ಮಹಾರಾಷ್ಟ್ರ ಸರಕಾರ ಈ ಆದೇಶವನ್ನು 'ಪಾಲಿಸಲು' ಅಂದರೆ ಆದಿವಾಸಿಗಳನ್ನು ಒಕ್ಕಲೆಬ್ಬಿಸುವ ಕೆಲಸವನ್ನು ತತ್ಪರತೆಯಿಂದ ಆರಂಭಿಸಿತ್ತು. ಆದರೆ ದಾವೆಗಳು ತಿರಸ್ಕರಿಸಲ್ಪಟ್ಟ 23 ಲಕ್ಷಕ್ಕೂ ಹೆಚ್ಚು ಕುಟುಂಬಗಳ ನಡುವೆ ಉಂಟಾಗಿರುವ ಆಕ್ರೋಶ, ಆದಿವಾಸಿ ಸಂಘಟನೆಗಳು ಇದರ ವಿರುದ್ಧ ಹೋರಾಟಕ್ಕಿಳಿಯಲು ನಿರ್ಧರಿಸಿದ್ದು, ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ನೇತೃತ್ವದ ರಾಜ್ಯ ಸರಕಾರಗಳು ಇದರ ಮರುಪರಿಶೀಲನೆಗೆ ಅರ್ಜಿ ಹಾಕುವ ಬಗ್ಗೆ ಯೋಚಿಸಲಾರಂಭಿಸಿದ್ದು, ಕಳೆದ ಸಂಚಿಕೆಯಲ್ಲಿ ವರದಿಯಾದಂತೆ ಸಿಪಿಐ(ಎಂ) ಈ ಆದೇಶದ ಜಾರಿಯನ್ನು ತಡೆಗಟ್ಟಲು ಸುಗ್ರೀವಾಜ್ಞೆಯನ್ನು ಹೊರಡಿಸಬೇಕು ಎಂದು ಆಗ್ರಹಿಸಿದ್ದು, ಈ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದದ್ದು, ಇವೆಲ್ಲವೂ ಅಚ್ಛೇ ದಿನ್ ಸರಕಾರಕ್ಕೆ, ವಿಶೇಷವಾಗಿ, ಲೋಕಸಭಾ ಚುನಾವಣೆಗಳು ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಮುಜುಗರ ಉಂಟು ಮಾಡಿದಂತೆ ಕಾಣುತ್ತದೆ.

ಸರಕಾರ ಕೊನೆಗೂ ಈ ಆದೇಶವನ್ನು ಮಾರ್ಪಡಿಸುವಂತೆ ಕೋರಿ ಸುಪ್ರಿಂ ಕೋರ್ಟ್ ಮುಂದೆ ಅರ್ಜಿಯನ್ನು ಹಾಕಬೇಕಾಗಿ ಬಂತು. ಬುಡಕಟ್ಟು ವ್ಯವಹಾರಗಳ ಇಲಾಖೆಯ ಮೂಲಕ ಅರ್ಜಿ ಹಾಕಲಾಯಿತು. ಇದನ್ನು ಫೆಬ್ರುವರಿ 28ರಂದು ಸುಪ್ರಿಂ ಕೋರ್ಟ್ ವಿಚಾರಣೆಗೆ ಎತ್ತಿಕೊಂಡಿತು. ಈ ಹಿಂದೆ ವಿಚಾರಣೆಯ ವೇಳೆಗೆ ಗೈರು ಹಾಜರಾಗಿದ್ದ ಸರಕಾರದ ವಕೀಲರು, ಈಗ ಈ ಆದೇಶ ದೊಡ್ಡ ಸಂಖ್ಯೆಯ ದುರ್ಬಲ ಕುಟುಂಬಗಳನ್ನು ತಟ್ಟಿದೆ, ರಾಜ್ಯ ಸರಕಾರಗಳು ಈ ವಿಷಯದಲ್ಲಿ ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸದ್ದರಿಂದ ಆದಿವಾಸಿಗಳ ದಾವೆಗಳ ಸರಿಯಾದ ಪರಿಶೀಲನೆ ಆಗಿಲ್ಲ, ಒಕ್ಕಲೆಬ್ಬಿಸುವ ಮೊದಲು ಇಂತಹ ಪರಿಶೀಲನೆ ಅಗತ್ಯ. ಇಲ್ಲವಾದರೆ ತಲೆತಲಾಂತರದಿಂದ ಅರಣ್ಯಗಳಲ್ಲಿ ವಾಸಿಸುತ್ತಿರುವ ಕುಟುಂಬಗಳು ಗಂಬೀರ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ ಎಂದೆಲ್ಲಾ ನ್ಯಾಯಪೀಠದ ಮುಂದೆ ಹೇಳಿದರು.

ಇದಕ್ಕೆ **ನ್ಯಾಯಪೀಠ, ಕೇಂದ್ರ ಸರಕಾರ ಕಳೆದ ಮೂರು ವರ್ಷಗಳಿಂದ ನಿದ್ದೆ ಮಾಡುತ್ತಿತ್ತೇ ಎಂದು ಖಾರವಾಗಿ ಪ್ರಶ್ನಿಸಿತು.** ಏಕೆಂದರೆ ಫೆಬ್ರುವರಿ 13ರ ಆದೇಶ ಈ ಹಿಂದೆ ಜನವರಿ 29, 2016ರಂದು ನೀಡಿದ ಆದೇಶದ ಮುಂದುವರಿಕೆಯಷ್ಟೇ ಆಗಿದೆ ಎಂಬ ಸಂಗತಿಯನ್ನು ನ್ಯಾಯಪೀಠ ನೆನಪಿಸಿತು.

ನಿಜ, ಲಕ್ಷಾಂತರ ಆದಿವಾಸಿ ಕುಟುಂಬಗಳ ದಾವೆಗಳನ್ನು ಸರಿಯಾಗಿ ಪರಿಶೀಲಿಸದೇ ಹೋಗಿರುವುದರಿಂದ .ಅವರಿಗೆಲ್ಲ ಗಂಭೀರ ಪರಿಸ್ಥಿತಿ ಉಂಟಾಗಿದೆ ಎಂಬ ಜ್ಞಾನೋದಯ ಈಗಷ್ಟೇ ಆಗಿದೆಯೇ, ವಿಚಾರಣೆಯ ವೇಳೆಗೆ ಗೈರು ಹಾಜರಾಗುವಾಗ ತಿಳಿದೇ ಇರಲಿಲ್ಲವೇ ಎಂದೇನೂ ನ್ಯಾಯಪೀಠ ಕೇಳಲಿಲ್ಲ, ಚುನಾವಣೆ ಕಣ್ಣ ಮುಂದಿರುವುದರಿಂದಲೇ ಆಗಿದೆಯೇ ಎಂದು ಕೇಳಲಿಲ್ಲ. ಈ ಅರ್ಜಿಯನ್ನು ಈಗ ಬುಡಕಟ್ಟು ವ್ಯವಹಾರಗಳ ಇಲಾಖೆ ಹಾಕಿದೆ, ಆದರೆ ಈ ಹಿಂದೆ ಈ ಕೇಸಿನ ಜವಾಬ್ದಾರಿಯನ್ನು ಅರಣ್ಯ ಮತ್ತು ಪರಿಸರ ಇಲಾಖೆಗೆ ಏಕೆ ವಹಿಸಲಾಗಿತ್ತು ಎಂದೂ ಅದು ಕೇಳಲಿಲ್ಲ.



ಇರಲಿ, ನ್ಯಾಯಾಲಯ ಈಗ ರಾಜ್ಯ ಸರಕಾರಗಳಿಗೆ ಸುಮಾರು 60% ದಷ್ಟು, ಅಂದರೆ 23 ಲಕ್ಷದಷ್ಟು ದಾವೆಗಳನ್ನು ತಿರಸ್ಕರಿಸಿರುವುದು, ದಾವೆಗಳನ್ನು ಹಾಕಲು ಅವಾಸ್ತವ ಸಮಯ ಪಟ್ಟಿ, ಜಿಲ್ಲಾ ಆಡಳಿತ ಸರಿಯಾದ ಬೆಂಬಲ ನೀಡದಿರುವುದು, ಅಸಂಪೂರ್ಣ ಸಾಕ್ಷ್ಯಗಳ ಆಧಾರದಲ್ಲಿ ದಾವೆಗಳನ್ನು ತಿರಸ್ಕರಿಸಿರುವುದು ಮುಂತಾದವುಗಳನ್ನೆಲ್ಲ ಸರಿಪಡಿಸಿ ಅಫಿಡವಿಟ್‌ಗಳನ್ನು ಸಲ್ಲಿಸಲು ನಾಲ್ಕು ತಿಂಗಳ ಗಡುವನ್ನು ಕೊಟ್ಟಿದೆ.

ವಾಸ್ತವವಾಗಿ, ಯಾವ ಕಾಯ್ದೆಯ ಅಡಿಯಲ್ಲಿ ಒಕ್ಕಲೆಬ್ಬಿಸಬೇಕು ಎಂದು ಸುಪ್ರಿಂ ಕೋರ್ಟ್ ಆದೇಶ ನೀಡಿದ್ದು? ಸರಕಾರದ ವಕೀಲರು ಹಿಂದಿನ ರಿಟ್ ಅರ್ಜಿಯ ವಿಚಾರಣೆಯಲ್ಲಿ ಒಕ್ಕಲೆಬ್ಬಿಸಲು ಕಾಯ್ದೆಯಲ್ಲಿ ಅವಕಾಶವಿಲ್ಲ ಎಂದು ನ್ಯಾಯಾಲಯಕ್ಕೆ ಹೇಳಬೇಕಾಗಿತ್ತು. ಆದರೆ ವಕೀಲರು **ಗೈರುಹಾಜರಾದ ಸರಕಾರದ ಕರ್ತವ್ಯಚ್ಯುತಿಯಿಂದಾಗಿ ಈಗ ಈ ಅರ್ಜಿಯನ್ನು ಹಾಕಬೇಕಾಗಿ ಬಂತು, ಇಲ್ಲವಾದರೆ ಇದರ ಆವಶ್ಯಕತೆಯೇ ಇರುತ್ತಿರುಲಿಲ್ಲ, ಇದು ಈ ಸರಕಾರದ ಕ್ರಿಮಿನಾಲಿಟಿಯನ್ನು ಬಯಲಿಗೆಳೆದಿದೆ ಎಂದು ಬೃಂದಾ ಕಾರಟ್ ಹೇಳುತ್ತಾರೆ. ನಿಜ ಹೇಳಬೇಕೆಂದರೆ, ಈ ವಿಷಯದಲ್ಲಿ ಗ್ರಾಮಸಭೆಗಳೇ ನೋಡಲ್ ಏಜೆನ್ಸಿಗಳು. ಅವು ಹೆಚ್ಚಿನ ಹಕ್ಕುದಾವೆಗಳನ್ನು ಸ್ವೀಕರಿಸಿವೆ, ಆದರೂ ಅವೆಲ್ಲ ತಿರಸ್ಕಾರಗೊಳ್ಳುವಂತೆ ಮಾಡಿದ್ದು ಅರಣ್ಯ ಇಲಾಖೆಯ ಅಧಿಕಾರಶಾಹಿಯೇ** ಎಂದೂ ಅವರು ಹೇಳುತ್ತಾರೆ. ಈ ವಿಚಾರಗಳೆಲ್ಲ ಸದ್ಯ ಮುನ್ನೆಲೆಗೆ ಬರುವುದಿಲ್ಲ, ಚುನಾವಣೆಗಳ ನಂತರವೇ ಬರಬಹುದು, ಆಗ ತಾವು ಮತ್ತೆ ಅಧಿಕಾರಕ್ಕೆ ಬರುತ್ತೇವೆ ಎಂದು ಈ ಅಚ್ಛೇದಿನ್‌ವಾಲಾಗಳು ಭಾವಿಸಿದಂತಿತ್ತು. ಆದರೆ ಈಗಲೇ, ಚುನಾವಣೆಯ ಸ್ಸಂದರ್ಭದಲ್ಲೇ ಇದು ಮುಂದೆ ಬಂದಿರುವುದು ಬುಡಕಟ್ಟು ಮತ್ತು ಇತರ ಅಂಚಿಗೆ ತಳ್ಳಲ್ಪಟ್ಟ ಜನವಿಭಾಗಗಳ ಬಗ್ಗೆ ಈ ಸರಕಾರದ ನಿಜವಾದ ನಿಲುವನ್ನು ಬಯಲಿಗೆಳೆದಿದೆ ಎಂದು ಅವರು ಹೇಳುತ್ತಾರೆ.

ವಿಶ್ವದ 10 ಸೂಪರ್ ಶ್ರೀಮಂತರ ಪಟ್ಟಿಯಲ್ಲಿ ಮೊದಲ ಭಾರತೀಯ–ಅಚ್ಛೇದಿನ್ ಸಾಧನೆ!

ಈ ವಾರ ಪ್ರಕಟವಾದ ಜಾಗತಿಕ ಶ್ರೀಮಂತರ ಪಟ್ಟಿಯಲ್ಲಿನ ಮೊದಲ ಹತ್ತು ಹೆಸರುಗಳಲ್ಲಿ ಭಾರತದ ಮುಕೇಶ್ ಅಂಬಾನಿಯ ಹಸರು ಇದೆ ಎಂದು ವರದಿಯಾಗಿದೆ. ಭಾರತೀಯರೊಬ್ಬರು ಈ ಸ್ಥಾನ ಪಡೆದಿರುವುದು ಇದೇ ಮೊತ್ತ ಮೊದಲ ಬಾರಿಗೆ. ಇದು ಕಳೆದ ಐದು ವರ್ಷಗಳ ಅಚ್ಛೇ ದಿನ್‌ಗಳ ಒಂದು ಮಹತ್ಸಾಧನೆ ಎಂದು ಯಾವ ಅಚ್ಛೇದಿನ್‌ವಾಲಾ/ಲೀನೂ ಇದುವರೆಗೆ ಹೇಳಿಕೊಂಡಿಲ್ಲ.

ಇದರ ಜೊತೆಗೆ, ಇದೇ ಅಚ್ಛೇದಿನ್‌ಗಳ ಇನ್ನೆರಡು 'ಸಾಧನೆ'ಗಳನ್ನೂ ಸೇರಿಸಿಕೊಳ್ಳಬಹುದು ಎನ್ನುತ್ತಾರೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ.

ಒಂದು, ವಿಮಾನ ನಿಲ್ದಾಣಗಳ ನಿರ್ವಹಣೆಯ ಅನುಭವವೇ ಇಲ್ಲದ ಅಚ್ಛೇದಿನ್‌ಪ್ರಿಯ ಕಾರ್ಪೊರೇಟ್ ಗುಂಪು, ಸಾರ್ವಜನಿಕ ವಲಯದ ಎಎಐ ಅಭಿವೃದ್ಧಿಪಡಿಸಿ, ಆಧುನೀಕರಿಸಿದ ಐದು ವಿಮಾನ ನಿಲ್ದಾಣಗಳ ಒಡೆತನವನ್ನು ಒಮ್ಮೆಗೇ ಗಿಟ್ಟಿಸಿದ್ದು;

ಇನ್ನೊಂದು,'ಯುದ್ಧ ವಿಮಾನಗಳ ತಯಾರಿಕೆಯ ಅನುಭವವೇ ಇಲ್ಲದ ಮತ್ತೊಂದು ಅಚ್ಛೇದಿನ್‌ಪ್ರಿಯ ಕಾರ್ಪೊರೇಟ್ ಗುಂಪು ಫ್ರೆಂಚ್ ಯುದ್ಧ ವಿಮಾನ ಕಂಪನಿಯ ಪ್ರತಿಷ್ಠಿತ ಕಾಂಟ್ರಾಕ್ಟ್ ಗಿಟ್ಟಿಸಿದ್ದು.


ಇಂತಹ 'ಸಾಧನೆ' 'ಗಟ್‌ಬಂಧನ್' ಸರಕಾರದ ಅಡಿಯಲ್ಲಿ ಸಾಧ್ಯವಿರಲಿಲ್ಲ ಎಂದು ಈ ಪಕ್ಷದ ರಾಷ್ಟ್ರೀಯ ಅಧ್ಯಕ್ಷರೂ ಇದುವರೆಗೆ ಹೇಳಿಲ್ಲ!

'ಕೃಷಿ ಸನ್ಮಾನ'ದ 2000ರೂ. ಬಂದೂ ಆಯ್ತು, ಹಿಂತೆಗೆದುಕೊಂಡದ್ದೂ ಆಯ್ತು

ಕಳೆದ ಐದು ವರ್ಷಗಳಿಂದ ವರ್ಷಕ್ಕೆ 2 ಕೋಟಿಯಂತೆ ಉದ್ಯೋಗಾವಕಾಶ ನಿರ್ಮಾಣದ ಭರವಸೆಯಾಗಲೀ, ರೈತರಿಗೆ ತಮ್ಮ ಕೃಷಿ ವೆಚ್ಚದ ಒಂದೂವರೆ ಪಟ್ಟಿನಷ್ಟು ಕನಿಷ್ಟ ಬೆಂಬಲ ಬೆಲೆಯ ಆಶ್ವಾಸನೆಯಾಗಲೀ, ಇನ್ನೂ ಹಲವು ಜನವಿಭಾಗಗಳಿಗೆ ಕೊಟ್ಟ ಆಶ್ವಾಸನೆಗಳೆಲ್ಲ ಜುಮ್ಲಾಗಳ ಪಟ್ಟಿಗೆ ಸೇರಿದರೇನಂತೆ! ಇದೇ 'ಫೆಬ್ರುವರಿ 1ರಂದು ಸಲ್ಲಿಸಿದ ಮುಂದಿನ ಹಣಕಾಸು ವರ್ಷದ ಬಜೆಟ್ ಈ ಹಣಕಾಸು ವರ್ಷದಿಂದಲೇ ಜಾರಿಗೆ ಬರುತ್ತದೆ ಎಂದು ಹೇಳಿರುವ 'ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ"(ಪಿಎಂ–ಕಿಸಾನ್) ಫೆಬ್ರುವರಿ 24ರಂದು ಉತ್ತರಪ್ರದೇಶದ ಗೋರಖ್ ಪುರದಿಂದ ಜಾರಿಗೆ ಬಂದೇ ಬಿಟ್ಟಿದೆ.

ಅಂದು ಸ್ವತಃ ಪ್ರಧಾನ ಮಂತ್ರಿಗಳೇ 1 ಕೋಟಿ 1ಲಕ್ಷ ರೈತರ ಬ್ಯಾಂಕ್ ಖಾತೆಗಳಿಗೆ ಈ 'ಸನ್ಮಾನ ನಿಧಿ'ಯ ಅಡಿಯಲ್ಲಿ 2000ರೂ.ಗಳ ಮೊದಲ ಕಂತನ್ನು ವರ್ಗಾಯಿಸಿ, ಎಂದಿನಂತೆ ಪ್ರತಿಪಕ್ಷಗಳನ್ನು 'ಕಟುವಾಗಿ ಟೀಕಿಸಿದರು'– ಹತ್ತು ವರ್ಷಗಳಿಗೊಮ್ಮೆ ರೈತರನ್ನು ನೆನಪಿಸಿಕೊಳ್ಳುತ್ತಾರೆ ಎಂದು! ಇದುವರೆಗೆ ಚುನಾವಣೆಗಳು 5ವರ್ಷಗಳಿಗೊಮ್ಮೆ ನಡೆಯುತ್ತಿದ್ದು, ಎಲ್ಲ ರಾಜಕೀಯ ಪಕ್ಷಗಳು 5 ವರ್ಷಕ್ಕೊಮ್ಮೆಯಾದರೂ ರೈತರನ್ನು, ಕಾರ್ಮಿಕರನ್ನು ನೆನಪಿಸಿಕೊಳ್ಳುವುದು ಕಂಡು ಬಂದಿದ್ದರೂ, ಪ್ರಧಾನ ಮಂತ್ರಿಗಳು 10ವರ್ಷ ಎನ್ನಲು, ಅವರಿಗೆ 5ವರ್ಷಗಳ ಕೊನೆಯಲ್ಲಿ ಇಂತಹ ನೆನಪಾಗಿರುವುದು ಕಾರಣ ಇರಬಹುದು ಎಂದು ಒಬ್ಬ ರಾಜಕೀಯ ವೀಕ್ಷಕರು ಹೇಳಿದ್ದಾರೆ.

ಆದರೆ ಈ ವರದಿ ಇಲ್ಲಿಗೇ ನಿಂತಿಲ್ಲ.




ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್

ಮಹಾರಾಷ್ಟ್ರದ ನಾಶಿಕ್ ಜಿಲ್ಲೆಯ ಸಿನ್ನರ್‌ನಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ತನ್ನ ಖಾತೆಗೆ 2000 ರೂ. ಜಮಾ ಆಗಿರುವ ಸಂದೇಶ ಈ 1 ಕೋಟಿ 1ಲಕ್ಷ ಫಲಾನುಭವಿಗಳಲ್ಲಿ ಒಬ್ಬರಾದ ಅಶೋಕ್ ಲಹಮಾಗೇ ಎಂಬುವರಿಗೆ ಬಂದೂ ಬಿಟ್ಟಿತು. ಇನ್ನೂ ಆಶ್ಚರ್ಯದ ಸಂಗತಿ ಎಂದರೆ ಕೆಲವು ಗಂಟೆಗಳ ನಂತರ ಅದೇ ಬ್ಯಾಂಕಿನಿಂದ ಇನ್ನೊಂದು ಸಂದೇಶವೂ ಬಂತು– ನಿಮ್ಮ ಖಾತೆಯಿಂದ 2000 ರೂ.ನ್ನು ಹಿಂತೆಗೆದುಕೊಳ್ಳಲಾಗಿದೆ ಎಂದು. ಏಕೆ ಎಂದು ಶಾಖೆಯ ಅಧಿಕಾರಿಗಳನ್ನು ಕೇಳಿದಾಗ ನಮಗೆ ಗೊತ್ತಿಲ್ಲ, ನಮ್ಮ ಹೆಡ್ ಆಫೀಸಿಗೆ ಬರೆಯಿರಿ ಎಂದರಂತೆ. ಹೀಗಾಗಿರುವುದು ಈ ಒಬ್ಬ ರೈತರಿಗೆ ಮಾತ್ರವಲ್ಲ, ಈ ರಾಜ್ಯದ ನಾಂದೇಡ್ ಜಿಲ್ಲೆಯ 1000ಕ್ಕೂ ಹೆಚ್ಚು ಮಂದಿಗೆ ಇಂತಹ ಸಂದೇಶಗಳು ಬಂದಿವೆ ಎಂದು 'ಹಿಂದೂ ಬಿಸಿನೆಸ್ ಲೈನ್ ವರದಿಗಾರರು ಪುಣೆಯಿಂದ ವರದಿ ಮಾಡಿದ್ದಾರೆ(ಫೆ.27). 'ತಾಂತ್ರಿಕ ಕಾರಣ'ಗಳಿಂದ ಹೀಗಾಗಿರಬಹುದು ಎನ್ನಲಾಗಿದೆ.

ಈ ಫಲಾನುಭವಿಗಳನ್ನು ಗುರುತಿಸಲು ಅರ್ಜಿಗಳನ್ನು ಫೆಬ್ರುವರಿ 20ರೊಳಗೆ ಸಲ್ಲಿಸಬೇಕು ಎಂಬ ಸರಕಾರದ ಆದೇಶ ಹೆಚ್ಚಿನ ರಾಜ್ಯ ಸರಕಾರಗಳ ಕೈಸೇರಿದ್ದು ಫೆಬ್ರುವರಿ 16ರಂದೇ ಎಂದು ಕಳೆದ ಸಂಚಿಕೆಯಲ್ಲಿ ವರದಿಯಾಗಿದ್ದುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಮರುದಿನ ಫೆಬ್ರುವರಿ 17 ಭಾನುವಾರ. 2 ಎಕ್ರೆಗಿಂತ ಕಡಿಮೆ ಜಮೀನಿರುವ ರೈತಾಪಿ ಕುಟುಂಬಗಳ ಸಂಖ್ಯೆ 12 ಕೋಟಿಗೂ ಹೆಚ್ಚು. ಇವರನ್ನೆಲ್ಲ 20ರೊಳಗೆ ತಲುಪಬೇಕೆಂಬದು ಶುದ್ಧ ಅಸಂಬದ್ಧ. ಏಕೆ ಈ ಅನಗತ್ಯ ತರಾತುರಿ ಎಂದು ಅಖಿಲ ಭಾರತ ಕಿಸಾನ್ ಸಭಾ ಪ್ರಶ್ನಿಸಿತ್ತು. ಫೇ.24 ಕ್ಕೆ ನಿಗದಿಯಾದ ಗೋರಖ್‌ಪುರ ಸಮಾರಂಭ, ಮುಂಬರುವ ಚುನಾವಣೆಗಳೇ ಇದಕ್ಕೆ ಕಾರಣ ಎಂದೀಗ ಸ್ಪಷ್ಟವಾಗಿದೆ. ಈ 12 ಕೋಟಿಯಲ್ಲಿ 1.01 ಕೋಟಿಗೆ ಮಾತ್ರ ಫೆ.24ರಂದು 2000 ರೂ. ವರ್ಗಾವಣೆ ಆಗಿರುವುದು, ಆನಂತರ ಅದನ್ನು ಹಿಂತೆಗೆದುಕೊಳ್ಳಲಾಗಿದೆ ಎಂಬ ಸಂದೇಶದ ಹಿಂದಿರುವ 'ತಾಂತ್ರಿಕ ಕಾರಣ' ಈ ಚುನಾವಣಾ ತರಾತುರಿಯೇ ಆಗಿರಬಹುದೇ?

ಇದು ಅತ್ಯಂತ ದುರದೃಷ್ಟಕರ ಮತ್ತು ರೈತರಿಗೆ ಮಾಡಿರುವ ಅವಮಾನ ಎಂದು ಕಿಸಾನ್ ಸಭಾದ ಮಹಾರಾಷ್ಟ್ರ ರಾಜ್ಯ ಕಾರ್ಯದರ್ಶಿ ಡಾ. ಅಜಿತ್ ನವಳೆ ಹೇಳಿದ್ದಾರೆ. ಇವೆಲ್ಲ ತಮ್ಮ ಅದಕ್ಷತೆಯನ್ನು ಮುಚ್ಚಿಕೊಳ್ಳುವ ಆಳರಸರುಗಳ ಪ್ರಯತ್ನಗಳ ಫಲಿತಾಂಶ; ಇವು ರೈತರಿಗೆ ಯಾವುದೇ ಪರಿಹಾರ ನೀಡಿಲ್ಲ, ಬದಲಿಗೆ ಮಾನಸಿಕ ಕಿರುಕುಳಗಳನ್ನೇ ಉಂಟು ಮಾಡಿವೆ ಎಂದು ಅವರು ಖೇದ ವ್ಯಕ್ತಪಡಿಸಿದ್ದಾರೆ.

ಪ್ರಧಾನ ಮಂತ್ರಿಗಳು ಕುಂಭಮೇಳಕ್ಕೆ ಭೇಟಿ ನೀಡಿ ತ್ರಿವೇಣಿ ಸಂಗಮದಲ್ಲಿ 'ಪಾವನ ಮುಳುಗು' ಹಾಕಿದರು–ಸುದ್ದಿ, ಫೆ.24



ವ್ಯಂಗ್ಯಚಿತ್ರ: ಸತೀಶ ಕುಮಾರ್, ಟ್ರಿಬ್ಯೂನ್

ನವ-ಉದಾರವಾದಿ ಆಳ್ವಿಕೆಯಿಂದ ದೂರ ಸರಿಯುವ ಧೈರ್ಯ ತೋರಿದರೆ, ಸಶಸ್ತ್ರ ಸಾಮ್ರಾಜ್ಯಶಾಹಿ ಹಸ್ತಕ್ಷೇಪದ ಬೆದರಿಕೆಯ ಕಾಲ!



ಈಗ, ಕಾರ್ಪೊರೇಟ್ ಹಿತಾಸಕ್ತಿಗಳನ್ನು ಪ್ರಜಾಪ್ರಭುತ್ವದೊಂದಿಗೆ ಸಮೀಕರಿಸುವುದು ಎಲ್ಲರೂ ಒಪ್ಪುವ ನೀತಿಯಾಗುತ್ತಿರುವ ಒಂದು ಹೊಸ ಜಾಗತಿಕ ವ್ಯವಸ್ಥೆ ನಮ್ಮ ಮುಂದಿದೆ. ವೆನಿಜುವೆಲಾದ ಜನತೆ ಇದುವರೆಗೆ ಅಮೆರಿಕ-ಪ್ರಾಯೋಜಿತ ಕ್ಷಿಪ್ರಕ್ರಾಂತಿಯ ವಿರುದ್ಧ ದೃಢವಾಗಿ ನಿಂತಿದ್ದಾರೆ; ಆದರೆ ಇದರಿಂದಾಗಿ ಈಗ ಅಮೆರಿಕಾ ಅವರಿಗೆ ಸಶಸ್ತ್ರ ಹಸ್ತಕ್ಷೇಪದ ಬೆದರಿಕೆ ಹಾಕುತ್ತಿದೆ. ಅಂತಹ ಸಶಸ್ತ್ರ ಹಸ್ತಕ್ಷೇಪವೇನಾದರೂ ನಡೆದರೆ, ಆಗ ಅದು, ಇತ್ತೀಚಿನ ವರ್ಷಗಳಲ್ಲೇ, ಒಂದು ಸಾರ್ವಭೌಮ ದೇಶದ ವಿರುದ್ಧ ಆ ದೇಶ ನವ-ಉದಾರವಾದಿ ಆಳ್ವಿಕೆಯಿಂದ ದೂರ ಸರಿಯುವ ಧೈರ್ಯ ತೋರಿದೆ ಎಂಬ ಕಾರಣಕ್ಕೇ ನಡೆಯುವ ಮೊದಲ ಕಾರ್ಯಾಚರಣೆಯಾಗುತ್ತದೆ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಎಂ.ಜಿ.ವೆಂಕಟೇಶ್

ಇಂದು ವೆನಿಜುವೆಲಾದಲ್ಲಿ ನಡೆಯುತ್ತಿರುವ ವಿದ್ಯಮಾನಗಳು ತೃತಿಯ ಜಗತ್ತಿನ ರಾಷ್ಟ್ರಗಳಿಗೆ ನವ-ಉದಾರವಾದದ ಪರಿಸರದಲ್ಲಿ ಸಾಮ್ರಾಜ್ಯಶಾಹಿಯ ಹಸ್ತಕ್ಷೇಪದ ಸ್ವರೂಪದ ಬಗ್ಗೆ ಪಾಠವನ್ನು ಕಲಿಸುತ್ತದೆ.

ಸಾಮ್ರಾಜ್ಯಶಾಹಿಯು ಇದೇ ಮಾದರಿಯನ್ನು ಅನುಸರಿಸಿ ಉಳಿದ ಲ್ಯಾಟಿನ್ ಅಮೇರಿಕಾ ರಾಷ್ಟ್ರಗಳಲ್ಲಿ ಅದರಲ್ಲೂ ಪ್ರಮುಖವಾಗಿ ಬ್ರೆಜಿಲ್‌ನಲ್ಲಿ ಹಸ್ತಕ್ಷೇಪ ನಡೆಸಿದೆ. ಆದರೆ ವೆನಿಜವೆಲಾದಲ್ಲಿ ಬಲವಾದ ಪ್ರತಿರೋಧದ ಪರಿಣಾಮವಾಗಿ ಮಾಡಿದ್ದರಿಂದ ಸಾಮ್ರಾಜ್ಯಶಾಹಿಯ ತಂತ್ರಗಳು ಹೆಚ್ಚು ತೀಕ್ಷ್ಣವಾಗಿ ಕಾಣ ಬಂದಿವೆ.

ಲ್ಯಾಟಿನ್ ಅಮೇರಿಕಾ ದೇಶಗಳಲ್ಲಿ, ಕ್ಯೂಬಾದಲ್ಲಿ ಮಾತ್ರವಲ್ಲ, ಬೊಲಿವಿಯಾ ವೆನಿಜುವೆಲಾ ಅಲ್ಲದೇ ಬ್ರೆಜಿಲ್, ಇಕ್ವೆಡಾರ್, ಅರ್ಜೆಟೈನಾ ದೇಶಗಳಲ್ಲಿ ಎಡಪಂಥಧತ್ತ ಹೊರಳಿಕೆ ಕಂಡು ಬಂದು ಬಹಳ ವರ್ಷಗಳೇನೂ ಆಗಿಲ್ಲ. ಮಧ್ಯ ಮಾರ್ಗದಿಂದ ಎಡದತ್ತ ವಾಲಿದ ಸರ್ಕಾರಗಳು ಅಸ್ತಿತ್ವಕ್ಕೆ ಬಂದು, ಬಡ ದುಡಿಮೆಗಾರರ ಪರವಾದ ಮರುಹಂಚಿಕೆ ನೀತಿ ಕಾರ್ಯಕ್ರಮಗಳಿಂದ ವಿಶ್ವದ ಎಲ್ಲ ಪ್ರಗತಿ ಪರ ಶಕ್ತಿಗಳಿಗೆ ಸ್ಪೂರ್ತಿಯ ಸೆಲೆಗಳಾದವು. ಇಂದು ಇಂತಹ ಹೆಚ್ಚಿನ ಸರ್ಕಾರಗಳನ್ನು ಉರುಳಿಸಲಾಗಿದೆ, ಅವುಗಳ ಕಾರ್ಯಕ್ರಮಗಳು, ನೀತಿಗಳು ಜನ ಬೆಂಬಲವನ್ನು ಕಳಕೊಂಡವು ಎಂಬ ಕಾರಣಕ್ಕಲ್ಲ, ಬದಲಾಗಿ ಕುಟಿಲ ತಂತ್ರಗಳ ಮೂಲಕ, ಇದರಲ್ಲಿ ಅಮೇರಿಕಾ ಸಾಮ್ರಾಜ್ಯಶಾಹಿ ಪ್ರಧಾನ ಪಾತ್ರ ವಹಿಸಿದೆ. ಈಗ ನಡೆಯುತ್ತಿರುವ ಕ್ಷಿಪ್ರಕ್ರಾಂತಿಗಳು ಹೊಸ ರೀತಿಯದಾಗಿದ್ದು ಹಿಂದೆ ಅಮೇರಿಕಾ ಸಂಯುಕ್ತ ಸಂಸ್ಥಾನಗಳು 50ರ, 60ರ, 70ರ ದಶಕಗಳಲ್ಲಿ ಮಾಡಿದ್ದ ಪ್ರಯತ್ನಗಳಗಿಂತ ಭಿನ್ನವಾಗಿವೆ. ಇವು ನಿರ್ದಿಷ್ಟವಾಗಿ ನವ-ಉದಾರವಾದೀ ಸ್ವರೂಪವನ್ನು ಹೊಂದಿವೆ.

ಈ ರೀತಿಯಲ್ಲಿ ಸರ್ಕಾರಗಳನ್ನು ಉರುಳಿಸುವುದಕ್ಕೆ ಎರಡು ಮುಖ್ಯ ಕಾರಣಗಳಿದ್ದವು. ಮೊದಲನೇಯದಾಗಿ ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟಿನ ಪರಿಣಾಮವಾಗಿ ವ್ಯಾಪಾರ ಶರತ್ತುಗಳು ಪ್ರಾಥಮಿಕ ಸರಕುಗಳಿಗೆ ಪ್ರತಿಕೂಲವಾದವು. ಬ್ರೆಜಿಲ್ ಸೇರಿದಂತೆ ಲ್ಯಾಟಿನ್ ಅಮೇರಿಕಾ ದೇಶಗಳು ಕಚ್ಚಾ ಸಾಮಗ್ರಿಗಳ ರಫ್ತನ್ನೇ ಬಹಳವಾಗಿ ಅವಲಂಬಿಸಿವೆ. ವ್ಯಾಪಾರ ನಿಬಂಧನೆಗಳು ಕಚ್ಚಾ ವಸ್ತುಗಳಿಗೆ ಪ್ರತಿಕೂಲಗೊಂಡಾಗ, ಅವುಗಳ ವಿದೇಶಿ ವಿನಿಮಯ ಆದಾಯಗಳು ಕಡಿಮೆಯಾಗಿ, ದೇಶಕ್ಕೆ ಅಗತ್ಯವಾಗಿ ಬೇಕಾಗಿರುವ ವಸ್ತುಗಳನ್ನು ಆಮದು ಮಾಡಿಕೊಳ್ಳುವುದು ಕಷ್ಟಕರವಾಯಿತು. ವೆನಿಜುವೆಲಾದಲ್ಲಿ ಕುಸಿದ ತೈಲ ಬೆಲೆಗಳು ಈ ಸ್ಥಿತಿಯನ್ನು ನಿರ್ಮಿಸಿರುತ್ತವೆ. ಇಂತಹ ಸಂದರ್ಭಗಳಲ್ಲಿ ಸಾಮ್ರಾಜ್ಯಶಾಹಿ ಏಜೆನ್ಸಿಗಳು 'ಮಿತವ್ಯಯ'ದ ಕ್ರಮಗಳನ್ನು ಅಂಗೀಕರಿಸಬೇಕು ಎಂದು ಹೇಳುತ್ತವೆ. ಆದರೆ ವೆನಿಜುವೆಲಾ ಸರಕಾರ ವಿದೇಶಿ ವಿನಿಮಯ ಆದಾಯ ಇಳಿದರೂ ಕೂಡ ಬಡವರು ಅನುಭವಿಸುತ್ತಿದ್ದ ಮರುಹಂಚಿಕೆಯ ಫಲಗಳನ್ನು ಉಳಿಸಿಕೊಳ್ಳಲು ಪ್ರಯತ್ನಿಸಿತು. ಇದು ತೀವ್ರ ಹಣದುಬ್ಬರವನ್ನು ಉಂಟು ಮಾಡಿತು.

'ಮಿತವ್ಯಯ'ದ ಕ್ರಮಗಳು ಬಡವರಿಗೆ ನಿಸ್ಸಂದೇಹವಾಗಿ ಕಷ್ಟಕರವಾಗಿರುತ್ತವೆ. ಆದರೆ ಈ ಕಷ್ಟಕರ ಪರಿಸ್ಥಿತಿಗೆ ಕಾರಣ ಸರ್ಕಾರದ ನೀತಿಗಳಲ್ಲ, ಬದಲಿಗೆ ವ್ಯಾಪಾರದಲ್ಲಿನ ಪ್ರತಿಕೂಲ ನಿಬಂಧನೆಗಳೇ ಕಾರಣ.

ವೆನಿಜುವೆಲಾದ ಆರ್ಥಿಕ ತೊಂದರೆಗಳು ಅಮೇರಿಕಾ ಸಂಯುಕ್ತ ಸಂಸ್ಥಾನ ವಿಧಿಸಿರುವ ಆರ್ಥಿಕ ದಿಗ್ಬಂದನಗಳಿಂದಾಗಿ ಹೇಳಲಾರದಷ್ಟು ಹೆಚ್ಚಿದವು, ಜೀವ ಉಳಿಸುವ ಔಷಧಿಗಳು ಮುಂತಾದ ಅತ್ಯವಶ್ಯಕ ಸರಕುಗಳನ್ನು ಕೂಡ ಆಮದು ಮಾಡಿಕೊಳ್ಳುವುದಕ್ಕೆ ಇದು ತಡೆಯಾಗಿದೆ. ವೆನಿಜುವೆಲಾ ಮೇಲೆ ಸಾರಿದ ಆರ್ಥಿಕ ಯುದ್ಧವನ್ನು ವೆನಿಜುವೆಲಾದ ಸರಕಾರೀ ಒಡೆತನದ ತೈಲ ಕಂಪನಿಗಳ ಅಮೇರಿಕಾದಲ್ಲಿರುವ ಆಸ್ತಿಗಳನ್ನು ಸ್ಥಗಿತಗೊಳಿಸುವ ಮೂಲಕ ಇನ್ನಷ್ಟು ತೀವ್ರಗೊಳಿಸಿತು. ತೈಲ ಕಂಪನಿಗಳ ಆದಾಯವನ್ನು ಪ್ರಜಾಪ್ರಭುತ್ವ ರೀತಿಯಲ್ಲಿ ಮತ್ತು ಸಾಂವಿಧಾನಿಕವಾಗಿ ಆಯ್ಕೆಯಾದ ಸರ್ಕಾರದ ಅಧ್ಯಕ್ಷ ನಿಕೋಲಾಸ್ ಮದುರೋ ಅವರಿಗೆ ಹಸ್ತಾಂತರಿಸದೇ ಅಮೇರಿಕಾ ಬೆಂಬಲದಿಂದ ಅಧ್ಯಕ್ಷ ಎಂದು ಸ್ವಯಂ ಘೋಷಿಸಿ ಕೊಂಡಿರುವ ಜಾನ್ ಗುಯಾಡೋ ಅವರ ಆಳ್ವಿಕೆಗೆ ಕೊಡುವುದಾಗಿ ಅಮೆರಿಕಾ ಪ್ರಕಟಿಸಿದೆ.

ಇದರರ್ಥ ವೆನಿಜುವೆಲಾದ ಹಣವನ್ನೇ ಕದ್ದು ಅದರಿಂದಲೇ ಆ ದೇಶದಲ್ಲೇ ಕ್ಷಿಪ್ರಕ್ರಿಯೆ ನಡೆಸುವುದು. ಇದು ವಸಾಹತುಶಾಹೀ ಯುಗವನ್ನು ನೆನಪಿಗೆ ತರುತ್ತಿದೆ. ವಸಾಹತುಶಾಹಿಗಳ ವಿಜಯಯಾತ್ರೆಗಳಿಗೆ ಹಣವನ್ನು ಆ ವಸಾಹತುಗಳ ಜನರನ್ನೇ ಲೂಟಿ ಹೊಡೆಯಲಾಗುತ್ತಿದ್ದ ಯುಗವದು.

ಇಂತಹ ಕಳವುಗಳು ಮತ್ತು ದಿಗ್ಬಂಧನಗಳಿಂದಾಗಿ ವೆನಿಜುವೆಲಾ ಜನರ ಸಂಕಷ್ಟಗಳು ಹೆಚ್ಚಾದವು ಎಂದು ಬೇರೆ ಹೇಳಬೇಕಾಗಿಲ್ಲ. ಮತ್ತು ಈ ಸಂಕಟಗಳನ್ನೇ ಬಳಸಿಕೊಂಡು, ಈ ಸ್ಥಿತಿಗೆ ಮದುರೋ ಸರ್ಕಾರವೇ ಕಾರಣವೆಂದು ದೂಷಿಸಿ ಜನರನ್ನು ಅದರ ವಿರುದ್ಧ ನಿಲ್ಲುವಂತೆ ಮಾಡಲಾಗುತ್ತಿದೆ.

ಇತ್ತೀಚಿನ ಸರಕಾರಗಳನ್ನು ಉರುಳಿಸುವ ಆಟಕ್ಕೆ ನೆರವಾಗಿರುವ ಎರಡನೆಯ ಅಂಶವೆಂದರೆ ಅಮೆರಿಕ ಸಂಯುಕ್ತ ಸಂಸ್ಥಾನ ಕ್ರಮೇಣವಾಗಿ ಮಧ್ಯಪೂರ್ವ ಪ್ರದೇಶದಲ್ಲಿ ತನ್ನ ಸಾಮ್ರಾಜ್ಯಶಾಹಿ ಉದ್ದೇಶಗಳನ್ನು ಕೈಬಿಡದೆಯೇ, ಆ ರಾಷ್ಟ್ರಗಳ ಆಳ್ವಿಕೆಯಲ್ಲಿ ನೇರವಾಗಿ ಮೂಗುತೂರಿಸುವುದುನ್ನು ಕಡಿಮೆ ಮಾಡಿಕೊಳ್ಳುತ್ತ ಬಂದಿರುವುದು. ಇದರಿಂದಾಗಿ ಅದಕ್ಕೆ ಲ್ಯಾಟಿನ್ ಅಮೇರಿಕಾದಲ್ಲಿ ಅದಕ್ಕೆ ಹೆಚ್ಚು ಗಮನ ವಹಿಸಲು ಸಾಧ್ಯವಾಗುತ್ತಿದೆ.

ಅಮೇರಿಕಾದ ಇತ್ತೀಚಿನ ಸರಕಾರಗಳನ್ನು ಉರುಳಿಸುವ ಕ್ಷಿಪ್ರಕ್ರಿಯೆಯ ಪ್ರಯತ್ನಗಳಲ್ಲಿ ವೆನಿಜವೆಲಾದ್ದು ಒಂದು ಕ್ಲಾಸಿಕಲ್ ಉದಾಹರಣೆಯಾಗಿದ್ದು. ಇದು ಈ ಹಿಂದಿನ ಹಿಂದಿನ 50ರ, 60ರ, 70ರ ದಶಕಗಳಲ್ಲಿ ಮಾಡಿದಕ್ಕಿಂತ ಕನಿಷ್ಟ ಆರು ವಿಧಗಳಲ್ಲಿ ಭಿನ್ನವಾಗಿದ್ದು, ಇದೊಂದು ಹೊಸ ನಮೂನೆಯೇ ಆಗಿರುತ್ತದೆ.

ಈ ಹಿಂದೆ ಇರಾನ್, ಚಿಲಿ, ಗ್ವಾಟೆಮಾಲಾದಲ್ಲಿ ಪ್ರಜಾಪ್ರಭುತ್ವ ರೀತಿಯಲ್ಲಿ ಆಯ್ಕೆಯಾದ ಸರ್ಕಾರಗಳನ್ನು ಉರುಳಿಸಿ ತಮಗೆ ಬೇಕಾದ ಸರ್ವಾಧಿಕಾರಶಾಹೀ ಆಳ್ವಿಕೆಗಳನ್ನು ಯಾವುದೇ ನಾಚಿಕೆಯಿಲ್ಲದೇ ನೇಮಿಸ ಲಾಗಿತ್ತು. ಆದರೇ ಈಗ ಪ್ರಜಾಪ್ರಭುತ್ವದ ಹೆಸರಿನಲ್ಲೇ ಪ್ರಜಾಪ್ರಭುತ್ವದ ಮಾರ್ಗದಲ್ಲಿ ಆಯ್ಕೆಯಾದ ಸರ್ಕಾರಗಳನ್ನು ಉರುಳಿಸಲಾಗುತ್ತಿದೆ. ಬ್ರೆಜಿಲ್‌ನಲ್ಲಿ ಬೊಲ್ಸೆನಾರೊ ಪ್ರಜಾಪ್ರಭುತ್ವ ರೀತಿಯಲ್ಲಿ ಆಯ್ಕೆಯಾದ ಅಧ್ಯಕ್ಷನಂತೆ ಕಾಣಿಸಿಕೊಂಡರೂ, ವಾಸ್ತವವಾಗಿ ಅಲ್ಲಿ ದಿಲ್ಮಾ ರೊಸೆಫ್ ವಿರುದ್ಧ 'ಪಾರ್ಲಿಮೆಂಟರಿ ಕ್ಷಿಪ್ರಕ್ರಿಯೆ' ನಡೆಸಿರುವುದಷ್ಟೇ ಅಲ್ಲ, ದೇಶದಲ್ಲೇ ಅತ್ಯಂತ ಜನಪ್ರಿಯ ನಾಯಕರಾದ ವರ್ಕರ್ಸ್ ಪಾರ್ಟಿಯ ಲೂಲಾ ಅವರು ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸದಂತೆಯೇ ಮಾಡಲಾಯಿತು.

ಅದೇ ರೀತಿ ವೆನಿಜುವೆಲಾದಲ್ಲಿ ಅಮೇರಿಕಾ ಬೆಂಬಲಿತ ಸೋಗಲಾಡಿ ಜಾನ್ ಗುಯಾಡೋ, ಯಾವುದೋ ಬಲಿಷ್ಟ ಮಿಲಿಟರಿ ವ್ಯಕ್ತಿಯೇನಲಲ್, ಅಲ್ಲಿನ ನ್ಯಾಷನಲ್ ಅಸೆಂಬ್ಲಿ ಅಧ್ಯಕ್ಷರಾಗಿದ್ದಾರೆ. ರಂದರೆ ಹಿಂದಿನ ಶೋಷಣಾ ಪದ್ಧತಿಯನ್ನು, ಬಿಳಿಯರೇ ಶ್ರೇಷ್ಟರೆನ್ನುವ ವಿಚಾರವನ್ನು ಎತ್ತಿ ಹಿಡಿಯುವ ರಾಜಕೀಯ ಶಕ್ತಿಗಳನ್ನು ನೇರವಾಗಿ ಲ್ಯಾಟಿನ್ ಅಮೆರಿಕಾದ ಪ್ರಗತಿಪರ ಸರಕಾರಗಳ ವಿರುದ್ಧ ಸಾಮೂಹಿಕವಾಗಿ ಎತ್ತಿ ಕಟ್ಟಲಾಗುತ್ತಿದೆ.

ಎರಡನೇಯದಾಗಿ, ಜನರ ಆರ್ಥಿಕ ಸಂಕಷ್ಟಗಳಿಗೆ ಈ ಪ್ರಗತಿಪರ ಸರಕಾರಗಳು ಹೊಣೆಯಲ್ಲದಿದ್ದರೂ, ಹೆಚ್ಚಿನ ಸಂದರ್ಭಗಳಲ್ಲಿ ಇವು ಅಮೆರಿಕನ್ ಸಾಮ್ರಾಜ್ಯಶಾಹಿಯ ಉದ್ದೇಶಪೂರ್ವಕ ಚಟುವಟಿಕೆಗಳಿಂದಲೇ ಸೃಷ್ಟಿಯಾಗಿದ್ದರೂ, ಈ ಸಂಕಷ್ಟಗಳಿಂದಲೇ ಈ ಕ್ರಾಂತಿ ವಿರೋಧಿ ಸಾಮೂಹಿಕ ಬಂಡಾಯಗಳು ಪೋಷಣೆ ಪಡೆಯುತ್ತವೆ. ಈ ಹಿಂದೆ ನಡೆದ ಕ್ಷಿಪ್ರಕ್ರಾಂತಿಗಳಲ್ಲಿ ಒಂದು ಸಾಮೂಹಿಕ ಸ್ವರೂಪವಿರುತ್ತಿರಲಿಲ್ಲ, ಅವು ಯಾವುದೇ ಆರ್ಥಿಕ ಸಂಕಷ್ಟಗಳಿಂದಾಗಿ ಉಂಟಾಗುತ್ತಿರಲಿಲ್ಲ, ಇಂತಹ ಸಂಕಟಗಳ ಹೆಸರಿನಲ್ಲಿ ತಮ್ಮನ್ನು ಸಮರ್ಥಿಸಿಕೊಳ್ಳುವ ಗೋಜಿಗೂ ಹೋಗುತ್ತಿರಲಿಲ್ಲ. ನಿಜ, ಗಯಾನದಲ್ಲಿ ಛೆಡ್ಡಿ ಜಗನ್‌ರವರ ಸರ್ಕಾರವನ್ನು ಸಾಮ್ರಾಜ್ಯಶಾಹಿ ಹಣಕಾಸು ಬೆಂಬಲದಿಂದ ನಡೆದ ಟ್ರಕ್ ಮುಷ್ಕರದ ಮೂಲಕ ಉರುಳಿಸಲಾಯಿತು. ಆಗ ಅದು ಅಪರೂಪದ ಸಂಗತಿಯಾಗಿತ್ತು, ಈಗ ಅದು ಸಾಮಾನ್ಯ ಸಂಗತಿಯಾಗಿ ಬಿಟ್ಟಿದೆ.

ಮೂರನೇಯದಾಗಿ, ಈ ಆರ್ಥಿಕ ಸಂಕಷ್ಟಗಳನ್ನು ಹೆಚ್ಚಾಗಿ ವಿಶ್ವದ ಬಂಡವಾಳಶಾಹಿ ಅರ್ಥವ್ಯವಸ್ಥೆ ನಡೆಯುತ್ತಿರುವ ರೀತಿಯಲ್ಲದೆ, ಸ್ವತಃ ಸಾಮ್ರಾಜ್ಯಶಾಹಿಯೇ ಸೃಷ್ಟಿಸಿದ್ದರೂ ಅವೆಲ್ಲದಕ್ಕೂ ಪ್ರಗತಿಪರ ಸರ್ಕಾರಗಳನ್ನೇ, ಅದರಲ್ಲೂ ಅವುಗಳ ಎಡ ಪಂಥೀಯ ನೀತಿಗಳನ್ನು ದೂಷಿಸಲಾಗುತ್ತದೆ. ಆರ್ಥಿಕ ಸಂಕಷ್ಟಗಳು ಖನಿಜ ಸಂಪನ್ಮೂಲಗಳ ರಾಷ್ಟ್ರೀಕರಣದಿಂದ, ಆರ್ಥಿಕ ವ್ಯವಸ್ಥೆಯಲ್ಲಿ ಪ್ರಭುತ್ವದ ಮಧ್ಯಪ್ರವೇಶದಿಂದ, ಬಂಡವಾಶಾಹೀ-ವಿರೋಧಿ ನಿಲುವಿಗಳಿಂದಾಗಿ ಇತ್ಯಾದಿ ಇತ್ಯಾದಿಗಳಿಂದಾಗಿ ಎಂದು ಬಿಂಬಿಸಲಾಗುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರ, ಕ್ಷಿಪ್ರಕ್ರಿಯೆಯ ಪರವಾದ ಪ್ರಚಾರದಲ್ಲಿ ನವ-ಉದಾರವಾದಿ ವ್ಯವಸ್ಥೆಯಲ್ಲಿ ಯಾವುದೇ ಮಧ್ಯಪ್ರವೇಶ ಸಲ್ಲದೆಂಬ ಸೈದ್ಧಾಂತಿಕ ದಾಳಿ ಅಡಕವಾಗಿರುತ್ತದೆ. ಈ ರೀತಿಯ ಸೈದ್ಧಾಂತಿಕ ದಾಳಿ ಜಾಳುಜಾಳಾಗಿಯೇ ಇರುತ್ತವೆ, 'ಭ್ರಷ್ಟಾಚಾರ', 'ಅಸಮರ್ಥತೆ' ಇತ್ಯಾದಿ ಪರಿಕಲ್ಪನೆಗಳನ್ನು ಅದು ಬಳಸಿಕೊಳ್ಳುತ್ತದೆ. ಆದರೆ ಇವನ್ನೆಲ್ಲವನ್ನೂ ನವ-ಉದಾರವಾದೀ ವ್ಯವಸ್ಥೆಯಲ್ಲಿನ ಮಧ್ಯಪ್ರವೇಶಕ್ಕೆ ಸಮಾನಾರ್ಥಕವಾದ ಪದಗಳೆಂಬಂತೆ ಬಿಂಬಿಸಲಾಗುತ್ತದೆ.

ನಾಲ್ಕನೇಯದಾಗಿ, ಇದಕ್ಕನುಗುಣವಾಗಿಯೇ, ಅದರ ಕ್ಷಿಪ್ರಕ್ರಾಂತಿ ಅಥವ ದಿಢೀರ್ ಕಾರ್ಯಾಚರಣೆ ಮುಂದಿಡುವ ಅಜೆಂಡಾವು ಕಾರ್ಪೊರೇಟ್ ಪರವಾದ ನವ ಉದಾರವಾದೀ ವ್ಯವಸ್ಥೆಯನ್ನು ಮತ್ತೆ ಸ್ಥಾಪಿಸುವುದೇ ಆಗಿರುತ್ತದೆ. ಉದಾಹರಣೆಗೆ, ವೆನಿಜುವೆಲಾದಲ್ಲಿ ಮುಂದಿಡಲಾಗಿರುವ "ಪ್ರಜಾಸತ್ತಾತ್ಮಕ ಸಂಕ್ರಮಣ"ದ ರೂಪುರೇಷೆಯಲ್ಲಿ ಒಳಗೊಂಡಿರುವ ವಿಷಯಗಳನ್ನು ನೋಡಿ: (1)ಹಿಂದಿನ ಉತ್ಪಾದನಾ ವ್ಯವಸ್ಥೆಯನ್ನು (ಐಎಂಎಫ್ ನಿಧಿಗಳ ಮುಖಾಂತರ) ಮತ್ತೆ ಸಕ್ರಿಯಗೊಳಿಸುವುದು; (2)ಎಲ್ಲ ನಿಯಂತ್ರಣಗಳು, ಹತೋಟಿಗಳು ಮತ್ತು "ಅಧಿಕಾರಶಾಹಿ ತೊಡಕುಗಳು ಹಾಗೂ ಶಿಕ್ಷಾ ಕ್ರಮಗಳನ್ನು" ರದ್ದು ಮಾಡುವುದು; (3) ಖಾಸಗಿ ಆಸ್ತಿಯಲ್ಲಿ ವಿಶ್ವಾಸ ಮೂಡಿಸುವ ಮತ್ತು ಅದಕ್ಕೆ ಪರಿಣಾಮಕಾರಿ ಸಂರಕ್ಷಣೆ ನೀಡುವ ಒಂದು ನಿಯಂತ್ರಣ ಚೌಕಟ್ಟಿನೊಳಗೆ ಅಂತರ್ರಾಷ್ಟ್ರೀಯ ಹೂಡಿಕೆ; (4)ಸಾರ್ವಜನಿಕ ಉದ್ದಿಮೆಗಳನ್ನು ಖಾಸಗಿ ಹೂಡಿಕೆಗಳಿಗೆ ತೆರೆಯುವುದು;(5) ತೈಲ ಪ್ರಾಜೆಕ್ಟ್‌ಗಳಲ್ಲಿ ಖಾಸಗಿ ಬಂಡವಾಳ ಬಹುಮತದ ಷೇರುಗಳನ್ನು ಹೊಂದಲು ಅವಕಾಶ ಕೊಡುವ ಹೊಸದೊಂದು ಹೈಡ್ರೊಕಾರ್ಬನ್ ಕಾನ್ನೆಗೆ ಮಂಜೂರಾತಿ; (6) ಖಾಸಗಿಯವರಿಗೆ ವಿದ್ಯುತ್ ಮುಂತಾದ ಉಪಯುಕ್ತತೆಯ ಆಸ್ತಿಗಳ ನಿರ್ವಹಣೆ ಖಾಸಗಿ ವಲಯಕ್ಕೆ;(7)ಸರ್ಕಾರದ ಗಾತ್ರವನ್ನು ಇಳಸಲು ದಕ್ಷತೆ

ಇದೊಂದು ಯಾವುದೇ ನಾಚಿಕೆಯಿಲ್ಲದೆ ನವ-ಉದಾರವಾದವನ್ನು ಅಪ್ಪಿಕೊಂಡಿರುವ ಕಾರ್ಯಸೂಚಿ; ಆದರೂ ಇದೇ ಇವರ ಕ್ಷಿಪ್ರಕ್ರಿಯೆಯ ಕಾರ್ಯಕ್ರಮ. ಹೀಗೆ ಒಂದು ಕಾರ್ಪೊರೇಟ್ ಅಜೆಂಡಾವನ್ನು ಮುಂದೊತ್ತಲಿಕ್ಕಾಗಿ ಒಂದು ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಸರಕಾರವನ್ನು ಕಿತ್ತೆಸೆಯಬೇಕೆಂಬ ಇಂತಹ ಒಂದು ಸ್ಪಷ್ಟ ಸಂದೇಶವನ್ನು ಇದುವರೆಗೆ ಇಷ್ಟು ನಿಚ್ಚಳವಾಗಿ ಹಿಂದೆಂದೂ ಕೊಟ್ಟಿರಲಿಲ್ಲ.

ಐದನೇಯದಾಗಿ, ಪ್ರಸಕ್ತ ಕ್ರಿಪ್ರಕ್ರಿಯೆಗಳನ್ನು ಅಮೆರಿಕ ಸಂಯುಕ್ತ ಸಂಸ್ಥಾನವೇ ನಡೆಸಿರಬಹುದಾದರೂ ಇವು ಎಲ್ಲ ಸಾಮ್ರಾಜ್ಯಶಾಹೀ ಶಕ್ತಿಗಳ ಬೆಂಬಲದ ಆಧಾರದಲ್ಲೇ ಮುಂದೆ ಚಲಿಸುತ್ತವೆ. ಹೀಗೆ ಸೋಗಲಾಡಿ ಜುವಾನ್ ಗುಯಾಡೋನ ಸರಕಾರಕ್ಕೆ ವೆನಿಜುವೆಲಾದ ನ್ಯಾಯಬದ್ಧ ಸರಕಾರ ಎಂದು ಮಾನ್ಯತೆ ಕೊಡಬೇಕು ಎಂದು ಯೂರೋಪಿಯನ್ ಒಕ್ಕೂಟಕ್ಕೆ ಟ್ರಂಪ್ ಹೇಳಿದರು, ಅದು ಹಾಗೆಯೇ ಮಾಡಿದೆ. ಇದೀಗ ಪ್ರಸಕ್ತ ಕಾಲಘಟ್ಟದ ಸಂಕೇತ-ಅಮೇರಿಕಾಗೆ ಈಗ ಹಿಂದಿದ್ದ ಶಕ್ತಿ ಉಳಿದಿಲ್ಲ ಎಂಬ ಸಂಗತಿ ಮತ್ತು ಸಾಮ್ರಾಜ್ಯಶಾಹಿ ಶಕ್ತಿಗಳ ನಡುವಣ ಪ್ರತಿಸ್ಪರ್ಧೆಗಳು ಎದ್ದು ಕಾಣದಂತಿರುವ ಒಂದು ಜಗತ್ತಿನಲ್ಲಿ ನಾವು ಬದುಕಿದ್ದೇವೆ ಎಂಬ ಸಂಗತಿಯಿಂದಾಗಿ ಅಮೇರಿಕಾ ಸಂಯುಕ್ತ ಸಂಸ್ಥಾನಕ್ಕೆ ಒಂದು ಸಾಮ್ರಾಜ್ಯಶಾಹಿ ಕ್ರಿಯೆ ನಡೆಸುವಾಗಲೂ ಇತರರ ಸಹಕಾರ ಬೇಕಾಗಿದೆ.

ಕಡೆಯದಾಗಿ, ವೆನಿಜುವೆಲಾ ವಿಷಯದಲ್ಲಿ ಕಾಣುತ್ತಿರುವಂತೆ, ಒಂದು ಚುನಾಯಿತ ಮೂರನೇ ಜಗತ್ತಿನ ಸರಕಾರದ ವಿರುದ್ಧ ಒಂದು ಸಾಮ್ರಾಜ್ಯಶಾಹೀ ಕ್ರಿಯೆ ಕೂಡ ಪ್ರಜಾಪ್ರಭುತ್ವದ ರಕ್ಷಣೆಯ ಸಂಗತಿಯೆಂದು ಒಪ್ಪಿಕೊಳ್ಳುವಂತೆ ಜನತೆಯನ್ನು ಮೆತ್ತಗಾಗಿಸುವಲ್ಲಿ ಮಾಧ್ಯಮಗಳು ಒಂದು ಮಹತ್ವದ ಪಾತ್ರವನ್ನು ವಹಿಸುತ್ತಿವೆ. ನ್ಯೂಯಾರ್ಕ್ ಟೈಮ್ಸ್ ನಿಂದ ಹಿಡಿದು ಎಲ್ಲ ವೃತ ಪತ್ರಿಕೆಗಳೂ ಇದೇ ವಿಚಾರವನ್ನು ಮುಂದೊತ್ತುತ್ತಿವೆ.

ಸಂಕ್ಷಿಪ್ರವಾಗಿ ಹೇಳುವುದಾದರೆ, ಈಗ, ಕಾರ್ಪೊರೇಟ್ ಹಿತಾಸಕ್ತಿಗಳನ್ನು ಪ್ರಜಾಪ್ರಭುತ್ವದೊಂದಿಗೆ ಸಮೀಕರಿಸುವುದು ಎಲ್ಲರೂ ಒಪ್ಪುವ ನೀತಿಯಾಗುತ್ತಿರುವ ಒಂದು ಹೊಸ ಜಾಗತಿಕ ವ್ಯವಸ್ಥೆ ನಮ್ಮ ಮುಂದಿದೆ. ವೆನಿಜುವೆಲಾದ ಜನತೆ ಇದುವರೆಗೆ ಅಮೆರಿಕ-ಪ್ರಾಯೋಜಿತ ಕ್ಷಿಪ್ರಕ್ರಾಂತಿಯ ವಿರುದ್ಧ ದೃಢವಾಗಿ ನಿಂತಿದ್ದಾರೆ; ಆದರೆ ಇದರಿಂದಾಗಿ ಈಗ ಅಮೆರಿಕಾ ಅವರಿಗೆ ಸಶಸ್ತ್ರ ಹಸ್ತಕ್ಷೇಪದ ಬೆದರಿಕೆ ಹಾಕುತ್ತಿದೆ. ಅಂತಹ ಸಶಸ್ತ್ರ ಹಸ್ತಕ್ಷೇಪವೇನಾದರೂ ನಡೆದರೆ, ಆಗ ಅದು, ಇತ್ತೀಚಿನ ವರ್ಷಗಳಲ್ಲೇ, ಅಮೆರಿಕಾದ ಭದ್ರತೆಗೆ ಒಂದು ಬೆದರಿಕೆಯೆಂದೋ, ಅಥವ ಅಮೆರಿಕನ್ ಹಿತಾಸಕ್ತಿಗಳಿಗೆ ತೊಂದರೆಯೆಂದೋ ಕ್ಷುಲ್ಲಕ ಕಾರಣಕ್ಕಾಗಿ ಒಂದು ಸಾರ್ವಭೌಮ ದೇಶದ ವಿರುದ್ಧ ನಡೆಯುವ ಕಾರ್ಯಾಚರಣೆಯಾಗದೆ, ಆ ದೇಶ ಒಂದು ನವ-ಉದಾರವಾದಿ ಆಳ್ವಿಕೆಯಿಂದ ದೂರ ಸರಿಯುವ ಧೈರ್ಯ ತೋರಿದೆ ಎಂಬ ಕಾರಣಕ್ಕೇ ನಡೆಯುವ ಮೊದಲ ಇಂತಹ ಕಾರ್ಯಾಚರಣೆಯಾಗುತ್ತದೆ. ●

FMRAI ನ 25 ನೇ ಅಖಿಲ ಭಾರತ ಸಮ್ಮೇಳನ



ಅಖಿಲ ಭಾರತ ಔಷಧ ಮತ್ತು ಮಾರಾಟ ಪ್ರತಿನಿಧಿಗಳ ಫೆಡರೇಷನ್ (FMRAI) ನ 25 ನೇ ಸಮ್ಮೇಳನ 14 ರಿಂದ 17 ಫೆಬ್ರವರಿ 2019 ರ ವರೆಗೆ ಪಾಟ್ನದಲ್ಲಿ ನೆರವೇರಿತು. ಫೆಬ್ರವರಿ 14 ರಂದು ಬೆಳಿಗ್ಗೆ ಸಂಘಟನೆಯ ಅಧ್ಯಕ್ಷರಾದ ಆರ್. ವಿಶ್ವನಾಥನ್ ರವರು ಧ್ವಜಾರೋಹಣ ಮಾಡಿದರು. ನಂತರ ಹುತಾತ್ಮರ ಸ್ತಂಭಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

ಸಿಐಟಿಯುವಿನ ಅಧ್ಯಕ್ಷರಾದ ಕಾಂ. ಹೇಮಲತಾ ರವರು ಸಮ್ಮೇಳನದ ಉದ್ಘಾಟನೆಯನ್ನು ನೆರವೇರಿಸಿದರು. ಸಿಐಟಿಯುವಿನ ಪ್ರಧಾನ ಕಾರ್ಯದರ್ಶಿಗಳಾದ ಕಾಂ. ತಪನಸೇನ್ ರವರು ಫೆಬ್ರವರಿ 16 ರಂದು ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡಿದರು. ಔಷಧಿ ರಂಗದಲ್ಲಿ ಕೇಂದ್ರ ಸರ್ಕಾರದ ನೀತಿಗಳ ವಿರುದ್ಧ 2 ದಶಕಕ್ಕೂ ಹೆಚ್ಚು ಕಾಲ ಹೋರಾಟ ಮಾಡಿದ ಎಫ್‌ಎಂಆರ್‌ಎಐ ನ ಪಾತ್ರವನ್ನು ಅವರು ಶ್ಲಾಘಿಸಿದರು. 2017 ಮತ್ತು 2018 ನೇ ಇಸವಿಯಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಸದಸ್ಯತ್ವವನ್ನು ದಾಖಲಿಸಿದ್ದನ್ನು ಅಭಿನಂದಿಸಿದರು.

ಪ್ರಧಾನ ಕಾರ್ಯದರ್ಶಿ ಮತ್ತು ಖಜಾಂಚಿಯವರ ವರದಿಯ ಮೇಲೆ ಐವತ್ತೊಂದು ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿದರು. ಭಾರತದಾದ್ಯಂತದಿಂದ 878 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಕರ್ನಾಟಕದಿಂದ 20 ಪ್ರತಿನಿಧಿಗಳು ಭಾಗವಹಿಸಿದ್ದರು. ಎಫ್‌ಎಂಆರ್‌ಎಐ ನ ಅಧ್ಯಕ್ಷರಾಗಿ ಕಾಂ. ರಮೇಶ್ ಸುಂದರ್, ಪ್ರಧಾನ ಕಾರ್ಯದರ್ಶಿಗಳಾಗಿ ಕಾಂ. ಶಂತನು ಚಟರ್ಜಿ ಮತ್ತು ಖಜಾಂಚಿಯಾಗಿ ಕಾಂ. ಪಾರ್ಥೋ ರಕ್ಷಿತ್ ಅವಿರೋಧವಾಗಿ ಆಯ್ಕೆಯಾದರು. ಸಮ್ಮೇಳನದಲ್ಲಿ 20 ಸಂಗಾತಿಗಳು ಪದಾಧಿಕಾರಿಗಳಾಗಿ ಮತ್ತು 77 ಸಂಗಾತಿಗಳು ಕಾರ್ಯಕಾರಿ ಸಮಿತಿ ಸದಸ್ಯರು ಆಯ್ಕೆಯಾದರು. ಕರ್ನಾಟಕ ರಾಜ್ಯದಿಂದ ಇಬ್ಬರು ಸಂಗಾತಿಗಳು ಕಾರ್ಯಕಾರಿ ಮಂಡಳಿ ಸದಸ್ಯರಾಗಿ ಮತ್ತು 9 ಸಂಗಾತಿಗಳು ಸಾಮಾನ್ಯ ಮಂಡಳಿ ಸದಸ್ಯರಾಗಿ ಆಯ್ಕೆಯಾದರು.

ಕರ್ನಾಟಕ ರಾಜ್ಯ ಔಷಧ ಮತ್ತು ಮಾರಾಟ ಪ್ರತಿನಿಧಿಗಳ ಸಂಘದ ರಜತ ಮಹೋತ್ಸವ ಸಮ್ಮೇಳನವು ಬೆಳಗಾವಿಯಲ್ಲಿ 4, 5 ಮೇ 2019 ರಂದು ನಡೆಯಲಿದೆ.

ಹೆಚ್.ಜಿ. ಸುರೇಶ್
ಕರ್ನಾಟಕ ರಾಜ್ಯ ಔಷಧ ಮತ್ತು ಮಾರಾಟ ಪ್ರತಿನಿಧಿಗಳ ಸಂಘ

ಅಸಮಾನತೆ ನಿವಾರಿಸುವಲ್ಲಿ ಆಳುವವರ ನಿರಾಸಕ್ತಿ: SFI ಆರೋಪ

ಪ್ರಾದೇಶಿಕ ಅಸಮಾನತೆಯನ್ನು ನಿವಾರಣೆ ಮಾಡಲು ಆಳುವ ವರ್ಗದ ರಾಜಕಾರಣಿಗಳು ಆಸಕ್ತಿ ತೋರುತ್ತಿಲ್ಲ ಎಂದು SFI ರಾಜ್ಯ ಕಾರ್ಯದರ್ಶಿ ಗುರುರಾಜ ದೇಸಾಯಿ ತಿಳಿಸಿದರು. ಅವರು ನಗರದ ಗುರುಭವನದಲ್ಲಿ ನಡೆದ SFI ನ ಜಿಲ್ಲಾ ಸಮಾವೇಶ ಉದ್ಘಾಟಿಸಿ ಮಾತನಾಡಿದರು. ಮುಂದುವರೆದು ಅಸಮಾನತೆ ಹೋಗಲಾಡಿಸಲು 2000 ರಲ್ಲಿ ರಚನೆಯಾಗಿದ್ದ ಡಾ. ಎಂ ನಂಜುಂಡಪ್ಪ ಸಮಿತಿಯ ವರದಿ ನೀಡಿ 18 ವರ್ಷ ಕಳೆದಿವೆ. ಅಸಮಾನತೆಯ ಕೂಗು ಇನ್ನು ನಿಂತಿಲ್ಲ.



ಹೈದರಾಬಾದ್ ಕರ್ನಾಟಕ ಜಿಲ್ಲೆಗಳಿಗೆ 371(ಜೆ) ಅನ್ವಯ ಕೇಂದ್ರ ಸರ್ಕಾರ ವಿಶೇಷ ಸ್ಥಾನಮಾನ ನೀಡಿ ಐದು ವರ್ಷ ಪೂರ್ಣಗೊಂಡು ಆರನೇ ವರ್ಷಕ್ಕೆ ಕಾಲಿಟ್ಟಿದ್ದೇವೆ. ಆದರೂ ಸಮಾನತೆ ಇನ್ನು ಬರಲಿಲ್ಲ. ಆಳುವ ವರ್ಗದ ರಾಜಕಾರಣಿಗಳಿಗೆ 371(ಜೆ) ಕಲಂ ರಾಜಕೀಯ ದಾಳವಾಗಿದೆಯೇ ಹೊರತು ಇದರಲ್ಲಿರುವ ನ್ಯೂನ್ಯತೆಯನ್ನು ಸರಿಪಡಿಸಲು ಮುಂದಾಗುತ್ತಿಲ್ಲ. ಈ ಭಾಗದಲ್ಲಿ ಇಲಾಖೆಗಳಲ್ಲಿ ಹುದ್ದೆಗಳು ಖಾಲಿ ಖಾಲಿ ಇವೆ. ಶಿಕ್ಷಣ ಇನ್ನೂ ಅಭಿವೃದ್ಧಿ ಕಾಣುತ್ತಿಲ್ಲ. ಶಾಲೆ ಬಿಡುವ ಮಕ್ಕಳ ಸಂಖ್ಯೆ ಹೆಚ್ಚಾಗುತ್ತಲೆ ಇದೆ. ಸಹಜವಾಗಿ ಯಾರಿಗೆ ಮೀಸಲಾತಿ? ಎಲ್ಲಿದೆ ಅಭಿವೃದ್ಧಿ ಎಂಬ ಪ್ರಶ್ನೆ ಮೂಡುತ್ತಿದೆ. ಈ ಭಾಗದ ಆಡಳಿತ ಇಲಾಖೆಯ ವ್ಯಾಪ್ತಿಗೊಳಪಡುವ 12 ಸರ್ಕಾರಿ ಇಲಾಖೆಗಳು ಮತ್ತು ಇವುಗಳ ಅಧೀನದಲ್ಲಿರುವ ನಿಗಮ, ಮಂಡಳಿ, ಪ್ರಾಧಿಕಾರಗಳಲ್ಲಿ ಈವರೆಗೂ ಹುದ್ದೆಗಳನ್ನು ಗುರುತಿಸಿ, ಸ್ಥಳೀಯ ವೃಂದ ರಚಿಸಿ ಅಧಿಸೂಚನೆ ಹೊರಡಿಸಿಲ್ಲ. ನೇರ ನೇಮಕಾತಿ ಹುದ್ದೆಗಳ ಪೈಕಿ, 12 ಇಲಾಖೆಗಳಲ್ಲಿ 35 ಸಾವಿರಕ್ಕೂ ಹುದ್ದೆಗಳು ಖಾಲಿ ಇವೆ. ಹುದ್ದೆಗಳ ಭರ್ತಿ ಪ್ರಕ್ರಿಯೆಗೆ ಇನ್ನೂ ಚಾಲನೆ ಸಿಕ್ಕಿಲ್ಲ. ಅದೇ ರೀತಿ, ಬಡ್ತಿ ಮೂಲಕ 37 ಸಾವಿರಕ್ಕೂ ಹೆಚ್ಚು ಹುದ್ದೆಗಳನ್ನು ತುಂಬಬೇಕಿದೆ.

ಕಳೆದ ಐದು ವರ್ಷಗಳಿಂದಲೂ ಸ್ಥಳೀಯ ವೃಂದ ರಚನೆ ಮಾಡದ ಇಲಾಖೆಗಳ ಪಟ್ಟಿಯಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ, ಕೃಷಿ, ಹಿಂದುಳಿದ ವರ್ಗಗಳ ಕಲ್ಯಾಣ, ಉನ್ನತ ಶಿಕ್ಷಣ, ಒಳಾಡಳಿತ ಸಾರಿಗೆ, ಆರೋಗ್ಯ, ಕುಟುಂಬ ಕಲ್ಯಾಣ, ಆರ್‌ಡಿಪಿಆರ್, ಕೃಷಿ, ಪ್ರಾಥಮಿಕ, ಪ್ರೌಢಶಿಕ್ಷಣ, ಪಶುಸಂಗೋಪನೆ,, ಮೀನುಗಾರಿಕೆ, ನಗರಾಭಿವೃದ್ಧಿ ಇಲಾಖೆ ವ್ಯಾಪ್ತಿಯಲ್ಲಿನ ವಿವಿಧ ನಿಗಮ, ಮಂಡಳಿ, ಪ್ರಾಧಿಕಾರ, ಆಯೋಗಗಳು ಇವೆ. 6 ಜಿಲ್ಲೆಗಳಲ್ಲಿ ಶಿಕ್ಷಣ, ಆರೋಗ್ಯ ಮತ್ತು ಮೂಲ ಸೌಕರ್ಯಗಳ ಅನುಷ್ಠಾನಕ್ಕಾಗಿ ಹೈದ್ರಬಾದ ಕರ್ನಾಟಕ ಅಭಿವೃದ್ಧಿ ಮಂಡಳಿ ಸ್ಥಾಪಿಸಲಾಗಿದೆ. ಅದಕ್ಕಾಗಿ ಸಾಕಷ್ಟು ಅನುದಾನ ಬರುತ್ತಿದ್ದರೂ ಅದನ್ನು ಸಮರ್ಪಕವಾಗಿ ಬಳಸುವಲ್ಲಿ ರಾಜಕೀಯ ಇಚ್ಛಾಶಕ್ತಿ ಕೊರತೆ ಎದ್ದು ಕಾಣುತ್ತಿದೆ. ಸಾವಿರ ಸಾವಿರ ಕೋಟಿ ಹಣ ಬರುತ್ತಿದ್ದರೂ ಈ ಭಾಗ ಅಭಿವೃದ್ಧಿ ಕಾಣುತ್ತಿಲ್ಲ. ಜಿಲ್ಲಾಧಿಕಾರಿಗಳ ನಿರ್ಲಕ್ಷ್ಯ ಇದರಲ್ಲಿ ದೊಡ್ಡದಿದೆ. ಬಹುತೇಕ ಜಿಲ್ಲಾಧಿಕಾರಿಗಳು ಆ ಭಾಗದ ಶಾಸಕರ ಮತ್ತು ಸಚಿವರ ಹಾಗೂ ಲೋಕಸಭಾ ಸದಸ್ಯರ ಕೈಗೊಂಬೆಯಾಗಿದ್ದಾರೆ. ಕ್ರೀಯಾ ಯೋಜನೆ ರಚಿಸಿ ಹೈಕ ಮಂಡಳಿಗೆ ನೀಡಲು ಇವರಿಗೆ ಆಸಕ್ತಿ ಇಲ್ಲ. ಒಂದು ಮಾಹಿತಿಯ ಪ್ರಕಾರ ಕಳೆದ ವರ್ಷ ಉಳಿದ 1000 ಕೋಟಿ ರೂ ಸೇರಿ 2018–19 ನೇ ಸಾಲಿಗೆ ಈ ಕೆಳಗಿನಂತೆ ಹಣ ಬಿಡುಗಡೆಯಾಗಿದೆ. ಬೀದರ 231,17 ಕೋಟಿ ರೂ., ಕಲಬುರ್ಗಿಗೆ 433,67 ಕೋಟಿ ರೂ, ರಾಯಚೂರಿಗೆ 180,99 ಕೋಟಿ ರೂ, 277,76 ಕೋಟಿ ರೂ ಕೊಪ್ಪಳಕ್ಕೆ, ಬಳ್ಳಾರಿ ಜಿಲ್ಲೆಗೆ 256,26 ಕೋಟಿ ರೂ ಹಂಚಿಕೆ ಮಾಡಲಾಗಿದೆ. ಆದರೆ ಇಲ್ಲಿಯ ವರೆಗೆ ಕ್ರೀಯಾಯೋಜನೆ ನೀಡಿಲ್ಲ. ಇದು ಇವರ ನಿರಾಸಕ್ತಿಗೆ ಸಾಕ್ಷಿ ಎಂದು ಆರೋಪಿಸಿದರು.

ಸಮಾನ ಶಿಕ್ಷಣ:

ಶಿಕ್ಷಣದ ತಾರತಮ್ಯ ನಿವಾರಿಸಲು ಸರಕಾರಗಳ ನಿರ್ಲಕ್ಷ ಎದ್ದು ಕಾಣುತ್ತಿದೆ ಎಂದು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಖಈಖ ರಾಜ್ಯಾಧ್ಯಕ್ಷ ವಿ. ಅಂಬರೀಶ್ ನುಡಿದರು. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಶಿಕ್ಷಣ ಮತ್ತು ಉದ್ಯೋಗವನ್ನು ನಿರಾಕರಣೆ ಮಾಡುವ ಮೂಲಕ ದೇಶದ ಅಭಿವೃದ್ಧಿಗೆ ಹಿನ್ನಡೆಯಾಗಿದೆ.

ಕೇಂದ್ರ ಸಚಿವ ಅರುಣ್ ಜೇಟ್ಲಿ ನಿರುದ್ಯೋಗ ಇಲ್ಲ ಎಂದು ಹೇಳುತ್ತಿದ್ದಾರೆ. ಅವರು ಜನರ ಬಳಿಗೆ ಹೋಗಿ ಬಂದರೆ ಮಾಹಿತಿ ಗೊತ್ತಾಗುತ್ತದೆ. ಪ್ರಧಾನಿಯವರು ಪಕೋಡಾ ಮಾರಿ ಎಂದು ಉದ್ಯೋಗಾಕಾಂಕ್ಷಿಗಳಿಗೆ ಅವಮಾನ ಮಾಡುತ್ತಿದ್ದಾರೆ. ದೇಶಪ್ರೇಮದ ಹೆಸರಲ್ಲಿ ನಮ್ಮನ್ನು ದಾರಿ ತಪ್ಪಿಸುತ್ತಿದ್ದಾರೆ. ನಿಜವಾದ ದೇಶಪ್ರೇಮವನ್ನು ನಾವು ಪ್ರದರ್ಶಿಸುವುದಲ್ಲ ಮಾಡಿತೋರಿಸುವುದು. ದೇಶಕ್ಕಾಗಿ ಕೊಡುಗೆ ನೀಡುವುದು ಎಂದರು. ಸಮಾನ ಗುಣಮಟ್ಟದ ಶಿಕ್ಷಣ, ಹಾಗೂ ದೇಶವನ್ನು ಆರ್ಥಿಕವಾಗಿ ಬಲಪಡಿಸುವುದು ಸರಕಾರದ ಕೆಲಸವಾಗಬೇಕು. ಜಾಗೃತಿ ಮೂಡಿಸಲು ಚಳುವಳಿ ಬಲಗೊಳ್ಳಬೇಕು ಎಂದರು.

ವೇದಿಕೆಯ ಮೇಲೆ ಅಮರೇಶ್ ಕಡಗದ್, ಬಾಳಪ್ಪ ಹುಲಿಹೈದರ್, ಸುಬಾನ್ ಸೈಯ್ಯದ್, ಮಂಜುನಾಥ್ ಡಗ್ಗಿ, ಮರಿನಾಗ ಡಗ್ಗಿ, ಗ್ಯಾನೇಶ್ ಕಡಗದ್, ಸಿದ್ದಪ್ಪ ಎಂ ಸೇರಿದಂತೆ ನೂರಾರು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಬೆಂಗಳೂರು ಸಿನಿಮೋತ್ಸವದಲ್ಲಿ.... ಪುಟ 16 ರಿಂದ

ಅಪವಾದಗಳಿಗೆ ಗುರಿಯಾಗುವ, ಕೊನೆಗೆ ಗಂಡನ ಡೆತ್ ಸರ್ಟಿಫಿಕೇಟಿಗಾಗಿ ಅಲೆದು ಹೃದಯಹೀನ ಅಧಿಕಾರಶಾಹಿಯ ಶೋಷಣೆಗೆ ಸಿಕ್ಕು ಜೀವಂತ ಶವವಾಗುವ, ತನ್ನದೇ ರೀತಿಯಲ್ಲಿ 'ನ್ಯಾಯ ಪಡೆದುಕೊಳ್ಳುವ' ಅರ್ಧ–ವಿಧವೆಯೊಬ್ಬಳ ವ್ಯಥೆಯ ಕರುಳು ಕಿವುಚುವ ನಿರೂಪಣೆ.

ಫತ್ವಾ

ಟ್ಯುನಿಶೀಯಾದಲ್ಲಿ 'ಅಫಘಾತ'ವೆಂದು ಕಾಣುವ ಆದರೆ ನಿಗೂಢ ರೀತಿಯಲ್ಲಿ ಸಾಯುವ ಮಗನ ಕೊನೆಯ ಸಂಸ್ಕಾರಕ್ಕೆ ಬಂದ ಫ್ರಾನ್ಸಿನಲ್ಲಿ ನೆಲೆಸಿದ ತಂದೆ ಸಾವಿನ ಕಾರಣಗಳ ಅನ್ವೇಷಣೆ ಸುತ್ತ ಕತೆ ಹೆಣೆಯಲಾಗಿದೆ. ಮಗ ಇಸ್ಲಾಮಿಕ್ ಮೂಲಭೂತವಾದಿ ಗುಂಪಿಗೆ ಸೇರಿದ್ದ, ಅವನ ಸಾವಿನಲ್ಲಿ ಅದರ ಕೈವಾಡವಿರಬಹುದೇ ಎಂದು ತಿಳಿಯಲು ಹೊರಡುವ ಅವನಿಗೆ ಟ್ಯುನಿಶೀಯಾದ ಸಮಾಜದಲ್ಲಿ ಆದ ಬದಲಾವಣೆಗಳು ದಂಗು ಬಡಿಸುತ್ತವೆ. ಸಾಕಷ್ಟು ಸೆಕ್ಯುಲರ್ ಆಗಿದ್ದ ದೇಶ ಇಸ್ಲಾಮಿಕ್ ಮೂಲಭೂತವಾದಿ ವಿಷಕ್ಕೆ ಬಲಿಯಾಗಿರುವ ಸ್ಥಿತಿ ಕಂಡು ಮರುಗುವ, ತನ್ನದೇ ಆದ ರೀತಿಯಲ್ಲಿ ಅದಕ್ಕೆ ಪ್ರತಿರೋಧ ಒಡ್ಡಲು ಹೋಗುವ ಆತನ ಮೂಲಕ ದಶಕದ ಹಿಂದೆ ಆ ದೇಶದಲ್ಲಿ ನಡೆದ ರಾಜಕೀಯ ತುಮುಲದ ಚಿತ್ರಣ ಸಿಗುತ್ತದೆ.

'ಅನ್–ರಿಮೆಂಬರ್'

ಇದೂ ಒಂದು ಸಂಕೀರ್ಣ ಕುಟುಂಬದ ಕತೆ. ಚಿಲಿಯ ತಂದೆ, ಬ್ರೆಜಿಲಿನ ತಾಯಿ. ಇಬ್ಬರೂ ಎಡಪಂಥೀಯ ಪಕ್ಷಗಳ ಕಾರ್ಯಕರ್ತರು. ಮೂರು ಮಕ್ಕಳು ಎಲ್ಲವೂ ಅವರಿಬ್ಬರದಲ್ಲ. ಫ್ರಾನ್ಸಿನಲ್ಲಿ ವಾಸಿಸುತ್ತಿದ್ದು ಬ್ರೆಜಿಲಿಗೆ ಮಿಲಿಟರಿ ಸರಕಾರ ಉರುಳಿದಾಗ ವಾಪಸಾಗುತ್ತಿದ್ದಂತೆ ಆರಂಭವಾಗುವ ಚಿತ್ರ. ಹಿಂದಿರುಗಲು ಮನಸ್ಸಿಲ್ಲದಿರುವ ತಂದೆ–ತಾಯಿಯರ ರಾಜಕೀಯ ಚಟುವಟಿಕೆ ಬಗ್ಗೆ ಆಕ್ರೋಶವಿರುವ ದೊಡ್ಡ ಮಗಳು ಬ್ರೆಜಿಲಿನ ಜೀವನಕ್ಕೆ ಒಗ್ಗಿಕೊಳ್ಳುತ್ತಾ ಅಜ್ಜಿಯ ಮೂಲಕ, ಮಿಲಿಟರಿ ಸರಕಾರದ ದಮನದಲ್ಲಿ ಕಾಣೆಯಾದ ತಂದೆಯ ಬಗ್ಗೆ, ದೇಶದ ರಾಜಕೀಯ ಪರಿಸ್ಥಿತಿ ಬಗ್ಗೆ ನಿಧಾನವಾಗಿ ಅರ್ಥ ಮಾಡಿಕೊಳ್ಳುತ್ತಾ ದೊಡ್ಡವಳಾಗುವುದು ಕತೆಯ ಹಂದರ. ಇನ್ನೂ ಸರ್ವಾಧಿಕಾರ ತಾಂಡವವಾಡುತ್ತಿರುವ ಚಿಲಿಗೆ ಭೂಗತ ಕಾರ್ಯಾಚರಣೆಗೆ ತಂದೆ ತೆರಳುವುದರೊಂದಿಗೆ ಕೊನೆಯಾಗುತ್ತದೆ. ಇಲ್ಲೂ ಎಡಪಂಥೀಯ ರಾಜಕೀಯ ಬದ್ಧತೆ ಮತ್ತು ತ್ಯಾಗಶೀಲತೆ, ರಾಜಕೀಯ ಕಾರ್ಯಕರ್ತರ ಕುಟುಂಬಗಳ ತುಮುಲ, ಅದನ್ನು ಎದುರಿಸಲು ಬೇಕಾದ ಮಾನವೀಯ ಬಂಧ, ಕುಟುಂಬ ಬರಿಯ ಜೈವಿಕ ಬಂಧದ ಮೇಲೆ ನಿಂತಿರಬೇಕಾಗಿಲ್ಲ ಎಂಬ ಭಾವ – ಹೀಗೆ ಹಲವು ಪದರುಗಳ ಹಲವು ಆಯಾಮಗಳನ್ನು ಚಿತ್ರ ಬಿಚ್ಚಿಡುತ್ತದೆ.

ಒಟ್ಟಿನಲ್ಲಿ ಈ ಚಿತ್ರಗಳು ನನ್ನನ್ನು ತಟ್ಟಿದ್ದು, ತೀರಾ ವಾಚ್ಯವಾಗದೆ ಅರ್ಥಪೂರ್ಣ ದೃಶ್ಯ–ಮಾತುಗಳ ಮೂಲಕವೇ – ಅವು ಉಂಟು ಮಾಡುವ ಹಲವು ಪದರುಗಳ ಹಲವು ಆಯಾಮಗಳ ಸಂಕೀರ್ಣ ವಾಸ್ತವತೆಯ ಆಳವಾದ ಅರಿವು–ಅನಿಸಿಕೆ, ಇನ್ನೂ ಉತ್ತಮವಾದ ಮಾನವೀಯ ಸಂಬಂಧಗಳಿರುವ ಸಮಾಜಕ್ಕಾಗಿ ತುಡಿಯುವ ಅವುಗಳಲ್ಲಿನ ಕನಸುಗಾರಿಕೆಯ ಸಾಮಾನ್ಯ ಎಳೆ.

ಈಕ್ವೆಡಾರ್ : ಐ.ಎಂ.ಎಫ್ ನ ಸಾಲದ ಶೂಲಕ್ಕೆ ಬಲಿ?



ತಮ್ಮ ದೇಶದ "ಸಮೃದ್ಧ ಯೋಜನೆ" ಗಾಗಿ ಅಂತರ ರಾಷ್ಟ್ರೀಯ ಹಣಕಾಸು ಸಂಸ್ಥೆ (ಐ.ಎಂ.ಎಫ್) ಯು, 10.2 ಶತಕೋಟಿ ಡಾಲರ್ ನಷ್ಟು ಸಾಲವನ್ನು ಕೊಡುವುದಾಗಿ ಈಕ್ವೆಡಾರ್ ಅಧ್ಯಕ್ಷ ಲೆನಿನ್ ಮೊರೆನೊ ರೊಂದಿಗೆ ಐ.ಎಂ.ಎಫ್. ಒಪ್ಪಂದಕ್ಕೆ ಸಹಿ ಹಾಕಿದೆ. ಸಾಲದ ಮೇಲಿನ ಬಡ್ಡಿ ದರವು ಶೇ.5 ಕ್ಕಿಂತ ಕಡಿಮೆ ಇದ್ದು, 30 ವರ್ಷಗಳ ಒಳಗೆ ಮರು ಪಾವತಿಸಲು ಕಾಲಾವಧಿಯನ್ನು ನೀಡಲಾಗಿದೆ ಎಂದು ಈಕ್ವೆಡಾರ್ ಅಧ್ಯಕ್ಷರು ಫೆಬ್ರವರಿ 20 ರಂದು ಘೋಷಿಸಿದ್ದಾರೆ.

ಒಟ್ಟು 10.2 ಶತಕೋಟಿ ಡಾಲರ್ ಸಾಲದ ಒಪ್ಪಂದದಲ್ಲಿ, ಐ.ಎಂ.ಎಫ್. 4.2 ಶತಕೋಟಿ ಡಾಲರ್ ಕೊಡಲಿದ್ದು, ಉಳಿದಿದ್ದನ್ನು ವಿಶ್ವ ಬ್ಯಾಂಕ್, ಇಂಟರ್–ಅಮೆರಿಕನ್ ಬ್ಯಾಂಕ್, ಲ್ಯಾಟಿನ್ ಅಮೆರಿಕದ ಡೆವೆಲಪ್ ಮೆಂಟ್ ಬ್ಯಾಂಕ್, ಯುರೋಪಿಯನ್ ಇನ್ವೆಸ್ಟ್ ಮೆಂಟ್ ಬ್ಯಾಂಕ್, ಲ್ಯಾಟಿನ್ ಅಮೆರಿಕನ್ ಸಂಸ್ಥೆ ರಿಸರ್ವ್ ಬ್ಯಾಂಕ್ ಮತ್ತು ಫ್ರೆಂಚ್ ಡೆವೆಲಪ್ಮೆಂಟ್ ಏಜೆನ್ಸಿ (ಎ.ಎಫ್.ಡಿ) ಗಳು ಭರಿಸಲಿದ್ದು, ಈ ಸಹಯೋಗಕ್ಕೂ ಐ.ಎಂ.ಎಫ್ ನೇತೃತ್ವದಲ್ಲಿ ಈಕ್ವೆಡಾರ್ ಅಧ್ಯಕ್ಷರು ಸಹಿ ಮಾಡಿದ್ದಾರೆ.

ಈಕ್ವೆಡಾರ್ ಅಧ್ಯಕ್ಷ ಮೊರೆನೊ ಪ್ರಕಾರ, ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯ ಬೆಂಬಲ ಸಾಲದ ರೂಪದಲ್ಲಿ ಬರುತ್ತಿದ್ದರೂ ಸಹಾ, ಇದರಿಂದಾಗಿ ದೇಶದೊಳಗೆ "ಉದ್ಯೋಗಗಳ ಅವಕಾಶಗಳನ್ನು ಸೃಷ್ಟಿಸಲು" ಸಾಧ್ಯವಾಗುತ್ತದೆ. ನಿವೃತ್ತಿ ವೇತನ, ಕಾರ್ಮಿಕರಿಗೆ ಬೋನಸ್ ಮತ್ತು ಎಲ್ಲರಿಗೂ ವಸತಿ ಒದಗಿಸಲು ನೆರವಾಗುತ್ತದೆ. ಹೆಚ್ಚಿನ ಶಾಲೆಗಳನ್ನು ನಿರ್ಮಿಸಲು, ಆರೋಗ್ಯ ಸಂರಕ್ಷಣೆ ಹಾಗೂ ಎಲ್ಲಕ್ಕಿಂತ ಮಿಗಿಲಾಗಿ ರಾಷ್ಟ್ರೀಯ ಭದ್ರತೆಯನ್ನು ಬಲ ಪಡಿಸಲು ಸಹಾಯವಾಗುತ್ತದೆ ಎಂಬ ಆಶಯವನ್ನು ಅಧ್ಯಕ್ಷ ಮೊರೆನೊ ವ್ಯಕ್ತಪಡಿಸಿದ್ದಾರೆ.

ಆದರೂ, ಅಧ್ಯಕ್ಷರ ಆಶಯಗಳು ಈಡೇರುವುದು ಅಷ್ಟು ಸುಲಭವಲ್ಲ ಎನ್ನುತ್ತಾರೆ ಅಲ್ಲಿನ ರಾಜಕೀಯ ವಕ್ತಾರರು. ಅವರ ಪ್ರಕಾರ, ಈ ಹಿಂದೆ ಮತ್ತು ಇತ್ತೀಚೆಗೆ ಐ.ಎಂ.ಎಫ್.ನಿಂದ ಸಾಲ ಪಡೆದ ಅರ್ಜೆಂಟೈನಾ ಮತ್ತು ಹೈಟಿ ದೇಶಗಳ ಅನುಭವವನ್ನು ನೋಡಿದರೆ, ಸಾಲ ಪಡೆದ ನಂತರ ಐ.ಎಂ.ಎಫ್.ನ ಷರತ್ತುಗಳಂತೆ ಸಾಲದ ಹೊರೆಯನ್ನು "ಆಯಾ ದೇಶಗಳ ಕಾರ್ಮಿಕರ ಮತ್ತು ಮಧ್ಯಮ ವರ್ಗದ ಮೇಲೆ ಹೆಚ್ಚುವರಿಯಾಗಿ ಆರ್ಥಿಕ ಮಿತವ್ಯಯ" ವಾದ ಕಠಿಣ ಕ್ರಮಗಳ ಮೂಲಕ ಹೇರಲಾಗುತ್ತದೆ. ಪ್ರಸ್ತುತ ಅರ್ಜೆಂಟೈನಾ ಮತ್ತು ಹೈಟಿ ದೇಶಗಳ ಆರ್ಥಿಕ ಮತ್ತು ಸಾಮಾಜಿಕ ದುಸ್ಥಿತಿಗಳು ವಾಸ್ತವತೆಯ ಚಿತ್ರಣ ಸಾಕ್ಕಿಯಾಗಿ ನಮ್ಮ ಕಣ್ಣ ಮುಂದಿವೆ. ಸಾಲದ ಶೂಲಕ್ಕೆ ಸಿಕ್ಕಿ ಈ ಎರಡು ದೇಶಗಳು ನಲುಗಿ ಹೋಗಿವೆ. ಸಾಲ ಪಡೆದ ನಂತರ, ಪರಿಸ್ಥಿತಿ ಹಿಂದಿಗಿಂತಲೂ ಹೆಚ್ಚು ಹದಗೆಟ್ಟಿರುವುದನ್ನು ಕಾಣಲಾಗುತ್ತಿದೆ.

ಐ.ಎಂ.ಎಫ್ ಸಾಲ: ಅರ್ಜೆಂಟೈನಾ ಹದೆಗೆಟ್ಟ ಪರಿಸ್ಥಿತಿ

ಅರ್ಜೆಂಟೈನಾಕ್ಕೆ ಸಾಲ ಕೊಡುವ ಮೂಲಕ ಐ.ಎಂ.ಎಫ್ ಆ ದೇಶಕ್ಕೆ ಮತ್ತೆ ಪ್ರವೇಶ ಮಾಡಿತು. 2018ರಲ್ಲಿ ಚುನಾಯಿತರಾದ ಅಲ್ಲಿನ ಬಲಪಂಥೀಯ ಅಧ್ಯಕ್ಷ ಮಾರಿಶಿಯೋ ಮ್ಯಾಕ್ರಿಯರು ಜಾರಿಗೆ ತಂದ ಮಾರಕ ನವ–ಉದಾರವಾದಿ ಆರ್ಥಿಕ ನೀತಿಗಳು ಮತ್ತು ಇದರ ಭಾಗವಾಗಿ ಜಾರಿಗೆ ತಂದ 'ಹಣಕಾಸು ಕೊರತೆ'ಯ ಪರಿಣಾಮವಾಗಿ, ಅರ್ಜೆಂಟೈನಾ ದೇಶವನ್ನು 27 ವರ್ಷಗಳ ಹಿಂದಕ್ಕೆ ಕೊಂಡಯ್ಯಲಾಗಿದೆ. ಅಂದರೆ, 1990 ರ ದಶಕಗಳಲ್ಲಿ ಇದ್ದ ಶೇ.47.6 ರಷ್ಟು ಹಣ ದುಬ್ಬರವನ್ನು ಎದುರಿಸುತ್ತಿದೆ ಎನ್ನುತ್ತವೆ ಆರ್ಥಿಕ ತಜ್ಞರ ವರದಿಗಳು. ಅತಿಯಾದ ಹಣದುಬ್ಬರ ಹಾಗೂ ಆರ್ಥಿಕ ಹಿಂಜರಿತದ ಕಾರಣ, ಅಲ್ಲಿನ ಸಣ್ಣ ಮತ್ತು ಮಧ್ಯಮ ಉದ್ಯಮಗಳು ದೊಡ್ಡ ಪ್ರಮಾಣದಲ್ಲಿ ಮುಚ್ಚಿ ಹೋಗಿವೆ. ಬಡತನ, ದಾರಿದ್ರ್ಯ, ನಿರುದ್ಯೋಗ ಅಪಾಯಕಾರಿ ಮಟ್ಟವನ್ನು ತಲುಪಿ, ಸಾಮಾಜಿಕ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿದೆ ಹಾಗೂ ರಾಷ್ಟ್ರೀಯ ಸಾಲದ ಹೊರೆಯು ವಿಪರೀತವಾಗಿ ಹೇರಿಕೆಯಾಗಿದೆ. ದೇಶದ ಕರೆನ್ಸಿ ತೀವ್ರವಾಗಿ ಕುಸಿತದ ಹಂಚು ತಲುಪಿದೆ. ಇದರ ಹೊರೆಯನ್ನು ಕಡಿಮೆ ಮಾಡಲು ಕಾರ್ಮಿಕರ ಮೇಲೆ ಮಿತವ್ಯಯದ ಕ್ರಮಗಳನ್ನು



ಒತ್ತಾಯ ಪೂರ್ವಕವಾಗಿ ಹೇರಲಾಗಿದೆ.

ಹೈಟಿಯ ದುಸ್ಥಿತಿ

ಕೆರಿಬಿಯನ್ ಪ್ರದೇಶದ ಅತಿ ಕಡು ಬಡ ರಾಷ್ಟವಾದ ಹೈಟಿಯ ಪರಿಸ್ಥಿತಿ ಬೇರೆಲ್ಲಾ ರಾಷ್ಟಗಳಿಗಿಂತ ತುಂಬಾ ಕೆಟ್ಟದಾಗಿದೆ. ಈ ದೇಶದ ಜನಸಂಖ್ಯೆಯ ಸುಮಾರು ಶೇ.60 ರಷ್ಟು ಜನರು ಬಡತನ ರೇಖೆಗಿಂತ ಕೆಳಗಿದ್ದಾರೆ. ಅದರಲ್ಲೂ, ಶೇ.24 ರಷ್ಟು ಜನರ ಬದುಕು ತೀವ್ರ ಬಡತನದಿಂದ ಜರ್ಝರಿತವಾಗಿದೆ. ನವ–ಉದಾರವಾದದ ನೀತಿಯ ಜಾರಿಯಿಂದಾಗಿ ಅಪರಾಧಗಳು ಹೆಚ್ಚಾಗಿವೆ. ಭ್ರಷ್ಟಾಚಾರ ತಾಂಡವವಾಡುತ್ತಿದೆ ಹಾಗೂ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆ ಉಲ್ಬಣಗೊಂಡು ಪರಿಸ್ಥಿತಿ ತುಂಬಾ ಗಂಭೀರವಾಗಿದೆ. 2018 ರಲ್ಲಿ ಅಧ್ಯಕ್ಷ ಜೊವೆನೆಲ್ಲ್ ಮೊಯ್ಸ್‌ರವರು, ಐ.ಎಂ.ಎಫ್.ನ ಅಣತಿಯಂತೆ, ಇಂಧನದ ಮೇಲಿನ ಸಬ್ಸಿಡಿಯನ್ನು ವಾಪಸ್ಸು ಪಡೆದ ಪರಿಣಾಮವಾಗಿ ಇಂಧನ ಬೆಲೆಯನ್ನು ಶೇ.38 ರಿಂದ ಶೇ.51ಕ್ಕೆ ಏರಿಸಲಾಗಿತ್ತು. ಇದರ ವಿರುದ್ಧ ಅಲ್ಲಿನ ಕಾರ್ಮಿಕರ ನೇತೃತ್ವದಲ್ಲಿ ನಡೆದ ಹೋರಾಟದಲ್ಲಿ ಹೈಟಿಯ ಸಾಮಾನ್ಯ ಜನರು ಕೂಡ ದೊಡ್ಡ ಪ್ರಮಾಣದಲ್ಲಿ ಸ್ಪಂದಿಸಿದ್ದರು. ಅಧ್ಯಕ್ಷರ ರಾಜೀನಾಮೆಗೆ ಒತ್ತಾಯಿಸಿ ಮುಷ್ಕರವನ್ನು ನಡೆಸಿದ್ದರು. ಇದರ ಪರಿಣಾಮವಾಗಿ ಸರ್ಕಾರ ಬೆಲೆ ಏರಿಕೆಯನ್ನು ಹಿಂದಕ್ಕೆ ಪಡೆದು ಸಬ್ಸಿಡಿಯನ್ನು ಮುಂದುವರಿಸಿತ್ತು.

ಹೀಗೆ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳು ಆರ್ಥಿಕವಾಗಿ ಸಹಾಯ ಮಾಡುವ ಹೆಸರಿನಲ್ಲಿಯೇ, ತಮ್ಮ ಷರತ್ತುಗಳನ್ನೂ ಹೇರುವ ಮೂಲಕ ಸಾಲ ಪಡೆದ ದೇಶಗಳ ಆರ್ಥಿಕತೆಯನ್ನು ಬುಡಮೇಲು ಮಾಡಿರುವ ಅನುಭವಗಳು ಜಗತ್ತಿನ ಅನೇಕ ಭಾಗಗಳಲ್ಲಿ ಕಾಣುತ್ತವೆ. ಇದು ಅಂತರಾಷ್ಟ್ರೀಯ ಹಣಕಾಸು ಬಂಡವಾಳದ ಶೋಷಣೆಯ ಧೋರಣೆ ಎಂಬುದನ್ನು ಮರೆಯಬಾರದು.

ಹೋರಾಟಕ್ಕೆ ಇಕ್ವಾಡಾರ್ ಜನ ಸಜ್ಜಾಗುತ್ತಿದ್ದಾರೆ

ಐ.ಎಂ.ಎಫ್ ನೊಂದಿಗೆ ಸಾಲಕ್ಕಾಗಿ ಸಹಿ ಮಾಡುವ ಒಂದು ವಾರದ ಹಿಂದೆಯೇ ಅಂದರೆ ಫೆಬ್ರವರಿ 13 ರಂದು, ಈಕ್ವೆಡಾರ್ ಅಧ್ಯಕ್ಷ ಮೊರೆನೊ ರವರು "ಸಾರ್ವಜನಿಕ ಕಂಪನಿಗಳ ಖಾಸಗೀಕರಣ" ಮತ್ತು ಸುಮರು 25,000 ಸಾರ್ವಜನಿಕ ಸೇವೆಗಳ ಸ್ಥಗಿತಗೊಳಿಸುವಿಕೆ, ಇಂಧನ ಮೇಲಿನ ಸಬ್ಸಿಡಿ ಕಡಿತ ಮತ್ತು ಬೆಲೆಗಳ ಹೆಚ್ಚಳ ಮಾಡುವ ಐ.ಎಂ.ಎಫ್. ಆರ್ಥಿಕ ಮಿತವ್ಯಯ ನೀತಿಗಳ ಪ್ರಸ್ತಾಪವನ್ನು ಪ್ರಕಟಿಸಿದ್ದರು. ಇದರ ವಿರುದ್ಧದ ಹೋರಾಟಗಳಲ್ಲಿ ಈಕ್ವೆಡಾರ್ ನ ಹಲವು ನಗರಗಳಲ್ಲಿ, ಪ್ರಮುಖವಾಗಿ ರಾಜಧಾನಿ ಕ್ವಿಟೊ ನಗರದಲ್ಲಿ ಬಾರಿ ಸಂಖ್ಯೆಯಲ್ಲಿ ಜನರು, ಕಾರ್ಮಿಕರು ಬೀದಿಗಿಳಿದು ಪ್ರತಿಭಟಿಸಿದ್ದಾರೆ. ಇದೀಗ ಬೃಹತ್ ಸಾಲವನ್ನು ತೆಗೆದುಕೊಳ್ಳುವ ಸಲುವಾಗಿ ಅಧ್ಯಕ್ಷರು ಒಪ್ಪಂದ ಕ್ಕೆ ಸಹಿ ಮಾಡಿದ್ದಾರೆ. ಹಾಗಾಗಿ, ಈಕ್ವೆಡಾರ್ ಐ.ಎಂ.ಎಫ್.ನ ಸಾಲದ ಶೂಲಕ್ಕೆ ಬಲಿಯಾಗುವ ಸಂಭವ ಹೆಚ್ಚಾಗಿದೆ. ಮತ್ತಷ್ಟು ಕಠಿಣ ಹಾಗೂ ಕ್ರೂರ ಮಿತವ್ಯಯ ಕ್ರಮಗಳನ್ನು ಹೇರುವ ನಿರ್ಧಾರವನ್ನು ತೆಗೆದುಕೊಳ್ಳುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಈ ಹಿನ್ನೆಲೆಯಲ್ಲಿ ಈಕ್ವೆಡಾರ್ ಜನರು ಈಗಾಗಲೇ ಬೃಹತ್ ಹೋರಾಟ ನಡೆಸಲು ಸಜ್ಜಾಗುತ್ತಿದ್ದಾರೆ.



ನೈಜೀರಿಯಾ ವಿವಾದಾಸ್ಪದ ಚುನಾವಣೆ

ನೈಜೀರಿಯಾದಲ್ಲಿ ಚುನಾವಣೆಗಳು ನಡೆದಿದ್ದು ಆಲ್ ಪ್ರೊಗ್ರೆಸಿವ್ ಪಕ್ಷ (ಎಪಿಸಿ)ದ ಪ್ರಸ್ತುತ ಅಧ್ಯಕ್ಷ ಮುಹಮ್ಮದು ಬುಹಾರಿ ಅವರು ಅವರ ಹತ್ತಿರದ ಪ್ರತಿಸ್ಪರ್ಧಿ ಅತಿಕು ಅಬುಬಾಕರ್ ಅವರನ್ನು 40 ಲಕ್ಷ ಮತಗಳ ಅಂತರದಿಂದ ಸೋಲಿಸಿದ್ದಾರೆ. ಅದರೆ ಸೋತ ಅಭ್ಯರ್ಥಿ ಅಬುಬಾಕರ್ ಫಲಿತಾಂಶವನ್ನು ಒಪ್ಪಿಕೊಳ್ಳಲು ನಿರಾಕರಿಸಿದ್ದು, ಅದನ್ನು ಕೋರ್ಟಿನಲ್ಲಿ ಪ್ರಶ್ನಿಸುವುದಾಗಿ ಹೇಳಿದ್ದಾರೆ. ಅವರು ಚುನಾವಣೆ ಹಿಂಸಾಚಾರ, 'ಮಿಲಿಟರೀಕರಣ' ಮತ್ತು ತೀವ್ರ ಅಕ್ರಮಗಳಿಂದ ಕೂಡಿತ್ತು ಎಂದು ಆಪಾದಿಸಿದ್ದಾರೆ. ಅಧ್ಯಕ್ಷೀಯ ಸ್ಪರ್ಧೆಯಲ್ಲಿ 79 ಸ್ಪರ್ಧಿಗಳಿದ್ದರು.

ಚುನಾವಣೆಗಳು ಮೊದಲಿನಿಂದಲೂ ವಿವಾದಗ್ರಸ್ತವಾಗಿದ್ದು ಹಿಂದೆಂದಿಗಿಂತಲೂ ಕಡಿಮೆ (35.6%) ಮತದಾನವಾಗಿದೆ. 2015ರ'ಲ್ಲಿ ನಡೆದ ಹಿಂದಿನ ಚುನಾವಣೆಂಯುಲ್ಲಿ ಮತದಾನದ ಪ್ರಮಾಣ ಶೇ. 44 ರಷ್ಟಿತ್ತು. ಚುನಾವಣೆಯನ್ನು ಕೇವಲ 6 ಗಂಟೆಗಳ ಮೊದಲು ಮುಂದಕ್ಕೆ ಹಾಕಿದ್ದು, ಚುನಾವಣೆಯ ಮೊದಲು ಮತ್ತು ಆ ದಿನದಂದು ನಡೆದ ಹಿಂಸಾಚಾರ, ಚುನಾವಣೆಯ ದಿನದಂದು ಹಲವು ವಿಳಂಬಗಳು ಮತ್ತು ಅದರಿಂದಾಗಿ ಆದ ನಿಯಮಗಳ ಪಾಲನೆಯ ವ್ಯತ್ಯಯಗಳು, ಇವೆಲ್ಲಾ ಸೇರಿ, ಮತದಾನದ ಪ್ರಮಾಣ ಇಷ್ಟು ಕಡಿಮೆಯಾಗಿತ್ತು. ರಾಜಧಾನಿ ಲಾಗೋಸ್ ನಲ್ಲಿ 11 ಲಕ್ಷ ಮತಗಳು (ಒಟ್ಟು ಮತದಾನದ ಕೇವಲ ಶೇ.1)ಮಾತ್ರ ಕ್ರಮಬದ್ಧವಾಗಿದ್ದವು.

ಅರ್ಹ ಮತದಾರರಲ್ಲಿ ರಿಜಿಸ್ಟರ್ ಮಾಡಿಕೊಂಡ ಮತದಾರರ ಪ್ರಮಾಣ (41%) ಸಹ ತೀರಾ ಕಡಿಮೆಯಾಗಿತ್ತು. ರಿಜಿಸ್ಟರ್ ಮಾಡಕೊಂಡಿದ್ದ 8.2 ಕೋಟಿ ಮತದಾರರಲ್ಲಿ 1.1 ಕೋಟಿ (13%) ಮತದಾರರಿಗೆ ವೋಟರ್ ಕಾರ್ಡ್ ತಲುಪದೆ, ಮತದಾನ ಮಾಡಲಾಗಿರಲಿಲ್ಲ. ಚುನಾವಣಾ ಹಿಂಸಾಚಾರದಲ್ಲಿ (ಹಿಂದಿನ ಚುನಾವಣೆಗಿಂತ ಇದು ಕಡಿಮೆಯಿದ್ದರೂ) 39 ಜನ ಸತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಎರಡನೇ ಸ್ಥಾನದಲ್ಲಿದ್ದ ಅಭ್ಯರ್ಥಿ ಕೋರ್ಟಿಗೆ ಹೋಗಲು ನಿರ್ಧರಿಸಿರುವುದು ನೈಜೀರಿಯಾದ ಈಗಾಗಲೇ ಅಭದ್ರವಾಗಿರುವ ಪ್ರಜಾಸತ್ತೆಗೆ ಕುತ್ತು ತರುವಂತೆ ಕಾಣುತ್ತಿದೆ. 1999ರಲ್ಲಿ ನೈಜೀರಿಯಾದಲ್ಲಿ ಪ್ರಜಾಪ್ರಭುತ್ವ ಮತ್ತೆ ಸ್ಥಾಪಿತವಾದ ಮೇಲೆ ಇದು 6ನೇ ಚುನಾವಣೆಯಾಗಿದ್ದರೂ 2015ರಲ್ಲಿ ಬಿಟ್ಟರೆ ಪ್ರತಿ ಬಾರಿ ಸೋತ ಅಭ್ಯರ್ಥಿ ಎಂದೂ ಫಲಿತಾಂಶವನ್ನು ಒಪ್ಪಿಕೊಂಡಿರಲಿಲ್ಲ.

ನೈಜೀರಿಯಾ ಆಫ್ರಿಕಾದ ಬರಿಯ ಇನ್ನೊಂದು ದೇಶವಲ್ಲ. 20 ಕೋಟಿ ಜನಸಂಖ್ಯೆ ಇರುವ ಆಫ್ರಿಕಾದ ಅತಿ ಹೆಚ್ಚು ಜನಸಂಖ್ಯೆ ಇರುವ, ಮತ್ತು ಅತಿ ದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆ ಇರುವ ದೇಶವೂ ಹೌದು. ಪಶ್ಚಿಮ ಆಫ್ರಿಕಾದ ಸುಮಾರು ಅರ್ಧದಷ್ಟು (47%) ಜನ ನೈಜೀರಿಯಾದಲ್ಲಿ ವಾಸಿಸುತ್ತಾರೆ. ಅದು 36 ರಾಜ್ಯಗಳಿರುವ ಒಕ್ಕೂಟವಾಗಿದ್ದು, ಅಧ್ಯಕ್ಷೀಯ ಮಾದರಿಯ ಪ್ರಜಾಪ್ರಭುತ್ವ ವ್ಯವಸ್ಥೆ ಹೊಂದಿದೆ. 4 ವರ್ಷಕ್ಕೊಮ್ಮೆ ಪಾರ್ಲಿಮೆಂಟಿನ ಎರಡೂ ಸದನಗಳಿಗೂ (109 ಸದಸ್ಯರ ಮೇಲುಸದನ ಮತ್ತು 360 ಸದಸ್ಯರ ಕೆಳಸದನ) ಚುನಾವಣೆ ನಡೆಯುತ್ತದೆ. ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರನ್ನು ಸುಮಾರು ಸಮಸಂಖ್ಯೆಯಲ್ಲಿ ಮತ್ತು 300 ಬುಡಕಟ್ಟು ಗುಂಪುಗಳನ್ನು ಹೊಂದಿದೆ.

ನೈಜೀರಿಯಾ ಆಫ್ರಿಕಾದ ಅತಿ ದೊಡ್ಡ ತೈಲ ರಫ್ತುದಾರ ದೇಶವಾಗಿದ್ದು, ಆಫ್ರಿಕಾ ಖಂಡದ ಅತ್ಯಂತ ದೊಡ್ಡ ಪ್ರಾಕೃತಿಕ ಅನಿಲ ನಿಧಿ ಹೊಂದಿರುವ ದೇಶವಾಗಿದೆ. ಆದರೂ ಮಾನವ ಅಭಿವೃದ್ಧಿ ಸೂಚಕದಲ್ಲಿ 199 ದೇಶಗಳಲ್ಲಿ ಅತಿ ಕೆಳಗೆ ಅಂದರೆ 159ನೇ ಸ್ಥಾನದಲ್ಲಿದೆ.

ಆದರೆ ಈ ಎರಡೂ ಅಭ್ಯರ್ಥಿಗಳೂ ನಡು–ಬಲಪಂಥೀಯರಾಗಿದ್ದು ನವ–ಉದಾರವಾದದ ನೀತಿಗಳನ್ನು ಅನುಸರಿಸುವವರೇ ಆಗಿದ್ದಾರೆ. ಇಬ್ಬರೂ ತೈಲ ಬಹುರಾಷ್ಟ್ರೀಯ ಕಂಪನಿಗಳ ಬೆಂಬಲಿಗರೂ ಆಗಿದ್ದಾರೆ. ಇಬ್ಬರೂ ಖಾಸಗೀಕರಣ ಕಾರ್ಪೊರೆಟೀಕರಣದ ಸಮರ್ಥಕರೇ. ಬಡತನ, ನಿರುದ್ಯೋಗ ಹೋಗಲಾಡಿಸುವ ಅಭಿವೃದ್ಧಿ ಬಗೆಗೆ ಯಾವುದೇ ಧೋರಣೆ ಹೊಂದಿದವರಲ್ಲ. ಅವರ ಪಕ್ಷ ಮತ್ತು ವ್ಯಕ್ತಿತ್ವ ಮಾತ್ರ ಭಿನ್ನವಾಗಿರುವುದು. ಆದರೆ ಈ ವಿವಾದಾಸ್ಪದ ಚುನಾವಣೆಯ ನಂತರ ಪ್ರಜಾಸತ್ತೆಯ ಸುಭದ್ರತೆಯ ಬಗೆಗೆ ಆತಂಕವನ್ನು ಉಂಟು ಮಾಡಿದೆ.

JANASHAKTHI KANNADA VARA PATRIKE MARCH 4-10, 2019 Price: Rs. 10/- Date of Publication: 1 MARCH 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283



ಒಟ್ಟಿನಲ್ಲಿ ಈ ಚಿತ್ರಗಳು ನನ್ನನ್ನು ತಟ್ಟಿದ್ದು, ತೀರಾ ವಾಚ್ಯವಾಗದೆ ಅರ್ಥಪೂರ್ಣ ದೃಶ್ಯ-ಮಾತುಗಳ ಮೂಲಕವೇ – ಅವು ಉಂಟು ಮಾಡುವ ಹಲವು ಪದರುಗಳ ಹಲವು ಆಯಾಮಗಳ ಸಂಕೀರ್ಣ ವಾಸ್ತವತೆಯ ಆಳವಾದ ಅರಿವು-ಅನಿಸಿಕೆ, ಇನ್ನೂ ಉತ್ತಮವಾದ ಮಾನವೀಯ ಸಂಬಂಧಗಳಿರುವ ಸಮಾಜಕ್ಕಾಗಿ ತುಡಿಯುವ ಅವುಗಳಲ್ಲಿನ ಕನಸುಗಾರಿಕೆಯ ಸಾಮಾನ್ಯ ಎಳೆ.

– ವಸಂತರಾಜ ಎನ್.ಕೆ. –

ಬೆಂಗಳೂರು ಸಿನಿಮೋತ್ಸವದಲ್ಲಿ ನನ್ನನ್ನು ತಟ್ಟಿದ ಚಿತ್ರಗಳು

ಈಗ ಫಿಲಂ ಅಂದರೆ ಒಳಿತು-ಕೆಡಕು ಪ್ರೇಮ-ದ್ವೇಷ ಮುಂತಾದ ಎಲ್ಲವನ್ನೂ ಕಪ್ಪು-ಬಿಳುಪು ಎಂಬ ಕೇವಲ ಎರಡು ಆಯಾಮಗಳಿಗೆ ಇಳಿಸಿ ಸರಳೀಕರೀಸುವ, ಬಣ್ಣ ಬಣ್ಣದ ಕನಸುಗಳ ಗ್ರಾಹಕರನ್ನಾಗಿಸುವ, ಇಹಲೋಕದ ಬವಣೆಗಳನ್ನು ಮರೆತು ಭ್ರಮಾಲೋಕಕ್ಕೆ ಒಯ್ಯುವತಹದ್ದು ಎಂದೇ ಆಗಿಬಿಟ್ಟಿದೆ. ಎಲ್ಲ ದೇಶಗಳ ಎಲ್ಲ ಭಾಷೆಗಳ 'ಮುಖ್ಯಧಾರೆ' ಎನಿಸಿಕೊಳ್ಳುವ ಫಿಲಂಗಳ ವ್ಯಾಪಕತೆ, ಇದನ್ನು ಬಿಟ್ಟರೆ ಬೇರೆನೂ ಸಾಧ್ಯವಿಲ್ಲ ಎಂಬ ಭ್ರಮೆ ಸೃಷ್ಟಿಸಿವೆ. ಅದರಿಂದ ಹೊರಬರುವ ಪ್ರಯತ್ನಗಳು ನಡೆದಿಲ್ಲವೆಂದಲ್ಲ. ಆದರೆ ಅವುಗಳನ್ನು ಜನ ತಿರಸ್ಕರಿಸುತ್ತಾರೆ ಎಂದೋ, ಅವು ಕೆಲವೇ ಸಿನಿಮಾ ಹುಚ್ಚರಿಗೆ ಸೀಮಿತ ಎಂದೋ, ಅವುಗಳ ನಿರ್ಮಾಣ ಅಸಾಧ್ಯವೆಂದೋ ಹೇಳಲಾಗುತ್ತದೆ. ಜಗತ್ತಿನಾದ್ಯಂತ ನಡೆಯುವ ಜಾಗತಿಕ ಸಿನಿಮೋತ್ಸವಗಳು ಈ ಧೋರಣೆಗೆ ಸವಾಲೊಡ್ಡುತ್ತಾ ಬಂದಿವೆ. ಭಾರತದ ಹಲವು ನಗರಗಳಲ್ಲಿ ನಡೆಯುತ್ತಿದ್ದ ಸಿನಿಮೋತ್ಸವ ಈಗ ಬೆಂಗಳೂರಿಗೂ ಬಂದಿದ್ದು ಇತ್ತೀಚೆಗೆ ಫೆ.21 ರಿಂದ 28 ನಡೆದ 11ನೇ ಉತ್ಸವದೊಂದಿಗೆ ಬಲವಾಗಿ ಬೇರೂರಿದೆ. ವರ್ಷದಿಂದ ವರ್ಷಕ್ಕೆ ಏರುತ್ತಾ ವೈವಿಧ್ಯಮಯ ಪ್ರೇಕ್ಷಕ ವಿಭಾಗಗಳನ್ನು ಒಳಗೊಳ್ಳುತ್ತಾ ಬಂದಿರುವ ಸಿನಿಮೋತ್ಸವ ನಿಧಾನವಾಗಿಯಾದರೂ ಈ ಭ್ರಮೆಯನ್ನು ಒಡೆಯುತ್ತಿದೆ.

ಈ 11ನೇ ಬೆಂಗಳೂರು ಅಂತರ್ರಾಷ್ಟ್ರೀಯ ಸಿನಿಮೋತ್ಸವದಲ್ಲಿ ನಾನು ನೋಡಿದ ನನ್ನನ್ನು ತಟ್ಟಿದ ಕೆಲವು ಫಿಲಂಗಳ ಬಗೆಗೆ ಕೆಲವು ಟಿಪ್ಪಣಿಗಳು.

ಶಾಪ್‌ಲಿಫ್ಟರ್ಸ್

ಈ ಬಾರಿಯ ಸಿನಿಮೋತ್ಸವದಲ್ಲಿ ನನ್ನನ್ನು ಅತ್ಯಂತ ಗಾಢವಾಗಿ ತಟ್ಟಿದ ಜಪಾನಿ ಫಿಲಂ ಇದು. ಜಪಾನಿ ಮಾತ್ರವಲ್ಲ ಯಾವುದೇ ಅಭಿವೃದ್ಧ ದೇಶಗಳ ಫಿಲಂಗಳಲ್ಲಿ ಆಯಾ ಸಮಾಜದ ಕೆಳಹಂತದಲ್ಲಿ ಅಂಚಿನಲ್ಲಿ ಬದುಕುತ್ತಿರುವ ಬಡವರ ಬಗ್ಗೆ ಫಿಲಂಗಳು ಅಪರೂಪ. ಕೆಲವು ಬಡವರ ಪಾತ್ರಗಳು ಬಂದು ಹೋಗಬಹುದು ಅಷ್ಟೇ. ಆದರೆ ಇದು ಜಪಾನಿನ ನಗರವೊಂದರಲ್ಲಿ ಬಿಲದಂತಿರುವ ಚಿಕ್ಕ ಮನೆಯಲ್ಲಿ 'ಕಾನೂನುಬಾಹಿರ'ವಾಗಿ ವಾಸಿಸುತ್ತಿರುವ ಒಂದು ಕಡು ಬಡಕುಟುಂಬದ ಮೇಲೆ ಕೇಂದ್ರಿತವಾದ ಫಿಲಂ. ತನ್ನ ಸಣ್ಣ ಮಾಸಿಕ ವೃದ್ಧಾಪ್ಯ ಪೆನ್ಶನ್ ಮೇಲೆ ಕುಟುಂಬ ನಡೆಯುತ್ತಿದೆ ಎನ್ನುವ ಎಲ್ಲರ 'ಅಜ್ಜಿ', ಆಗೊಮ್ಮೆ ಈಗೊಮ್ಮೆ ಕೆಲಸ ಸಿಕ್ಕಾಗ ಕಟ್ಟಡ ನಿರ್ಮಾಣದಲ್ಲಿ ಕೆಲಸ ಮಾಡುವ 'ಗಂಡ', ಡ್ರೆಸ್ ಕಾರ್ಖಾನೆಯಲ್ಲಿ ಕೆಲಸ ಮಾಡುವ 'ಹೆಂಡತಿ', ಸೆಕ್ಸ್ 'ಕ್ಯಾಮ್ ಶೋ'ನಲ್ಲಿ ಕೆಲಸ ಮಾಡುವ 'ತಂಗಿ', ತಾವಾಗಿಯೇ ಕಲಿಯಲಾರದವರು ಮಾತ್ರ ಸ್ಕೂಲಿಗೆ ಹೋಗ್ತಾರೆ ಎನ್ನುವ 'ಮಗ'. ಆದರೆ ಫಿಲಂ ಮುಂದುವರೆದಂತೆ ತಿಳಿಯುವಂತೆ 'ಅಜ್ಜಿ' ಯಾರದ್ದೂ ಅಜ್ಜಿಯಲ್ಲ. ಗಂಡ-ಹೆಂಡತಿ ಮದುವೆಯಾದವರಲ್ಲ. 'ತಂಗಿ' 'ಹೆಂಡತಿ'ಯ ತಂಗಿಯಲ್ಲ. 'ಮಗ' 'ಗಂಡ-ಹೆಂಡತಿ' ಯ ಮಗನಲ್ಲ. ಅವರೆಲ್ಲರಿಗೆ ಸಾಮಾನ್ಯವಾದದ್ದು ಪ್ರಧಾನವಾಗಿ ಅವರು ಸೂಪರ್ ಸ್ಟೋರಿನಿಂದ ಅವರಿಗೆ ಬೇಕಾದ ಸಾಮಾನುಗಳನ್ನು 'ಕೈಚಳಕ' ಮತ್ತು ಪರಸ್ಪರ ಸಹಕಾರಗಳಿಂದ 'ಎತ್ತು'ತ್ತಾರೆ ಎನ್ನುವುದು. ಇದೊಂದು 'ಶಾಪ್‌ಲಿಫ್ಟರ್ಸ್ ಕುಟುಂಬ'.

ಹಾಗಂತ ಒಂದು ಕುಟುಂಬದಲ್ಲಿ ಇರಬೇಕಾದ ಆದರೆ ಅಪರೂಪವಾಗಿ ಇರುವ ಸ್ನೇಹ, ಸಲಿಗೆ, ಪ್ರೇಮ, ಸಹಕಾರ, ಅನುಕಂಪದ ಬಲವಾದ ಬಂಧಗಳಿಗೆ ಇಲ್ಲಿ ಯಾವುದೇ ಕೊರತೆಯಿಲ್ಲ. ಈ ಕುಟುಂಬ ಬರಿಯ ಕಳ್ಳತನದ ಮೇಲೆ ಬದುಕುವಂಥದ್ದಲ್ಲ. ಶಾಪ್ ಲಿಫ್ಟಿಂಗ್' ಕೆಲಸದ ಆದಾಯವನ್ನು ಖರ್ಚಿಗೆ ಸರಿತೂಗಿಸುವ ಸಾಧನವಷ್ಟೇ. 'ಸೂಪರ್ ಸ್ಟೋರ್'ನಲ್ಲಿ ಇದ್ದದ್ದು 'ಯಾರದ್ದೂ' ಅಲ್ಲ. (ಅಂದರೆ 'ಎಲ್ಲರದ್ದೂ' ಎನ್ನದಿದ್ದರೂ ಅದೇ ಆಶಯ) ಆದ್ದರಿಂದ ಅಲ್ಲಿಂದ ನಮಗೆ ಬೇಕಾದ್ದು ತೆಗೆದುಕೊಳ್ಳುವುದು ಕಳ್ಳತನ ಅಲ್ಲ ಎನ್ನುವುದು ಅವರ ಫಿಲಾಸಫಿ! ಇಂತಹ ಕುಟುಂಬ ಕೆಲವು ಬೀದಿಗಳಾಚೆಗೆ ಇರುವ ತನ್ನ ಅಪ್ಪ-ಅಮ್ಮಂದಿರ ನಿರ್ಲಕ್ಷ ದೌರ್ಜನ್ಯಗಳಿಂದ ಹಸಿವು-ಪ್ರೇಮದ ಅಭಾವದಿಂದ ನೊಂದಿರುವ ಪುಟ್ಟ ಹುಡುಗಿಯನ್ನು ರಕ್ಷಿಸಿ ಮನೆಗೆ ಕರೆತರುವ ರಿಸ್ಕ್ ತೆಗೆದುಕೊಂಡು ಮನೆಗೆ ಕರೆತಂದು ಕುಟುಂಬದ ಭಾಗವಾಗಿಸುತ್ತದೆ. ಆ ಮೂಲಕ ತಾನು ಯಾವುದೇ ಇತರ ಸರಾಸರಿ ಕುಟುಂಬಕ್ಕಿಂತ ಮಾನವೀಯ ಬಂಧದಲ್ಲಿ ಒಂದು ಹಿಡಿ ಹೆಚ್ಚು ಎಂದು ತೋರಿಸುತ್ತದೆ. ಆ ಬಾಲಕಿಯ ಬಗ್ಗೆ 'ಕಳೆದು ಹೋಗಿದ್ದಾಳೆ' ಎಂಬ ಟಿವಿ ಜಾಹೀರಾತು ಮತ್ತು ಆ ಬಗ್ಗೆ ಪೊಲಿಸ್ ತನಿಖೆ, 'ಅಜ್ಜಿ' ಸತ್ತು ಅಧಿಕೃತ ಮಾಹಿತಿ ಕೊಡದೆ ದಫನ್ – ಇವೆರಡನ್ನೂ 'ಕುಟುಂಬ' ಐಕ್ಯತೆ ಸಹಕಾರಗಳಿಂದ ನಿರ್ವಹಿಸುತ್ತದೆ. ಆದರೆ 'ಮಗ' ಶಾಪ್ ಲಿಫ್ಟಿಂಗ್' ಕೈಚಳಕದಲ್ಲಿ ಸಿಕ್ಕಿಹಾಕಿಕೊಂಡಾಗ, ಪೋಲಿಸ್ ಪ್ರತಿಯೊಬ್ಬರ ಪ್ರತ್ಯೇಕ ವಿಚಾರಣೆ ನಡೆಸಿ 'ಕಾನೂನು ಪ್ರಕಾರ' ಶಿಕ್ಷೆ ಕೊಟ್ಟು ಕುಟುಂಬವನ್ನು ಒಡೆಯುತ್ತದೆ. ಪುಟ್ಟ ಹುಡುಗಿಯ 'ಅಪಹರಣ'ದ ಅಪರಾಧವೂ ಅದರಲ್ಲಿ ಸೇರಿಕೊಂಡಿರುತ್ತದೆ. ಅವಳನ್ನು ನಿರ್ಲಕ್ಷ ದೌರ್ಜನ್ಯ ಹಸಿವು-ಪ್ರೇಮದ ಅಭಾವಕ್ಕೊಳಪಡಿಸಿದ ಅವಳ 'ಕಾನೂನುಬದ್ಧ' ಕುಟುಂಬಕ್ಕೆ ವಾಪಸಾಗಿಸುತ್ತದೆ. 'ಮಗ'ನನ್ನು ಬೋರ್ಡಿಂಗ್ ಸ್ಕೂಲಿಗೆ ಒಪ್ಪಿಸುತ್ತದೆ. 'ಹೆಂಡತಿ'ಯನ್ನು ಜೈಲಿಗೆ ಹಾಕುತ್ತದೆ. ಇದಿಷ್ಟು ಕಥಾಹಂದರವಷ್ಟೇ.

ಆದರೆ ಫಿಲಂನ ನಿಜವಾದ ಗಟ್ಟಿತನ ಇರುವುದು – ಅದರ ಹಲವು ಆಯಾಮಗಳ, ಹಲವು ಪದರಗಳ ವಾಸ್ತವತೆಯನ್ನು ಕಾಡುವ ದೃಶ್ಯ ನಿರೂಪಣೆ, ಅರ್ಥಪೂರ್ಣ ಮಾತುಗಳ ಮೂಲಕ ಅನಾವರಣಗೊಳಿಸುವುದರಲ್ಲಿ. ಜಪಾನಿನಂಥ ಸಮೃದ್ಧ ಸಮಾಜದಲ್ಲಿ ಇಂತಹ ಬಡತನ ಯಾಕಿದೆ? ಯಾವುದು ಕಳ್ಳತನ? ಕುಟುಂಬ ಅಂದರೆ ಜೈವಿಕ ಸಂಬಂಧ ಮಾತ್ರವೇ? ಎಂಬ ಹಲವು ಆಯಾಮಗಳ ಹಲವು ಪದರಗಳ ಪ್ರಶ್ನೆಗಳನ್ನು ಎಬ್ಬಿಸುವುದರಲ್ಲಿ. ಹಲವರನ್ನು ಅಂಚಿಗೆ ತಳ್ಳುವುದು ಮಾತ್ರವಲ್ಲ, ಅಂಚಿನಲ್ಲಿದ್ದವರನ್ನು ಇನ್ನಷ್ಟು ಅಂಚಿಗೆ ತಳ್ಳುವ, ಕಾನೂನು ಮೂಲಕ ಮಾತ್ರ ಕಾಣುವ ಮಾನವೀಯತೆಗೆ ಕುರುಡಾಗಿರುವ ಹಾಗೂ ಕುಟುಂಬಗಳ ಮಾನವೀಯ ಸಂಬಂಧಗಳನ್ನು ಒಡೆದು ಹಾಕುವ ಬಂಡವಾಳಶಾಹಿ ಸಮಾಜದ ಹೃದಯಹೀನತೆಯ ನಿರೂಪಣೆಯಲ್ಲಿ. ಬಹಳ ಕಾಲ ಕಾಡುವ ಚಿತ್ರ ಇದು.

ಅಟ್ ವಾರ್

ಮೂಲ ಕಂಪೆನಿಯಾಗಿ ಜರ್ಮನಿಯಲ್ಲಿ ಕುಳಿತು ಫ್ರಾನ್ಸ್ ನ ಏಜೆನ್ ನಗರದಲ್ಲಿ ಮೋಟಾರುವಾಹನಗಳ ಬಿಡಿಭಾಗಗಳನ್ನು ತಯಾರಿಸುವ ತಮ್ಮ ಅಂಗ ಸಂಸ್ಥೆಯಾದ ಪೆರ್ರಿನ್ ನ 1100 ಶ್ರಮಿಕರು ತಮ್ಮ ಮತ್ತು ತಮ್ಮನ್ನು ನೆಚ್ಚಿಕೊಂಡ ಕುಟುಂಬಗಳ 4000 ಜನರ ಬದುಕಿಗಾಗಿ, ನಾಗರಿಕ ವ್ಯಕ್ತಿಗಳಾಗಿ ತಮ್ಮ ಘನತೆಗಾಗಿ ಮುಷ್ಕರದ ಬಗೆಗಿನ ಫಿಲಂ ಇದು. ಇದರ ವಿವರವಾದ ಪರಿಚಯ 'ಜನಶಕ್ತಿ'ಯ 2018ರ ಸಂಚಿಕೆ 51 (ಡಿಸೆಂಬರ್ 3 ನೇ ವಾರ) ರಲ್ಲಿ ಪ್ರಕಟವಾಗಿತ್ತು. "ಹೋರಾಟದಲ್ಲಿ ತೊಡಗಿದವನು ಸೋಲಬಹುದು, ಆದರೆ ಹೋರಾಡದವನು ಆಗಲೇ ಸೋತಿರುತ್ತಾನೆ' ಎಂಬ ಹೇಳಿಕೆಯೊಂದಿಗೆ, ಆರಂಭವಾಗುವ ಈ ಚಿತ್ರವು ಆ ಬರಹದಲ್ಲಿ ಹೇಳಿದಂತೆ 'ರೊಮ್ಯಾಂಟಿಕ್ ಆಶಾವಾದಿತನದ ಆಕಾಶದಲ್ಲಿ ಕನಸು ಕಾಣದೆ ಈ ವಾಸ್ತವದ ಗಟ್ಟಿನೆಲದಲ್ಲಿ ಕಾಲುಗಳನ್ನು ಊರಿ ಬಂಡವಾಳದ ಹೃದಯಹೀನ ಉಕ್ಕಿನ ವಾಸ್ತವವನ್ನು ಶ್ರಮಿಕರ ಐಕ್ಯತೆಯ ವಜ್ರದಿಂದ ಎದುರಿಸಬೇಕೆಂದು ಹೇಳುತ್ತದೆಯೇ ಹೊರತು ನಿರಾಸೆ-ಹತಾಶೆಗಳ ಸಂದೇಶವನ್ನಲ್ಲ.' ಎಲ್ಲಾ ಕಾರ್ಮಿಕರು, ಎಡಪಂಥೀಯರು ನೋಡಲೇಬೇಕಾದ ತೋರಿಸಬೇಕಾದ ಫಿಲಂ ಇದು.

'ವಿಲ್ಲಾ ಡ್ವೆಲ್ಲರ್ಸ್' ಮತ್ತು 'ವಿಡೋ ಆಫ್ ಸೈಲೆನ್ಸ್' – ಅದು 'ರಾಷ್ಟ್ರೀಯ ಹೆಮ್ಮೆ' ಎತ್ತಿ ಹಿಡಿಯುವ ಅಥವಾ ಭಯೋತ್ಪಾದನೆಯ ವಿರುದ್ಧ ಯುದ್ಧವಾಗಿರಲಿ ಅಥವಾ ಧರ್ಮಯುದ್ಧವಾಗಿರಲಿ, ಅದರಲ್ಲಿ ಯಾರೇ ಗೆಲ್ಲಲಿ ಸೋಲಲಿ – ಯುದ್ಧದ ಮೊದಲ ಬಲಿಪಶುಗಳು ಮಹಿಳೆಯರು ಮತ್ತು ಯುದ್ಧ ಅರ್ಥಹೀನ ಎಂಬುದನ್ನು ಮನೋಜ್ಞವಾಗಿ ಸಾರುವ ಚಿತ್ರಗಳು. ಯುದ್ಧದ ಉದ್ರೇಕವನ್ನು ಹರಡುತ್ತಿರುವ ಅದಕ್ಕೆ ಒಳಗಾಗುತ್ತಿರುವ ಎಲ್ಲರಿಗೂ ತೋರಿಸಲೇಬೇಕಾದ ಚಿತ್ರಗಳಿವು. 'ವಿಲ್ಲಾ ಡ್ವೆಲ್ಲರ್ಸ್' ಇರಾನ್-ಇರಾಕ್ 8 ವರ್ಷದ ಯುದ್ಧದಲ್ಲಿ ತಮ್ಮ ಗಂಡಂದಿರನ್ನು ಆಗಾಗ ಭೇಟಿಯಾಗುವ ಆಸೆಯೊಂದಿಗೆ ಅಪಾಯಕಾರಿಯಾದರೂ ಗಡಿ ಪ್ರದೇಶದಲ್ಲಿರುವ 'ವಿಲ್ಲಾ'ಗಳಲ್ಲಿ ವಾಸಿಸಲು ಮಕ್ಕಳೊಂದಿಗೆ ಬಂದ ಮಹಿಳೆಯರ ನೋವು-ನಲಿವುಗಳ ತುಮುಲಗಳ ಚಿತ್ರ. ವಾಹನ ಬಂದಾಗ ಗಂಡ ಬಂದನೇ ಎಂದು ಸಂಭ್ರಮ-ನಿರೀಕ್ಷೆಯಿಂದ ಎದುರುನೋಡುವ, ಪತ್ರ ಬಂದಾಗ ಆತಂಕದಿಂದ ಒಡೆಯುವ, ಎರಡೂ ಬರದಿದ್ದಾಗ ಬರಿಯ ಕಾಯುತ್ತಲೇ ಇರುವ, ವಿಮಾನ ದಾಳಿ ನಡೆದಾಗ ಬಾಂಬ್ ಶೆಲ್ಟರುಗಳಿಗೆ ಧಾವಿಸುವ ಹೃದಯ ವಿದ್ರಾವಕ ನಿರೂಪಣೆ ಯುದ್ಧದ ನಿರರ್ಥಕತೆಯನ್ನು ಕೂಗಿ ಸಾರಿ ಅಪಾಯದ ಸೈರನುಗಳಿಗಿಂತಲೂ ಗಟ್ಟಿಯಾಗಿ ಹೇಳುತ್ತದೆ.

'ವಿಡೋ ಆಫ್ ಸೈಲೆನ್ಸ್' ಕಾಶ್ಮೀರದ ಅರ್ಧ-ವಿಧವೆಯರ ಬದುಕಿನ ಗೋಳಿನ ಸಶಕ್ತ ಚಿತ್ರಣ. ಸೈನ್ಯ ಅಥವಾ ಜೆಹಾದಿ ಎಂದು ಹೇಳಿಕೊಳ್ಳುವ ಗುಂಪು ಕರೆದುಕೊಂಡು ಹೋಗಿ ಎಂದೂ ಬಾರದ ಪುರುಷರ ಹೆಂಡತಿಯರನ್ನು ಅರ್ಧ-ವಿಧವೆಯರೆಂದು ಕರೆಯಲಾಗುತ್ತದೆ. ಗಂಡ ಬದುಕಿದ್ದಾನೋ ಇಲ್ಲವೋ ಬದುಕಿದ್ದರೆ ಎಲ್ಲಿದ್ದಾನೆ ಎಂದು ಹುಡುಕಲು ಜೈಲುಗಳು ಕ್ಯಾಂಪುಗಳು ಸರಕಾರಿ ಕಚೇರಿಗಳಿಗೆ, ಅವರ ಹುಡುಕಾಟಕ್ಕೆ ಹುಟ್ಟಿಕೊಂಡ ಏಜೆಂಟರ ಬಳಿಗೆ ಅಲೆದು ಸುಸ್ತಾಗುವ, ಸಮಾಜದ ನಿರ್ಲಕ್ಷ

ಪುಟ 14 ಕ್ಕೆ



JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**